BUDGET ESTIMATES FOR 1964-65

Ceneral Discussion—(*continued*)

† ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಅಧ್ಯಕ್ಷರೇ, ಹಣಕಾಸಿನ ಪರಿಸ್ಥಿತಿ ಈ ರಾಜ್ಯದ್ದು ಹೇಗಿದೆ ಎಂದು ಹೇಳಿ ಅದನ್ನು ಚರ್ಚೆಮಾಡಿ ಈ ದೇಶವನ್ನು ನಾವು ಯಾವ ರೀತಿ ಮುಂದಕ್ಕೆ ನಡೆಸಬೇಕೆಂದೂ ಯಾವ ರೀತಿ ನಡೆಸಿಕೊಂಡು ಹೋಗುತ್ತಿದ್ದೇವೆ ಎಂದು ಹೇಳುತ್ತಾ ಆಡಳಿತದಲ್ಲಿರತಕ್ಕ ಪಕ್ಷ ನಮಗೆ ಒಂದು ಆಯವ್ಯಯಪಟ್ಟಿ ಮೂಲಕ ಅವರಿಗೆ ಬರತಕ್ಕ ಹಣ, ಅವರು ಖರ್ಚುಮಾಡತಕ್ಕ ಹಣ, ಮತ್ತು ಅವರು ಮಾಡತಕ್ಕಂಥ ಕೆಲಸ ದಾಸ್ತಾನು ಕೂಡ 7-8 ಪುಸ್ತಕಗಳಲ್ಲಿ ಪ್ರಿಂಟ್ ಮಾಡಿ ನಮ್ಮಗಳ ಕೈಯಲ್ಲಿ ಕೊಟ್ಟಿದ್ದಾರೆ. ಇದನ್ನೆಲ್ಲಾ ಓದಿ ಈ ರಾಜ್ಯ ಬಹಳ ಸುಭದ್ರವಾದ ಬುನಾದಿ ಮೇಲೆ ಇದೆಯೆಂದು ಹೇಳಬೇಕಾದರೆ ನೀವು ಕೊಟ್ಟಿರುವ 3-4 ದಿನಗಳಲ್ಲಿ ಏನೂ ಆಗುವುದಿಲ್ಲ. ಬಡ್ಜೆಟ್ ಪ್ರಿಪರೇಷನ್‌ಗೆ 6 ತಿಂಗಳುಗಳವರೆಗೂ ಕಾಲಾವಕಾಶ ತೆಗೆದುಕೊಳ್ಳುವಾಗ ಈಗ ಅದನ್ನು ಬಹಳ ಶೀಘ್ರವಾಗಿ ಇಟ್ಟಿದ್ದೀರಿ. ಬಡ್ಜೆಟ್ ಇಲ್ಲಿ ಮಂಡಿಸಿದ ಮೇಲೆ ಎಲ್ಲಾ ಪುಸ್ತಕಗಳನ್ನು ಈಗ ತೆಗೆದುಕೊಂಡು ಓದಬೇಕಾದರೆ ಕೊನೆಯಪಕ್ಷ 15 ದಿನಗಳಾದರೂ ಬೇಕು. ಈ 15 ದಿವಸಗಳಲ್ಲಿ ಈ ಸರ್ಕಾರದವರು ಏನೇನು ಮಾಡಿದ್ದಾರೆಂಬುದನ್ನು ತಿಳಿದುಕೊಂಡು ಚರ್ಚೆ ಮಾಡುವುದಕ್ಕೆ ಸಾಕಷ್ಟು ಅವಕಾಶವಿಲ್ಲ. ಇನ್ನು ಸಾಮಾನ್ಯ ಚರ್ಚೆ ಕಾಲದಲ್ಲಿ ಹಣಕಾಸಿನ ರೂಪರೇಖೆಗಳು ಹೇಗೆ, ರಾಜ್ಯದ ಅಭಿವೃದ್ಧಿ ಹೇಗೆ, ರಾಜ್ಯದ ಎಲ್ಲಾ ಕ್ಷೇತ್ರಗಳಲ್ಲಿ ಅಭಿವೃದ್ಧಿ ಸಾಧನ ಮಾಡಿದ್ದೇವೆಯೇ, ಅದರಿಂದ ಜನತೆಯ ಕಲ್ಯಾಣವನ್ನು ಎಷ್ಟರಮಟ್ಟಿಗೆ ಸಾಧಿಸಿದ್ದೇವೆಂಬುದನ್ನು ನಾವು ಈಗ ನೋಡಬೇಕಾಗಿದೆ. 1957 ರಿಂದ ಇವತ್ತಿನವರೆಗೂ ಕೂಡ 7 ಬಡ್ಜೆಟ್ಟುಗಳನ್ನು ನಾವು ಚರ್ಚೆ ಮಾಡಿದ್ದೇವೆ. 21 ಸಾರಿ ಸಪ್ಲಿಮೆಂಟರಿ ಗ್ರಾಂಟುಗಳನ್ನು ಕೊಟ್ಟಿದ್ದೇವೆ. ಈ 7 ವರ್ಷಗಳಲ್ಲಿ 3 ಯೋಜನೆಗಳನ್ನು ಮಾಡಿದ್ದೇವೆ. ಈ 3 ಯೋಜನೆಗಳಲ್ಲಿಯೂ ಹಣಕಾಸಿನ ಸಚಿವರು ಹೇಳಿದಹಾಗೆ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚುಮಾಡಿದಮೇಲೆ ಇವತ್ತು ಮಾನ್ಯ ಹಣಕಾಸಿನ ಪರಿಸ್ಥಿತಿ ಹೇಗೆ ಎಂದು ಹೇಳಿದರೆ ಅದರಲ್ಲಿ ಏನು ಕಾಣಿಸುತ್ತದೆಂದರೆ, ಅದನ್ನು ಒಡೆದು ನೋಡಿದರೆ ಅದರಲ್ಲಿ ಏನೂ ಇಲ್ಲ. ಹಣಕಾಸಿನ ಪರಿಸ್ಥಿತಿ ಬಗ್ಗೆ ಇವತ್ತು ಸರ್ಕಾರಕ್ಕೆ ನಾನು ನಿರ್ಭಯವಾಗಿ ಒಂದೇ ಖಚಿತವಾಗಿ ಹೇಳಬೇಕಾದರೆ ಸರ್ಕಾರ ಯಾವ ಒಂದ ದಿಶೆಯಲ್ಲಿ ಹೋಗುತ್ತಿದೆಎಂದರೆ ದೇಶದಲ್ಲಿರತಕ್ಕ ಸರ್ಕಾರದ ಬೊಕ್ಕಸವನ್ನು ಬರಿದು ಮಾಡಿ ದೇಶದ ಜನತೆಯನ್ನು ದಿವಾಳಿತನಕ್ಕೆ ಕರೆದುಕೊಂಡು ಹೋಗುತ್ತಿದೆಂದು ಹೇಳಿದರೆ ಅದೇನೂ ತಪ್ಪಾಗುವುದಿಲ್ಲ. ನಿನ್ನೆ ದಿನ ನನ್ನ ಸ್ನೇಹಿತರಾದ ಶ್ರೀಮಾನ್ ಬಸಪ್ಪನವರು ಮಾತನಾಡುತ್ತಾ ಅಪ್ಪರ್ ಕೃಷ್ಣಾ, ಘಟಪ್ರಭಾ, ಮಲಪ್ರಭಾ, ಆಲಮಟ್ಟಿ, ನಾರಾಯಣಪುರ, ಹಾರಂಗಿ, ಕಂಬದಕಡ, ಕಾವೇರಿ, ಈ ಯೋಜನೆಗಳನ್ನೆಲ್ಲಾ ತೆಗೆದುಕೊಂಡು ಈಗ ಕಟ್ಟಬೇಕಾದರೆ ನಿಜವಾಗಿ ಜನಗಳ ಮೇಲೆ ಯಾವುದಾದರೂ ಸುಂಕ ಹಾಕಬೇಕೆಂದು ಹೇಳಿದರು. ಅದಕ್ಕೆ ಮಂತ್ರಿಗಳು ಯಾವ ತೆರಿಗೆಯನ್ನು ಎಲ್ಲಿ ಹಾಕಬೇಕೆಂಬ ಬಗ್ಗೆ ಯಾವೊಂದು ಉತ್ತರವನ್ನೂ ಹೇಳಲಿಲ್ಲ. ಇವತ್ತಿನ ದಿವಸ ಇಂಡಿಯಾದೇಶದ ರಾಜ್ಯಗಳಲ್ಲಿ ಮೈಸೂರು ದೇಶದಲ್ಲಿ ನಾವು ಎಷ್ಟುದೂರ ತೆರಿಗೆಯನ್ನು ಹಾಕಿದ್ದೇವೆ, ತೆರಿಗೆಯ ಭಾರ ಎಷ್ಟು ದೂರ ಹೋಗಿದೆ, ನಾವು ಈಗಾಗಲೇ ಹೊತ್ತಿರತಕ್ಕ ತೆರಿಗೆ ನಾವು ಮಾಡಿರತಕ್ಕ ಸಾಲದ ಹಣವೆಷ್ಟು, ನಮ್ಮ ಸಿಬ್ಬಂದಿ ಎಷ್ಟು, ನಮ್ಮ ರಿಸೋರ್ಸಸ್ ಏನು—ಇದನ್ನೆಲ್ಲಾ ತೆಗೆದುಕೊಂಡರೆ ಇವರು ಸಾಧನೆ ಮಾಡಿರ ವುದೆಲ್ಲಾ ಇಷ್ಟೇ, ಕೇವಲ ಕೆಲವು ಹೈಸ್ಕೂಲುಗಳನ್ನು ತೆರೆದಿರುವುದು, 15 ಬಸ್ಸುಗಳನ್ನು ಜಾಸ್ತಿಮಾಡಿರುವುದು, 25 ನೌಕರಿಗಳನ್ನು ಭರ್ತಿಮಾಡಿರುವುದು, ಕೆಲವಾರು ಕೈಗಾರಿಕೆಗಳನ್ನು ಎರಡು ಲಕ್ಷದಿಂದ 4 ಲಕ್ಷದವರೆಗೆ ಖರ್ಚುಮಾಡಿ ಸ್ಥಾಪನೆಮಾಡಿರುವುದು, ಹರಿಜನರಿಗೆ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ 4 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿರುವುದು, ಸುಮಾರು ಐದಾರು ಜನ ಪದವೀದಾರರಿಗೆ ದೊಡ್ಡ ಉದ್ಯಮಗಳನ್ನು ಕೊಟ್ಟಿರುವುದು—ಇದೊಂದು ಸಾಧನೆಯೇ ? ಇವತ್ತಿನ ದಿವಸ ಕಾಂಗ್ರೆಸ್ಸಿನ ಪ್ರಭುತ್ವ, ಈ ರಾಜ್ಯವನ್ನು ಕಲ್ಯಾಣಮಾಡುವ ಈ ಕಾಂಗ್ರೆಸ್ ಪ್ರಭುತ್ವ ಭಾವನೆಯುಳ್ಳವರು ಡೆಮೋಕ್ರೆಟಿಕ್ ಸೋಷಿಯಾಲಿಸಂನ್ನು ಸಾಧನೆಮಾಡುವುದಕ್ಕೆ ನಿರ್ವೀರ್ಯತೆಯನ್ನು ಹೊಂದಿದ್ದಾರೆ. ಇವತ್ತಿನ ದಿವಸ ನಮ್ಮ ಆಹಾರ ಪರಿಸ್ಥಿತಿ ಬಗ್ಗೆ ತುಂಬಾ ಕಳವಳ ಪರಿಸ್ಥಿತಿಯನ್ನು ಉಂಟುಮಾಡುತ್ತಿದ್ದಾರೆ. ಹಣಕಾಸಿನ ಪರಿಸ್ಥಿತಿ ಇನ್ನೆರಡುವರ್ಷಗಳ ಕಾಲದವರೆಗೆ ಚೇತರಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲವೆಂದು ಉತ್ತರ ಹೇಳುತ್ತಿದ್ದಾರೆ. ಇವತ್ತಿನದಿವಸ ನಮ್ಮ ಹಣಕಾಸಿನ ಪರಿಸ್ಥಿತಿಯನ್ನು ಉತ್ತಮಗೊಳಿಸಬೇಕಾದರೆ ಜೋಗಿನ ಜನರೇಟಿಂಗ್ ಸ್ಟೇಷನ್ ಕಟ್ಟಿದರೆ ನಿಜವಾಗಿ ನಮ್ಮ ಹಣಕಾಸಿನ ಪರಿಸ್ಥಿತಿಯನ್ನು ದಿನೇ ದಿನೇ ಉತ್ತಮ ಪಡಿಸುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಖಂಡಿತ ಆಗುವುದಿಲ್ಲ. ಅದಕ್ಕೋಸ್ಕರ ಜುಲೈನಲ್ಲಿ ಅಥವಾ ಡಿಸೆಂಬರ್‌ನಲ್ಲಿ ಒಂದು ಜನರೇಟಿಂಗ್ ಸ್ಟೇಷನ್ ಪ್ರಾರಂಭಮಾಡು

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ತ್ತೇವೆ, ಮತ್ತೆ ಆರು ತಿಂಗಳಿಗೊದರಂತೆ ಪುನಃ ಪ್ರಾರಂಭವಾಗುತ್ತೇವೆಂದು ಹೇಳುತ್ತಿದ್ದಾರೆ. ಶರಾವತಿ ವಿದ್ಯುತ್ ಯೋಜನೆಯನ್ನು ಇನ್ನೂ ಸಂಪೂರ್ಣವಾಗಿ ಕೈಗೊಂಡಿಲ್ಲ. ಅವರು ಪ್ರತಿ ಯೊಂದಕ್ಕೂ ವೆಚ್ಚಮಾಡಿರತಕ್ಕ ಹಣವನ್ನು ಯಾವರೀತಿ ಹಿಂದಕ್ಕೆ ತೆಗೆದು ಕೊಳ್ಳಬೇಕೆಂಬುದನ್ನು ಯೋಚನೆಮಾಡುತ್ತಿದ್ದೇವೆಂಬುದಾಗಿ ಹೇಳಿದರು. ನಿಮ್ಮಲ್ಲಿ ಹಣವಿಲ್ಲ, ಪ್ಲಾನು ಎಕ್ಸ್‌ಪೆಂಡಿಚರ್ ಗೋಸ್ಕರವಾಗಿ ಏನೋ ಮಾಡುತ್ತಿದ್ದೇವೆಂದು ಈಗ ಹೇಳುವುದು, ಪುನಃ ಸಪ್ಲಿಮೆಂಟರಿ ಗ್ರ್ಯಾಂಟು ಗಳನ್ನು ತೆಗೆದ ಕೊಂಡು ಬಂದು ಅದನ್ನು ಒಪ್ಪಿಕೊಳ್ಳಿ ಎಂಬುದಾಗಿ ಹೇಳುತ್ತಾರೆ. ಈ ಬಗ್ಗೆ ನಿನ್ನೆ ಮೊನ್ನೆ ಅನೇಕ ಪ್ರಶ್ನೆಗಳು ಬಂದಾಗ್ಗೆ ಹಣಕಾಸಿನ ಮಂತ್ರಿಗಳು ಅವಕ್ಕೆ ಬೇಕಾದಷ್ಟು ಹಣವನ್ನು ಕೇಂದ್ರ ಸರ್ಕಾರದವರು ಕೊಡುತ್ತಾರೆ, ಇದು ಯಶಸ್ವಿಯಾಗಬೇಕಾದರೆ ಸುಮಾರು ಒಂದು ನೂರು ಕೋಟಿ ರೂಪಾಯಿಗಳು ಯೋಜನೆಯಾಗುತ್ತದೆ. ಆದರಲ್ಲಿ ಸುಮಾರು 80 ಕೋಟಿ ರೂಪಾಯಿ ಗಳಷ್ಟು ಖರ್ಚಾಗುತ್ತದೆ, ಅದಕ್ಕೋಸ್ಕರ ಈ ಹಣವನ್ನು ಅದೇ ರೀತಿಯಲ್ಲಿಯೇ ಸಾಧನೆ ಮಾಡ ಬೇಕಾಗಿದೆಯೇ ಹೊರತು ನಾವು ಹೇಳಿದಷ್ಟು ನಿರ್ದಿಷ್ಟವಾಗಿ ಹಣ ಖರ್ಚಾಗುವುದಿಲ್ಲ. ಸ್ವಲ್ಪ ಜಾಸ್ತಿ ಅಥವಾ ಕಮ್ಮಿಯಾಗಬಹುದೆಂದು ಹೇಳಿದರು. ನಮ್ಮ ಕೈಲಿ ಕೊಟ್ಟಿರತಕ್ಕ ಬಡ್ಜೆಟ್ ಮೆಮೊ ರ್‍ಯಾಂಡಂ, ಎರಡು ಭಾಷಣಗಳು' 1964-65 ನೇ ಸಾಲಿನ ಬಡ್ಜೆಟ್ ಅಂಕಿ ಅಂಶಗಳು, ಇವನ್ನೆಲ್ಲಾ ಓದಿ ನೋಡಿದರೆ ರಾಜ್ಯದ ಹಣಕಾಸಿನ ಪರಿಸ್ಥಿತಿ ಎಷ್ಟರಮಟ್ಟಿಗೆ ಇದೆಯೆಂಬುದು ಗೊತ್ತಾಗುತ್ತದೆ. ಇವತ್ತಿನ ದಿವಸ ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿ ನೆರೆಹೊರೆಯ ರಾಜ್ಯಗಳ ಹಣಕಾಸಿನ ಪರಿಸ್ಥಿತಿಗಿಂತ ಎಷ್ಟು ಹೀನಾಯಕವಾಗಿದೆಂಬುದನ್ನು ಅರಿತುಕೊಂಡು ನೋಡಿದರೆ ಇವತ್ತಿನ ದಿವಸ ಇವರು ಈ ರಾಜ್ಯದ ಕಲ್ಯಾಣವಾಗುವುದಕ್ಕಾಗಿ ಏನು ಕೆಲಸ ಮಾಡಿದರೂ ಅದರಿಂದೇನೂ ಫಲ ಇದು ವರೆಗೂ ದೊರೆತಿಲ್ಲವೆಂದು ಹೇಳಬಹುದು. ಹಣಕಾಸಿನ ಪರಿಸ್ಥಿತಿ ಬಹಳ ಶೋಚನೀಯವಾಗಿದೆ, ಬಹಳ ಕಷ್ಟದಲ್ಲಿ ಸಿಗಿರಿದ್ದಾರೆಂದು ಹೇಳಬಹುದು. ಸಾಮಾನ್ಯವಾಗಿ ಈ ಓಲ್ಡ್ ಏಜ್ ಪೆನ್ಷನ್ ಎಂದು ಒಬ್ಬನಿಗೆ 5 ರೂಪಾಯಿಗಳನ್ನು ಕೊಡುತ್ತಾರೆನ್ನೋಣ. ಮತ್ತೆ ಇನ್ನೊಬ್ಬನಿಗೆ ಇಂಕ್ರಿ ಮೆಂಟ್ ಕೊಡುತ್ತೇನೆನ್ನುವುದು ಅದನ್ನು ಮಾಡುತ್ತೇನೆ, ಇದನ್ನು ಮಾಡುತ್ತೇನೆಂದು ಹೇಳಿ ಪುನಃ ಕಾಯಿದೆಮೇಲೆ ಇನ್ನೊಂದ ಬರೆ ಹಾಕುತ್ತಾರೆ. ಜನತೆಗೆ ಈ ಸರ್ಕಾರ ಕೊಡತಕ್ಕ ಆಶ್ವಾಸನೆಗಳು ಎಲ್ಲವೂ ಮೈಸೂರಿನ ಕೋಟಿ 40 ಲಕ್ಷ ಜನಗಳಿಗೆ ಈಡೇರದೆ ಇರುವುದರಿಂದ ಅವರಲ್ಲಿ ಬೇಸರ ಹುಟ್ಟಿದೆ ಮತ್ತು ಇವರ ಕೆಲಸಕಾರ್ಯಗಳಲ್ಲಿ ಅವರಿಗೆ ನಿರಾಶೆಯನ್ನುಂಟು ಮಾಡಿದೆ. ನೀರು ಕುಡಿ ದಾದರೂ ದಾಹ ಅಡಗಿಸಿಕೊಳ್ಳುವಂತಾಗಿದೆ. ಇವರು ಹಾಕತಕ್ಕ ಧ್ಯೇಯಧೋರಣೆಗಳಿಂದ ನಿಜವಾಗಿ ದೇಶದ ಕಲ್ಯಾಣವಾಗುವುದಿಲ್ಲವೆಂಬುದಾಗಿ ನಾನು ಸರ್ಕಾರಕ್ಕೆ ಹೇಳುತ್ತೇನೆ. ಇವತ್ತಿನ ದಿವಸ ಅಧಿಕಾರದಲ್ಲಿರತಕ್ಕ ಯಾವ ವ್ಯಕ್ತಿಯೇ ಆಗಲೀ ಅಧಿಕಾರಕ್ಕೆ ಬಂದಮೇಲೆ ಈ ಕಾಂಗ್ರೆಸ್ ಪ್ರಭುತ್ವದಲ್ಲಿ 1947 ರಿಂದ ಈ ಮೂರನೆಯ ಪಾಂಚವಾರ್ಷಿಕ ಯೋಜನೆಯ ಅಂತ್ಯದೊಳಗಾಗಿ ಸಾಧಿಸಿರತಕ್ಕದ್ದು ಏನೆಂಬುದನ್ನು ನೋಡಿದರೆ ನಿಜವಾಗಿ ದೇಶದ ಹಣಕಾಸಿನ ಪರಿಸ್ಥಿತಿ ಚೆನ್ನಾಗಿಲ್ಲ, ಕೈಗಾರಿಕೆ ಅಭಿವೃದ್ಧಿಯಾಗಿಲ್ಲ, ವ್ಯವಸಾಯಾಭಿವೃದ್ಧಿಯಾಗಿಲ್ಲ, ಕೇವಲ ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಇವರು ತೆಗದಿರತಕ್ಕ ಕೆಲವು ಹೈಸ್ಕೂಲುಗಳನ್ನು ಬಿಟ್ಟರೆ ಮತ್ತೇನೂ ನಡೆದಿಲ್ಲವೆಂದು ಹೇಳಬಹುದು. 3ನೇ ಪಾಂಚವಾರ್ಷಿಕ ಯೋಜನೆಯಲ್ಲಿ ಹೈಸ್ಕೂಲುಗಳನ್ನು ಕಟ್ಟುವುದು ಒಂದು ದೊಡ್ಡ ಯೋಜನೆ ಯಾಗಿದೆ. ಇದೆಲ್ಲಾ ಬರೀ ಜೊಳ್ಳು ವಾದವಾಗಿ ಹೋಗಿದೆ. ಇದರಿಂದ ನಿಜವಾಗಿ ರಾಜ್ಯದ ಪ್ರಗತಿ ಸಾಧನೆಯಾಗುವುದಿಲ್ಲ, ಇನ್ನು ರಾಜ್ಯಪಾಲರ ಭಾಷಣದಲ್ಲಿಯೂ ಮತ್ತು ಹಣಕಾಸಿನ ಮಂತ್ರಿಗಳ ಬಡ್ಜೆಟ್ ಭಾಷಣದಲ್ಲಿಯೂ ಕೈಗಾರಿಕೆಗಳ ಅಭಿವೃದ್ಧಿಯಿಂದ ಎಷ್ಟೋ ಹಣ ಬರುತ್ತ ದೆಂದು ಹೇಳಿದ್ದಾರೆ. ಮೆಮೊರ್‍ಯಾಂಡಂನಲ್ಲಿಯೂ ಹೇಳಿದ್ದಾರೆ. ನಾನು ಆಗ ಕೂಡಲೆ ಕೈಗಾರಿ ಕೆಯ ಪ್ರಗತಿ ನಮ್ಮ ರಾಜ್ಯದಲ್ಲಿ ಎಷ್ಟರಮಟ್ಟಿಗೆ ಆಗಿದೆ ಎಂಬುದನ್ನು ಕಣ್ಣಿನಲ್ಲಿ ಕಣ್ಣನಿಟ್ಟು ನೋಡಿ ದ್ದೇನೆ. ಆದರೆ ಮದ್ರಾಸ್ ರಾಜ್ಯಕ್ಕಿಂತ ನಾವು ಮುಂದುವರಿದಿಲ್ಲವೆಂದು ಹೇಳಬಹುದು. ಮದ್ರಾಸ್ ರಾಜ್ಯ ಅಷ್ಟು ತೀವ್ರಗತಿಯಿಂದ ಮುಂದೆ ಹೋಗುವುದಕ್ಕೆ ಕಾರಣವೇನೆಂದು ನೋಡಿದರೆ ಅದರ ಪಕ್ಕದಲ್ಲಿ ಇರತಕ್ಕ ನೀರಾವರಿ ಸೌಲಭ್ಯಗಳು, ಮತ್ತು ಇತರ ಅನುಕೂಲತೆಗಳೇ ಕಾರಣವೆಂದು ಈ ಸಂದರ್ಭದಲ್ಲಿ ಹೇಳಬಹುದು. ಆದರೆ ನಮ್ಮ ಈ ರಾಜ್ಯದಲ್ಲಿ ಇದರಲ್ಲಿ ಏನು ತಪ್ಪಿದೆ ಎಂಬ ಬಗ್ಗೆ ಮೂಲ ಕಾರಣವನ್ನು ಕಂಡುಹಿಡಿಯದೇ ಇದ್ದರೆ ರಾಜ್ಯದ ಪ್ರಗತಿ ಖಂಡಿತ ಆಗುವುದಿಲ್ಲ. ಈಗ ನಮ್ಮ ರಾಜ್ಯಕ್ಕೆ ಕೊಟ್ಟಿರತಕ್ಕಂಥ ಅಲ್ಯೂಮಿನಿಯಂ ಫ್ಯಾಕ್ಟರಿ, ಫರ್ಟಿಲೈಸರ್ಸ್ ಫ್ಯಾಕ್ಟರಿ, ಆಯಿಲ್ ರಿಫೈ ನರಿ—ಈ ಮೂರು ಕೈಗಾರಿಕೆಗಳನ್ನು ತೆಗೆದುಹಾಕಿ ಮೂರನೆಯ ಪಾಂಚವಾರ್ಷಿಕ ಯೋಜನೆಯ ಒಂದೊಂದು ಹೊಸ ಕೈಗಾರಿಕೆಯನ್ನು ಸ್ಥಾಪನೆಮಾಡುವುದಕ್ಕೆ ಯೋಚನೆಮಾಡುತ್ತಿದ್ದಾರೆ. ಸರ್ಕಾರೀ ವಿದ್ಯುಚ್ಛಕ್ತಿ ಕಾರ್ಖಾನೆಯೊಂದನ್ನು ಮಾತ್ರ ತಮ್ಮ ಭಾಷಣದಲ್ಲಿ ಹೇಳಿದ್ದಾರೆಯೇ

ಹೊರ್ತು ಮತ್ತೇನೂ ಇಲ್ಲ. ಹಾಸ್ಪೇಟ್‌ಯಲ್ಲಿ ಒಂದು ಕೈಗಾರಿಕೋದ್ಯಮವನ್ನು ಮತ್ತು ಸಾಂಡೂರಿನಲ್ಲಿ ಸ್ಥಾಪನೆಮಾಡುವ ಕಬ್ಬಿಣ ಕಾರ್ಖಾನೆ, ಎಲ್ಲಿ ಮಾಯವಾಯಿತೋ ಗೊತ್ತಿಲ್ಲ. ಆದರೆ ಇವತ್ತು ಸರ್. ಎಂ. ವಿಶ್ವೇಶ್ವರಯ್ಯನವರು ಹೇಳಿದ ಹಾಗೆ ಈ ರಾಜ್ಯವನ್ನು ಇಂಡಸ್ಟ್ರಿಯಲೈಸ್ ಮಾಡದೇ ಹೋದರೆ ಯಾವ ಸರ್ಕಾರವೇ ಇರಲಿ ಅದು ನಿರ್ನಾಮವಾಗಿ ಹೋಗುತ್ತದೆಂದು ಹೇಳಿದ್ದಾರೆ. ಅಂದಮೇಲೆ ಇವತ್ತು ಈ ಸರ್ಕಾರದವರು ಆ ಬಗ್ಗೆ ಒಂದು ಅಭಿಪ್ರಾಯ ಸೋಪಾನವನ್ನ ಹಾಕುತ್ತಿದ್ದಾರೆಂದು ಹೇಳಿದರೆ ಅದರಲ್ಲಿ ಏನೂ ತಪ್ಪಾಗುವುದಿಲ್ಲ. ಆರ್ಥಿಕ ಮಂತ್ರಿಗಳು ಇವತ್ತು ಯಾವ ಬೆಟ್ಟ ಸುತ್ತಿಕೊಂಡು ಬಂದು 7 ಲಕ್ಷ ರೂಪಾಯಿಗಳನ್ನು ಬಹಳ ಬುದ್ಧಿವಂತಿಕೆಯಿಂದ ಉಳಿಸಿದ್ದೇನೆಂದು ಹೇಳುತ್ತಾರೋ ಗೊತ್ತಿಲ್ಲ. ಅವರ ಒಂದು ಮೇಧಾಶಕ್ತಿ ಇದರಿಂದ ಖಂಡಿತವಾಗಿ ತೋರುವುದಿಲ್ಲ. ನಾನು ಈ ರೀತಿ ಹೇಳುತ್ತಿದ್ದೇನೆ ಎಂಬುದಾಗಿ ಹಣಕಾಸಿನ ಸಚಿವರು ಕೋಪಮಾಡಿಕೊಳ್ಳಬಾರದು. ಆರ್ಥಿಕ ಸಚಿವರು ಬಹಳ ಬುದ್ಧಿವಂತರು ಎಂದು ಜನ ತಿಳಿದುಕೊಳ್ಳಲಿ ಎಂದು 7 ಲಕ್ಷ ರೂಪಾಯಿಗಳನ್ನು ಉಳಿತಾಯವೆಂದು ತೋರಿಸಿದ್ದಾರೆ. ಇನ್ನು ಓಲ್ಡೇಜ್ ಪೆನ್‌ಷನ್ ಬಗ್ಗೆ ಹಣ ಒದಗಿಸಿದ್ದಾರೆ? ಆದರೆ ರಿಸೋರ್ಸಸ್ ಬಂದರೆ ಇದನ್ನು ಕೊಡುವುದಕ್ಕೆ ಸಾಧ್ಯವೆಂಬುದಾಗಿ ಬಜೆಟ್ಟಿನಲ್ಲಿ ಹೇಳಿದ್ದಾರೆ. ಅದನ್ನು ಇಲ್ಲಿ ತೋರಿಸಿ ರೆವಿನ್ಯೂ ಸರ್ಪ್ಲಸ್ ತೋರಿಸಿದ್ದಾರೆ. ಇನ್ನೊಂದುಕಡೆ 888 ಲಕ್ಷ ರೂಪಾಯಿಗಳನ್ನು ಡಿಫಿಸಿಟ್ ತೋರಿಸಿದ್ದಾರೆ. ಈ ಹಣವನ್ನು ಯಾವ ರೀತಿ ತುಂಬಬೇಕೆಂದು ಯೋಚನೆ ಮಾಡುತ್ತಿರುವಾಗಲೇ ರೆವಿನ್ಯೂ ಸರ್‌ಚಾರ್ಜಿನಮೇಲೆ ಬರುವ ಹಣ ನಿಂತುಹೋಯಿತು. ಇವೆಲ್ಲ ಯೋಜನೆಗಳು ಯಶಸ್ವಿಯಾಗಿ ಮಾಡಲು ಪ್ರತಿಯೊಂದು ಸಂದರ್ಭದಲೂ ಟೆಂಪೊರರಿ ಅಕಾಮಡೇಷನ್ ಎಂದು ಯಾವಾಗಲೂ ಕೇಂದ್ರದ ಕಡೆ ಇವರು ಭಿಕ್ಷೆ ಬೇಡಬೇಕಾಗಿದೆ. ಕೆಲವು ಸಂದರ್ಭಗಳಲ್ಲಿ ವ್ಯಾಪಾರೋದ್ಯಮಿಗಳಿಂದಾಗಲೀ ಅಥವಾ ಬ್ಯಾಂಕಿನಿಂದಾಗಲೀ ಇವರು ಇಟ್ಟಿರುವ ಹಣವನ್ನು ತೆಗೆದುಕೊಳ್ಳುತ್ತಾರೆ. ಆದರೆ ಇವರು ಇಟ್ಟಿರತಕ್ಕ ಹಣವೆಲ್ಲಾ ಎಗ್ಜಾಸ್ಟ್ ಆದಮೇಲೆ ಎಲ್ಲಿ ಏನು ಹಣ ಕೇಳುತ್ತಾರೋ ಗೊತ್ತಿಲ್ಲ.

2-00 P.M.

ತಮ್ಮಲ್ಲಿರತಕ್ಕ ಹಣವೆಲ್ಲಾ ಖರ್ಚಾದಮೇಲೆ ಟೆಂಪರರಿ ಅಕಾಮಡೇಷನ್ ಮಾಡಬೇಕಾಗುತ್ತದೆ. ಸೆಕ್ಯೂರಿಟಿಗಾಗಿ ಇಟ್ಟಿರುವ 25 ಕೋಟಿ ರೂಪಾಯಿಗಳು ಮತ್ತು ಸ್ಟೇಟ್ ರೀಆರ್ಗನೈಜೇಷನ್ ಆಕ್ಟ್ ಪ್ರಕಾರ ಬ್ಯಾಂಕಿನಲ್ಲಿಟ್ಟಿರತಕ್ಕ 18 ಕೋಟಿ ರೂಪಾಯಿಗಳನ್ನು ಡ್ರಾ ಮಾಡುತ್ತಾರೆ. ಅದೂ ಎಗ್ಜಾಸ್ಟ್ ಆದಮೇಲೆ ರಿಜರ್ವ್ ಬ್ಯಾಂಕಿನ ಪರ್ಮಿಷನ್ ತೆಗೆದುಕೊಂಡು ಓವರ್‌ಡ್ರಾಫ್ಟ್ ತೆಗೆದ ಕೊಳ್ಳುತ್ತಾರೆ. ಅದೂ ಮುಗಿದಮೇಲೆ ಹಣ ಇಲ್ಲವೆ ಇದ್ದರೆ ಸ್ವಲ್ಪ ಕಾಲದಲ್ಲಿ ಈ ರಾಜ್ಯದಲ್ಲಿರತಕ್ಕ ಅಧಿಕಾರಿಗಳಿಗೆ ಸಂಬಳವನ್ನು ಕೊಡುವುದಕ್ಕೆ ದುಡ್ಡು ಇಲ್ಲವೆ ಇರುವ ಪರಿಸ್ಥಿತಿ ಬರುತ್ತದೆ. ಏತಕ್ಕೆಂದರೆ ನಮ್ಮ ಹಣಕಾಸಿನ ಪರಿಸ್ಥಿತಿ ಎಷ್ಟರಮಟ್ಟಿಗೆ ಇದೆ ಎಂಬುದನ್ನು ನಾವು ಆಲೋಚನೆಮಾಡಬೇಕು. ಸರ್ಕಾರದವರು ಸೇಲ್ಸ್‌ಟ್ಯಾಕ್ಸನ್ನು ಬುದ್ಧಿವಂತಿಕೆಯಿಂದ ವಸೂಲು ಮಾಡಬಹುದು. ಕಂದಾಯವನ್ನು ವಸೂಲು ಮಾಡಬಹುದು. ಮೋಟಾರ್ ವೆಹಿಕಲ್ಸ್ ಟ್ಯಾಕ್ಸನ್ನು ವಸೂಲು ಮಾಡಬಹುದು. ಎಲ್ಲಾ ಟ್ಯಾಕ್ಸುಗಳನ್ನೂ ವಸೂಲುಮಾಡಿ, ಲೀಕೇಜ್ ಮತ್ತು ಲೂಪ್‌ಹೋಲ್‌ಗಳನ್ನೆಲ್ಲಾ ಪ್ಲಗ್ ಮಾಡಿ ನೀವು ಏನು ನಿರೀಕ್ಷಣೆ ಮಾಡಿದ್ದೀರೋ ಅದನ್ನು ಪಡೆಯುವುದಕ್ಕೆ ಸಾಧ್ಯವಿದೆಯೇ? ನಮ್ಮ ಹಣಕಾಸಿನ ಮಂತ್ರಿಗಳ ಧೈರ್ಯ ಹೇಗಿದೆ ಎಂಬುದನ್ನು ಸ್ವಲ್ಪ ಹೇಳುತ್ತೇನೆ. ಇವರ ಬಜೆಟ್ ಎನ್ನುವ ವಾಹನ ಹೇಗಿದೆ ಎಂದರೆ 50 ಮೈಲಿ ಹೋಗಬೇಕಾದರೆ 25 ಸಾರಿ ನಿಲ್ಲುತ್ತದೆ. ಅದನ್ನು 15 ಸಾರಿ ತಳ್ಳಬೇಕಾಗುತ್ತದೆ. ಹೀಗೆಯೇ ತಳ್ಳಿಕೊಂಡು ಹೋದರೆ ಹೇಗೆ? ಈ ಬಜೆಟ್ಟು ಕುರುಡನ ಮೇಲೆ ಹೆಳವ ಕುಳಿತುಕೊಂಡು ದಾರಿಯನ್ನು ಸಾಗಿಸಿದಂತಿದೆ. ಹೆಳವ ಮತ್ತು ಕುರುಡರು ದಾರಿಯನ್ನು ಸಾಗಿಸಲಿಲ್ಲ. ಹಾಗೆ ನೀವು ನಿಮ್ಮ ಗುರಿಯನ್ನು ಮುಟ್ಟಲಿಲ್ಲ. ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ನಮ್ಮ ಹಣಕಾಸಿನ ಪರಿಸ್ಥಿತಿ ಚೆನ್ನಾಗಿಲ್ಲ. ಕೈಗಾರಿಕೆಗಳಲ್ಲಿ ಸರ್ಕಾರದವರು ಏನು ಉತ್ಪತ್ತಿಯನ್ನು ನಿರೀಕ್ಷಣೆ ಮಾಡಿದ್ದರೋ ಅದು ದೊರಕಿದೆಯೇ? ಮೊನ್ನೆ ತಾನೆ ಕೃಷ್ಣಮಾಚಾರಿಯವರು ಹೇಳಿದ್ದಾರೆ, ನಾವು ಕೈಗಾರಿಕೆಗಳಲ್ಲಿ ಏನು ನಿರೀಕ್ಷಣೆ ಮಾಡಿದ್ದೆವೋ ಅದು ದೊರಕಿಲ್ಲ ಎಂದು. ನಮ್ಮ ದೇಶದಲ್ಲಿರತಕ್ಕ 48 ಕೈಗಾರಿಕೆಗಳಲ್ಲಿ ಒಂದು ಕೈಗಾರಿಕೆಯಲ್ಲಿ ಫಲ ದೊರಕಿದೆಯೇ ಹೊರತು ಇನ್ನು 47 ಕೈಗಾರಿಕೆಗಳು ಫಲವನ್ನು ಕೊಟ್ಟಿಲ್ಲ ಎಂದು ಹೇಳಿದರು. ಪೋರ್ಸಿಲೈನ್ ಫ್ಯಾಕ್ಟರಿ, ರೆಂಕೋ, ಸಿಲ್ಕ್ ಫಿಲೇಚರ್ ಇವುಗಳ ಮುಖಾಂತರ ಸರ್ಕಾರಕ್ಕೆ ಬರುವ ಹಣ ಎಷ್ಟು? ಇವೊತ್ತಿನ ದಿವಸ ನಮ್ಮ ದೇಶ ಉನ್ನತಿಯ ಕಡೆಗೆ ಹೋಗುತ್ತಿದೆಯೇ ಅಥವಾ ಅವನತಿಯ ಕಡೆಗೆ ಹೋಗುತ್ತಿದೆಯೇ ಎನ್ನುವುದನ್ನು ನೋಡಬೇಕಾಗಿದೆ. ಹಿಂದೆ ಹಣಕಾಸಿನ ಮಂತ್ರಿಗಳಾಗಿದ್ದ ಶ್ರೀಮಾನ್ ಮರಿಯಪ್ಪನವರು we have to tighten our belts ಎಂದು ಹೇಳಿದ್ದಾರೆ. ಆದ್ದರಿಂದ ಆ

(ಶ್ರೀ ಸಿ ಜೆ ಮುಕ್ಕಣ್ಣಪ್ಪ)

ರೀತಿ ಮಾಡದೆ ಹೋದರೆ ಮುಂದೆ ತೊಂದರೆಗೆ ಒಳಗಾಗಬೇಕಾಗುತ್ತದೆ. ಸರ್ಕಾರದಲ್ಲಿ ನಡೆಯ ತಕ್ಕ ದುಂದುವೆಚ್ಚ, ಅವ್ಯವಹಾರ, ಅನೀತಿ ಇವುಗಳಿಂದ ದೇಶಕ್ಕೆ ಕಲ್ಯಾಣವಾಗುವುದಿಲ್ಲ. ಶರಾವತಿ ಯಲ್ಲಿ ಏನೇನೂ ಕಮಿಟ್‌ಮೆಂಟ್ ಮಾಡಿಕೊಂಡಿಲ್ಲ ಎಂದು ಹೇಳಿದ್ದೀರಿ. ಶ್ರೀಮಾನ್ ಎಂ. ಸಿ. ನರಸಿಂಹನ್ ಅವರು ವಿಧಾನಪರಿಷತ್ತಿನಲ್ಲಿ ಪ್ರಶ್ನೆಯನ್ನು ಕೇಳಿದಾಗ errors have been committed ಎಂದು ಹೇಳಿದ್ದೀರಿ. ಅದು ವೃತ್ತಪತ್ರಿಕೆಯಲ್ಲಿ ಬಂದಿದೆ. ಬೇಕಾದರೆ ನಾನು ಅದನ್ನು ತೋರಿಸುತ್ತೇನೆ.

Sri B. D. JATTI (Minister for Finance).—At the Conference of Chief Engineers, the Chief Engineer said that irregularities have been committed by the Finance Department in procedures but not in the P.W.D. I said it was wrong. If at all there is a mistake it is on the part of the Chief Engineers and his staff.

Sri C. J. MUCKANNAPPA.—The Finance Minister has only established my case. He has supported my case and my contention. There is joint responsibility.

Sri B. D. JATTI.—What I said pertained to Sri Manickam not to Sharavati. Sri Manickam is not in-charge of Sharavati.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅದನ್ನು ಹಣಕಾಸಿನ ಖಾತೆಯವರು ಮಾಡಲಿ ಅಥವಾ ಪಬ್ಲಿಕ್ ವರ್ಕ್ಸ್ ಇಲಾಖೆಯವರು ಮಾಡಲಿ, ಅದು ಒಂದು ಸರ್ಕಾರದ ಅಂಗ. ಅವರು ಮಾಡಿದಂಥಾದ್ದು ಸರ್ಕಾರದ ಮೇಲೆ ಪರಿಣಾಮವಾಗುತ್ತದೆ. ಪಬ್ಲಿಕ್ ವರ್ಕ್ಸ್ ಇಲಾಖೆಯವರು ಮಾಡಿದಂತಹ ಆ ವ್ಯವಹಾರ ದೇಶದ ಜನತೆಯ ಮೇಲೆ ಪರಿಣಾಮ ಆಗಲಾರದು. ಪಬ್ಲಿಕ್ ವರ್ಕ್ಸ್ ಇಲಾಖೆಯ ವರು ಕಂಟ್ರಾಕ್ಟರುಗಳ ಜೊತೆಯಲ್ಲಿ ಸೇರಿಕೊಂಡು ಅನ್ಯಾಯ ಮತ್ತು ಅಕೃತ್ಯಗಳಿಗೆ ಅವಕಾಶ ಮಾಡಿಕೊಟ್ಟಿದ್ದಾರೆ. ಶರಾವತಿಯ ವಿಷಯವನ್ನು ಶ್ವೇತ ಪತ್ರದಲ್ಲಿ ಕೊಟ್ಟಿದ್ದಾರೆ. ಅದರಲ್ಲಿ ಹಣ ಪೋಲಾಗಿದೆ ಎಂಬುದು ಗೊತ್ತಾಗುತ್ತದೆ. ಈ ದೇಶದಲ್ಲಿ ಯಾವ ರಾಜ್ಯದಲ್ಲಿಯೂ ಇಲ್ಲದೆ ಇರುವ ರಾಜಕೀಯ ಗೊಂದಲವುಂಟಾದಾಗ, ರಾಜಕೀಯ ಆವೇಶ ನಡೆಯುತ್ತಾ ಇದ್ದಾಗ ನಮ್ಮ ಮಾನ್ಯ ಹಣಕಾಸಿನ ಸಚಿವರು ತಮ್ಮ ಖಾಗವನ್ನು ಭದ್ರವಾಗಿ ಉಳಿಸಿಕೊಂಡರು. ಅವರು ಶರಾವತಿಗೆ ಹಣಕಾಸನ್ನು ಯಥೇಚ್ಛವಾಗಿ, ಸ್ವೇಚ್ಛೆಯಾಗಿ, ಉದಾರವಾಗಿ ಕೊಟ್ಟಿದ್ದಾರೆ. ಬೇಕಾದರೆ ಅವರಿಗೆ ನಾನು ಸವಾಲು ಹಾಕುತ್ತೇನೆ. ಅವರು ಅವರ ಸ್ಥಾನವನ್ನು ಬಿಟ್ಟುಕೊಡಬೇಕು. ಇಲ್ಲದಿದ್ದರೆ ಅಲ್ಲಿ ನಡೆದಿರತಕ್ಕ ದುರ್ವ್ಯವಹಾರವನ್ನು ದೇಶದ ಜನತೆಯ ಮುಂದೆ ಉತ್ತರವನ್ನು ಹೇಳುವುದಕ್ಕೆ ತಯಾರಾಗಬೇಕು ಎಂದು ನಾನು ಹೇಳುತ್ತೇನೆ.

ಇನ್ನು ಖಾದಿ ಬೋರ್ಡಿನ ವಿಷಯಕ್ಕೆ ಬಂದರೆ ಇದು ಡಿಲ್ಲಿಯಿಂದ ಒಂದು ಸರ್ಟಿಫಿಕೇಟ್ ತೆಗೆದು ಕೊಳ್ಳುವ ಖಾತೆ. ಅದರಲ್ಲಿ ಏನೂ ಅನ್ಯಾಯ ನಡೆದಿಲ್ಲ ಎಂದು ಹೇಳುತ್ತಾರೆ. ಅದರಲ್ಲಿ ಅನ್ಯಾಯ ನಡೆದಿಲ್ಲವೇ ? ನಾಲ್ಕು ಕೋಟಿ ರೂಪಾಯಿಗಳ ಲೆಕ್ಕವನ್ನು ಬರೆಯದೇ ಹೋದರೂ ಕೂಡ ಅದನ್ನು ಹೊಸದಾಗಿ ಲೆಕ್ಕ ಬರೆಸಿ ಅದು ಸರಿಯಾಗಿದೆ ಎಂದು ಹೇಳಬೇಕಾದರೆ ಸತ್ತ ಮಗುವಿಗೆ ನಾಮಕರಣ ಮಾಡಿದ ಹಾಗೆ ಅದನ್ನು ಮಾಡುವುದಕ್ಕೆ ಹೊರಟಿದ್ದೀರಿ. ನೀವು ನಿಜವಾಗಿಯೂ ಜನತೆಯ ಪ್ರೀತಿ, ವಿಶ್ವಾಸ ಮತ್ತು ನಂಬಿಕೆಗೆ ಅರ್ಹರಾಗಿದ್ದೀರಾ ಎಂದು ನಾನು ಸರ್ಕಾರಕ್ಕೆ ಕೇಳುತ್ತೇನೆ. ಶ್ರೀಮಾನ್ ಲಕ್ಕಪ್ಪನವರು ಹೇಳಿದರು ಹಿಂದೆ ಖಾದಿ ಬೋರ್ಡಿನಲ್ಲಿ ಅಧ್ಯಕ್ಷರಾಗಿದ್ದವರು ತಮ್ಮ ಹಿಂದೆ ಬೊಗಳತಕ್ಕ ನಾಯಿಮರಿಯನ್ನು ಖಾದಿ ಬೋರ್ಡಿನ ಹಣದಲ್ಲಿ ಕೊಂಡುಕೊಂಡಿದ್ದರು ಎಂದು. ಇದಕ್ಕಿಂತ ನಾಚಿಕೆಗೇಡಿನ ಕೆಲಸ ಬೇರೆ ಯಾವುದಿದೆ ಎಂದು ನಾನಾದರೂ ಕೇಳುತ್ತೇನೆ. ಒಂದನೆಯದು ಶರಾವತಿ, ಎರಡನೆಯದು ಖಾದಿ ಬೋರ್ಡು, ಇವೆರಡೇ ಸಾಕು. ಇವುಗಳಲ್ಲಿ ನಡೆಯತಕ್ಕಂಥ ಕೆಲಸಕಾರ್ಯ ಗಳನ್ನು ನೋಡಿದರೆ ಇವರು ಸರಿಯಾದಂಥ ದಾರಿಯಲ್ಲಿ ಹೋಗುತ್ತಾ ಇಲ್ಲ ಎಂಬುದು ಗೊತ್ತಾಗುತ್ತದೆ. ಹಿಂದೆ ಈ ಸಭೆಯಲ್ಲಿ ಸದಸ್ಯರಾಗಿದ್ದಂಥ ಶ್ರೀಮಾನ್ ಅಮ್ಮುಗಮ್ ಅವರು ಶರಾವತಿಯ ವಿಷಯ ಈ ಸಭೆಯಲ್ಲಿ ಚರ್ಚೆಯಾಗಬೇಕು ಎಂದು ಹೇಳಿದಾಗ ಹಿಂದಿನ ಮಂತ್ರಿಮಂಡಲದಲ್ಲಿ ಲೋಕೋಪಯೋಗಿ ಸಚಿವರಾಗಿದ್ದ ಶ್ರೀಮಾನ್ ಚನ್ನಬಸಪ್ಪನವರು ಶರಾವತಿಯಲ್ಲಿ ಎಲ್ಲವೂ ಸರಿ

ಯಾಗಿ ನಡೆಯುತ್ತಿದೆ ಎಂದು ಹೇಳಿದವರು ಅಧಿಕಾರದಿಂದ ಹೊರಗೆ ಹೋದಮೇಲೆ ಶರಾವತಿಯಲ್ಲಿ ಬೇಕಾದಷ್ಟು ಅನ್ಯಾಯ ನಡೆದಿದೆ ಎಂದು ಹೇಳುತ್ತಿದ್ದಾರೆ.

Sri B. D. JATTI.—Let not the Hon. Member criticise ex-Ministers who are not here to defend themselves.

Sri C. J. MUCKANNAPPA.—I am entitled to criticise ex-Ministers. The successor Government has to take the responsibility for the follies of the previous Government.

Mr. SPEAKER.—The Hon. Member may speak of different standards in the same person.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ಇವರು ಅಧಿಕಾರದಲ್ಲಿದ್ದಾಗ ಒಂದು ರೀತಿ, ಅಧಿಕಾರದಲ್ಲಿಲ್ಲದೆ ಇದ್ದಾಗ ಒಂದು ರೀತಿಯಾಗಿ ಮಾತನಾಡುತ್ತಾರೆ. ಪತಿವ್ರತೆಯಾದ ಹೆಂಗಸು ಗಂಡನಾದವನು ಇರುವಾಗ ಬಳೆ, ಅರಸಿನ, ಕುಂಕುಮ, ಮಾಂಗಲ್ಯ ಹೀಗೆ ಐದನ್ನು ಇಟ್ಟುಕೊಂಡಿರುತ್ತಾಳೆ. ಗಂಡನಾದವನು ಸತ್ತು ಹೋದರೆ ಅವಳು ತನ್ನ ಕೈಯಲ್ಲಿರುವ ಬಳೆಯನ್ನು ಒಡೆದು ಹಾಕುತ್ತಾಳೆ, ಹಣೆಯಲ್ಲಿರುವ ಕುಂಕುಮವನ್ನು ಅಳಿಸುತ್ತಾಳೆ, ಕತ್ತಿನಲ್ಲಿರುವ ಮಾಂಗಲ್ಯವನ್ನು ಕಿತ್ತು ಹಾಕುತ್ತಾಳೆ. ಅದೇ ರೀತಿ ನೀವು ಅಧಿಕಾರಕ್ಕೆ ಬಂದ ಕೂಡಲೇ ಎಲ್ಲವನ್ನೂ ಕೂಡಿ ಬರುತ್ತೀರಿ. ಆದರೆ ಅಧಿಕಾರವನ್ನು ಬಿಟ್ಟ ಕೂಡಲೇ ಬೋಳು ಮುಂಡೆಯ ಹಾಗೆ ಮಾತನಾಡುತ್ತೀರಿ. ಇದು ನಿಮ್ಮ ನೀತಿಯೇ ಎಂದು ಕೇಳುತ್ತೇನೆ. (ನಗು). 'ಅಧಿಕಾರವುಳ್ಳನಕ ಸಿರಿಯೆಪ್ಪನಂತಕ್ಕು ಅಧಿಕಾರ ಹೋದ ಮರು ದಿನವೇ ಹಾಳೂರು ಶುನಕನಂತಕ್ಕು ಸರ್ವಜ್ಞ' ಎನ್ನುವಂತೆ ಅಧಿಕಾರದಲ್ಲಿದ್ದಾಗ ಒಂದು ತರಹ ಇದ್ದು ಅಧಿಕಾರವನ್ನು ಬಿಟ್ಟು ಕೂಡಲೇ ಸಿಕ್ಕಾಪಟ್ಟೆ ಮಾತನಾಡುವುದು ಸರಿಯಲ್ಲ. ನ್ಯಾಯವಾಗಿ ಮಾಡಿದ್ದರೆ ನ್ಯಾಯವಾಗಿ ಮಾಡಿದ್ದೇನೆ ಎಂದು ಹೇಳಬೇಕು, ತಪ್ಪು ಮಾಡಿದ್ದರೆ ಅದನ್ನು ಒಪ್ಪಿಕೊಂಡು ಹೇಳಬೇಕು. ಈ ಖಾದಿ ಬೋರ್ಡ್ ಮತ್ತು ಶರಾವತಿ ವಿಷಯದಲ್ಲಿ ಒಂದು ಜುಡಿಷಿಯಲ್ ವಿಚಾರಣೆಯಾಗಬೇಕು. ತಾವು ಕೊಟ್ಟಿರತಕ್ಕ ಶ್ವೇತ ಪತ್ರ ಈ ಸಭೆಯಲ್ಲಿ ಚರ್ಚೆಯಾಗಬೇಕು. ಅದಕ್ಕೆ ಸರ್ಕಾರದವರೂ ಮತ್ತು ಅಧ್ಯಕ್ಷರು ಒಂದು ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ನಾನು ಅಧ್ಯಕ್ಷರನ್ನು ಮತ್ತು ಸರ್ಕಾರವನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಮೊನ್ನೆ ನಾನು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ದೇಶದಲ್ಲಿ ಇನ್ನೊಂದು ಮಿನಿಯೇಚರ್ ಖಾದಿ ಬೋರ್ಡ್ ವ್ಯವಹಾರ ನಡೆದಿದೆ ಎಂದು ಹೇಳಿದೆ. ಅದರಲ್ಲಿ ಏಕಚಕ್ರಾಧಿಪತ್ಯ ನಡೆದಿದೆ. ಅದು ಕೇಂದ್ರ ಉಣ್ಣೆ ಸಂಘದ ವ್ಯವಹಾರ. ಅಲ್ಲಿ ನಡೆದಿರತಕ್ಕ ಅವ್ಯವಹಾರ, ಹಣದ ದುರುಪಯೋಗ ಇದರ ಬಗ್ಗೆ ನಾನು ಹಣಕಾಸಿನ ಸಚಿವರಲ್ಲಿ, ಸಂಬಂಧಪಟ್ಟ ಸಚಿವರಲ್ಲಿ, ಮುಖ್ಯ ಮಂತ್ರಿಗಳಲ್ಲಿ ಹಾಗೂ ಗೃಹ ಸಚಿವರಲ್ಲಿ ಸಹ ಚರ್ಚೆ ಮಾಡಿದ್ದೇನೆ. ದೇವರ ಹೆಸರಿನಲ್ಲಿ, ಕಾಂಗ್ರೆಸ್ಸಿನ ಹೆಸರಿನಲ್ಲಿ, ಜಾತಿಯ ಹೆಸರಿನಲ್ಲಿ ಒಬ್ಬನೇ ಮನುಷ್ಯ ಸುಳ್ಳು ಪತ್ರ ಬರೆದು, ಸುಳ್ಳು ಲೆಕ್ಕ ಬರೆದು, ಲೆಕ್ಕಗಳನ್ನು fabricate ಮಾಡಿ ತನ್ನ ಮುಖಂಡತ್ವವನ್ನು ಬೆಳಸಿಕೊಳ್ಳಲು ಕೆಲಸ ಮಾಡುತ್ತಿದ್ದಾನೆ. ಒಬ್ಬ ರಾಜಕೀಯ ಮುಖಂಡನನ್ನು ಬೆಳೆಸುವುದಕ್ಕೆ ಸರಕಾರದ ಹಣ ಮೀಸಲಾದರೆ ನಮ್ಮ ರಾಜ್ಯ ಉಳಿಯುವುದಿಲ್ಲ ಎಂದು ಅರಿಕೆ ಮಾಡಿಕೊಳ್ಳುತ್ತೇನೆ. ಇವತ್ತಿನ ದಿವಸ ಕಂಬಳಿಗಳನ್ನು ಆಂಧ್ರದಲ್ಲಿ ಕೊಂಡುಕೊಂಡು ಪಾವಗಡ ಸೊಸೈಟಿಯಲ್ಲಿ ಲೆಕ್ಕ ತೋರಿಸುತ್ತಾರೆ, ಕೇರಳದಲ್ಲಿ ಕೊಂಡು ಕೊಂಡು ಪಕ್ಕದಲ್ಲಿರುವ ಸೊಸೈಟಿಯಲ್ಲಿ ಲೆಕ್ಕವನ್ನು ಬರೆಸುತ್ತಿದ್ದಾರೆ. ತಾವು ಇದನ್ನು probe ಮಾಡಬೇಕು. ಅದೇ ರೀತಿ ಉಣ್ಣೆ ಕೇಂದ್ರಗಳಿರುವ ಕಡೆಯೂ ನೋಡಬೇಕು, ಅಲ್ಲಿಯೂ ಕೈ ಹಾಕಬೇಕು. ಇಲ್ಲದೆ ಹೋದರೆ ಈ ರಾಜ್ಯದಲ್ಲಿ ಅವರು ಏನು ಮಾಡುತ್ತಾರೆಯೋ ಎನ್ನುವ ಭಯ ನಮ್ಮಲ್ಲುಂಟಾಗಿದೆ.

ರಾಜ್ಯಪಾಲರ ಭಾಷಣದ ಮೇಲೆ ನಾನು ಮಾತನಾಡಿದ ಮೇಲೆ ಆ ಸಂಘ ಬೆಂಗಳೂರು ನಗರದಲ್ಲಿದ್ದುದು ಕೃಷ್ಣರಾಜಪುರಕ್ಕೆ ಹೋಗಿದೆ, ಮತ್ತು ಅಲ್ಲ ರಾತ್ರಿ ಹಗಲೂ ಲೆಕ್ಕ ಬರೆಯುತ್ತಿದ್ದಾರೆ. ಇದನ್ನು ಸರಿಪಡಿಸದೆ ಹೋದರೆ ದೇಶಕ್ಕೆ ಬಹಳ ಅನ್ಯಾಯ ಮಾಡಿದ ಹಾಗೆ ಆಗುತ್ತದೆಂದು ನಾನು ಸರ್ಕಾರದಲ್ಲಿ ಹೇಳುತ್ತೇನೆ. ಈ ಮೂರು ಕೆಲಸಗಳಲ್ಲಿಯೂ ಏನೆಂದು ಕೆಲಸವಾಗಿದೆ, ಅದರಿಂದ ಈ ಇವು ಮೂರೇ ಉದಾಹರಣೆಗಳು ಸಾಕು, ಮತ್ತೊಂದು ಉದಾಹರಣೆ ಬೇಕಾಗಿಲ್ಲ ಎಂದು ಹೇಳುತ್ತೇನೆ.

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಸ್ವಾಮಿ, ಈ ರಾಜ್ಯದಲ್ಲಿ ಸಹಕಾರ ಸಂಘಗಳು ಎಷ್ಟರಮಟ್ಟಿಗೆ ಕೆಲಸ ಮಾಡುತ್ತಿವೆ ಎಂಬುದನ್ನು ನೋಡೋಣ. ಸಹಕಾರ ತತ್ವ ಎನ್ನುವುದರ ವ್ಯವಸಾಯ ಮಾಡುವುದಕ್ಕೆ, ಎಲ್ಲದಕ್ಕೂ ಬಂದಿದೆ. ಆದರೆ ಈ ಸಹಕಾರ ಸಂಘಗಳು ಸರಿಯಾಗಿ ನಡೆಯುತ್ತಿವೆಯೇ ಎಂದು ಕೇಳುತ್ತೇನೆ. ನಾಲ್ಕು ಸಾವಿರ ರೂಪಾಯಿಗಳನ್ನು ತಿಂದಿದ್ದಾರೆ ಎಂದು ದೂರು ಕೊಟ್ಟು ಮೂರು ತಿಂಗಳಾದರೂ ಪೋಲೀಸಿನವರು ಈ ತನಕ ಆ ಮನುಷ್ಯನನ್ನು ಹಿಡಿದಿಲ್ಲ. ಆತ ಒಬ್ಬ ಕಾಂಗ್ರೆಸ್ ಪುಢಾರಿ. ಇದಕ್ಕೆ ನಾನು ಸರ್ಕಾರವನ್ನು ದೂಷಣೆ ಮಾಡುತ್ತಿಲ್ಲ. ಒಬ್ಬ ನಾಲ್ಕು ಸಾವಿರ ರೂಪಾಯಿ ತಿಂದು ಹಾಕಿದರೆ, ಸೊಸೈಟಿ ಸೆಕ್ರೆಟರಿ ಅಥವಾ ಮತ್ತೊಬ್ಬನನ್ನು ಹಿಡಿಯುವ ಕೆಲಸವನ್ನು ಮಂತ್ರಿಗಳು ಮಾಡುವುದಾದರೆ ನೀವು 130 ಜನ ಕೆಲಸ ಮಾಡಿದರೂ ಸಾಲುವುದಿಲ್ಲ. ಇವರ ಕೈಕೆಳಗೆ ಕೆಲಸ ಮಾಡುವ ಅಧಿಕಾರಿಗಳು ಇಷ್ಟು ನಿರ್ಲಕ್ಷ್ಯವಾಗಿದ್ದರೆ ಹೇಗೆ? ಅಧಿಕಾರಿಗಳಲ್ಲಿರುವ Negligence of duty, deriliction of duty, ಇಂಥಾದ್ದನ್ನು ಸರ್ಕಾರದ ಗಮನಕ್ಕೆ ತಂದರೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕು.

ತುಮಕೂರು ಜಿಲ್ಲಾ ಬ್ಯಾಂಕಿನಲ್ಲಿ 1,15,000 ರೂಪಾಯಿಗಳು ಲೆಕ್ಕದಲ್ಲಿ ಕಾಣೆಯಾಗಿರುವುದು ಅಥವಾ ದುರ್ವಿನಿಯೋಗವಾಗಿದೆ ಎಂದು ಹೇಳಿದೆವು. ನಾನು ಡಿಸೆಂಬರ್ ತಿಂಗಳಿನಲ್ಲಿ ನಡೆದ ಅಧಿವೇಶನದಲ್ಲಿಯೂ ಹೇಳಿದೆ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗಲೂ ಹೇಳಿದೆ. ಇದಕ್ಕೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ? ಇವತ್ತಿನ ದಿವಸ ಸರ್ಕಾರ ಸಾಲಪಾಡಿ ದೇಶದ ಜನತೆಯನ್ನು ಒತ್ತೆ ಇಟ್ಟು ಅಪೆಕ್ಸ್ ಬ್ಯಾಂಕ್ ಮತ್ತು ಸೆಂಟ್ರಲ್ ಲ್ಯಾಂಡ್ ಮಾರ್ಟಗೇಜ್ ಬ್ಯಾಂಕ್ ಇವುಗಳಿಗೆ ರಿಸರ್ವ್ ಬ್ಯಾಂಕಿನಿಂದ ಸಾಲವನ್ನು ಕೊಡಿಸಿದ್ದೀರಿ. ಇದಕ್ಕೆ ಸರ್ಕಾರದ ಜವಾಬ್ದಾರಿ ಇದೆ. ಸಹಕಾರ ತತ್ವ ಚೆನ್ನಾಗಿ ಬೆಳೆದು ಉಪಯೋಗವಾಗಬೇಕು; ಸಹಕಾರ ತತ್ವ ರಾಜ್ಯದ ಬುನಾದಿ ಎಂದು ಹೇಳುವಾಗ ಅದು ಸರಿಯಾದ ಭದ್ರವಾದ ಬುನಾದಿಯಾಗಬೇಕಾಗಿದ್ದರೆ ಸಹಕಾರ ಸಂಘಗಳು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುವಂತೆ ನೋಡಿಕೊಳ್ಳಬೇಕು. ಇವತ್ತಿನ ದಿವಸ ಸಹಕಾರ ಸಂಘಗಳಲ್ಲಿ ಎಷ್ಟರಮಟ್ಟಿಗೆ ದುರ್ವ್ಯವಹಾರ ನಡೆಯುತ್ತಿದೆ ಅದನ್ನು ಮುಂದುವರಿಯಲು ಬಿಟ್ಟರೆ ಎಲ್ಲ ವಿಷಯಗಳಲ್ಲಿಯೂ ಕೂಡ ಅದೇ ರೀತಿ ನಡೆಯುತ್ತದೆ. ಇದಕ್ಕೆ ಮೊದಲು ಸಮಾಜ ಸುಧಾರಣೆ ಆಗಬೇಕು, ಸಮಾಜ ಸುಧಾರಣೆಯಾಗಿ ಅದರಿಂದ ಸರ್ಕಾರದ ಸುಧಾರಣೆಯಾಗಬೇಕು. ಇವೆರಡೂ ಆದರೆ ಅದರಿಂದ ರಾಜ್ಯದ ಕಲ್ಯಾಣವಾಗುತ್ತದೆ. ಇಲ್ಲದೆ ಹೋದರೆ ನಿಮಗೆ ಓಟು ಕೊಟ್ಟ ಸಮಾಜವೇನಿದೆ ಅದು ನಿಮ್ಮನ್ನು ದೂಷಣೆ ಮಾಡುತ್ತದೆ. ಅವರು ನಿರೀಕ್ಷಣೆ ಮಾಡುವುದು ಸರ್ಕಾರದಿಂದ ಒಳ್ಳೆಯ ಪ್ರತಿಫಲವನ್ನು. ಎಲ್ಲ ವಿಷಯಗಳಲ್ಲಿಯೂ ಕೂಡ ತೀವ್ರವಾದ ಆಸೆ, ಆಕಾಂಕ್ಷೆಗಳನ್ನು ಏನು ಜನತೆ ಇಟ್ಟುಕೊಂಡಿದೆ ಅದನ್ನು ಈ ದೇಶದ ಕಲ್ಯಾಣಕ್ಕೋಸ್ಕರ ನೆರವೇರುವಂತೆ ಮಾಡಬೇಕೆಂದು ಹೇಳಿ ಅಧ್ಯಕ್ಷರ ಮನಸ್ಸಿಗೆ ಸ್ವಲ್ಪ ಬೇಜಾರು ಪಟ್ಟುಕೊಂಡರೂ ನಾನು ಎರಡು ಮೂರು ನಿಮಿಷಕ್ಕೂ ಹೆಚ್ಚಾಗಿ ತೆಗೆದುಕೊಂಡದ್ದಕ್ಕೆ ಕ್ಷಮಿಸಬೇಕು ಎಂದು ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ, ಸ್ವಾಮಿ.

†Sri B. D. JATTI.—Sir, I am grateful to Sri Muckannappa for bringing to my notice what he read about something in the papers. I just looked into it. The head line in the Deccan Herald is 'Jatti admits Sharavathi errors'. It is most misleading. It was to a question of Sri Mallaradhya in the Upper House regarding Audit Report and the irregularities of several departments as pointed out by the Audit Report and all that. There may be irregularities in several departments including Sharavathi and those irregularities will be pointed out by the Audit Report and it will come before the House for discussion. The head line is misleading and so the Hon. Member has come to that conclusion.

ಶ್ರೀ ಕಡಿದಾಳ್ ಮಂಜಪ್ಪ (ಶೃಂಗೇರಿ).—ಸ್ವಾಮಿ ಅಧ್ಯಕ್ಷರೆ, ಮಾನ್ಯ ಹಣಕಾಸಿನ ಸಚಿವರು ಸಭೆಯಲ್ಲಿ ಮಂಡಿಸಿರುವ ಆಯವ್ಯಯದ ಪಟ್ಟಿಯನ್ನು ಸ್ವಾಗತಿಸುತ್ತೇನೆ. ಮುಂದಿನ ವರ್ಷದಲ್ಲಿ ಹೊಸ ತೆರಿಗೆ ಹಾಕುವ ಸೂಚನೆ ಇಲ್ಲದೆಯಿರುವುದು ಸ್ವಾಗತಾರ್ಹವಾಗಿದೆ. ಇದಕ್ಕಾಗಿ ಸರಕಾರವನ್ನು ವಂದಿಸುತ್ತೇನೆ. ಇದೇ ರೀತಿ ವೃದ್ಧಾಪ್ಯ ವಿರಾಮ ವೇತನವನ್ನು ಕೊಡುವುದಕ್ಕೆ ವ್ಯವಸ್ಥೆ

ಮಾಡಿರುವುದು ಮತ್ತು ಕೆಳದರ್ಜೆ ನೌಕರರಿಗೆ ಸ್ವಲ್ಪಮಟ್ಟಿಗೆ ಪರಿಹಾರ ಕಲ್ಪಿಸಿರುವುದು ಸ್ವಾಗತಾರ್ಹವಾಗಿವೆ. ಸಂಸ್ಥಾನದ ಸಾಧನಸಂಪತ್ತುಗಳಿಗನುಗುಣವಾಗಿ ಮೂರನೆಯ ಯೋಜನೆಯ ಕಾರ್ಯಕಲಾಪಗಳನ್ನು ಇದ್ದುದರಲ್ಲಿ ತೃಪ್ತಿಕರವಾಗಿ ನಡೆಸಿದ್ದಾರೆ. ಅದರಲ್ಲಿಯೂ ಕೆಲವು ಇಲಾಖೆಗಳಲ್ಲಿ ಕಾರ್ಯ ತೃಪ್ತಿಕರವಾಗಿವೆ ಎಂದು ಹೇಳಿದರೆ ತಪ್ಪಾಗಲಾರದು. ಕಳೆದ ಕೆಲವು ದಿನಗಳಿಂದ ವಂದನಾರ್ಪಣೆಯ ನಿರ್ಣಯದ ಮೇಲೆ ಮತ್ತು ಆಯವ್ಯಯಗಳ ಅಂದಾಜು ಪಟ್ಟಿಯ ಮೇಲೆ ಮಾತನಾಡಿದ ವಿರೋಧ ಪಕ್ಷದ ಕೆಲವು ಸದಸ್ಯರು ಸ್ವಾತಂತ್ರ್ಯ ಲಭಿಸಿದ ತರುವಾಯ ದೇಶದಲ್ಲಿ ಯಾವ ಪ್ರಗತಿಯೂ ನಡೆದಿಲ್ಲವೋ ಏನೋ ಎಂಬ ಅರ್ಥ ಬರುವ ರೀತಿಯಲ್ಲಿ ಮಾತನಾಡಿದರು. ಕಳೆದ ಹದಿನಾರು ವರ್ಷಗಳ ಅವಧಿಯಲ್ಲಿ ಈ ದೇಶದಲ್ಲಿ ಮತ್ತು ರಾಜ್ಯದಲ್ಲಿ ನಡೆದಿರುವ ಪ್ರಗತಿ ಅಸಾಧಾರಣವಾದುದು ಮತ್ತು ನಮ್ಮನ್ನು ನಾವು ಅಭಿನಂದಿಸಿಕೊಳ್ಳಬಹುದೆಂದು ಹೇಳಬಹುದಾಗಿದೆ. ಎಂದ ಮಾತ್ರಕ್ಕೇ ಜನತೆಯಲ್ಲಿ ಸಂಪೂರ್ಣ ತೃಪ್ತಿ ಮೂಡಿದೆ, ಸಂಪೂರ್ಣ ಸಮಾಧಾನವಿದೆ ಎಂದು ನಾನು ಹೇಳುವುದಿಲ್ಲ. ಕಳೆದ ಹದಿನಾರು ವರ್ಷಗಳಲ್ಲಿ ಈ ದೇಶದಲ್ಲಿ ನಾನಾ ರೀತಿಯ ಅಭಿವೃದ್ಧಿ ಕಾರ್ಯಗಳು ನಡೆದಿವೆ. ಶಿಕ್ಷಣ ಕ್ಷೇತ್ರದಲ್ಲಿ, ವ್ಯವಸಾಯ ಕ್ಷೇತ್ರದಲ್ಲಿ, ಕೈಗಾರಿಕಾ ಕ್ಷೇತ್ರದಲ್ಲಿ ಸಾಕಷ್ಟು ಪ್ರಗತಿ ನಡೆದಿದೆ. ಶಿಕ್ಷಣ ಕ್ಷೇತ್ರವನ್ನು ಪ್ರಸ್ತಾಪಿಸುವುದಾದರೆ, ಕಾಲೇಜು ಮತ್ತು ಶಾಲೆಗಳ ಸಂಖ್ಯೆ ಜಾಸ್ತಿಯಾಗಿದೆ. ವಿದ್ಯಾರ್ಥಿ ವಿದ್ಯಾರ್ಥಿನಿಯರ ಸಂಖ್ಯೆ ಜಾಸ್ತಿಯಾಗಿದೆ. ಸರಕಾರದವರು ಜನಾರೋಗ್ಯದ ಕಡೆ ಹೆಚ್ಚು ಗಮನವನ್ನು ಕೊಟ್ಟಿದ್ದಾರೆ. ಇದರ ಪರಿಣಾಮವಾಗಿ ಹಲವು ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲಾಗಿದೆ. ಮತ್ತು ಜನರ ಸರಾಸರಿ ಮಯಸ್ಸು ಹೆಚ್ಚಾಗಿದೆ. ಇದೇ ರೀತಿ ಕೈಗಾರಿಕಾಭಿವೃದ್ಧಿಯ ದೃಷ್ಟಿಯಿಂದಲೂ ಕೂಡ ದೇಶ ಬಹಳ ಪ್ರಗತಿಯನ್ನು ಸಾಧಿಸಿದೆ. ಹೆಚ್ಚಿನ ವಿವರಗಳ ಕಡೆ ನಾನು ಹೋಗುವುದಿಲ್ಲ. ಆದರೂ ಜನರಲ್ಲಿ ಸ್ವಲ್ಪ ಮಟ್ಟಿಗೆ ಅತೃಪ್ತಿಯಿದೆಯೆನ್ನುವುದನ್ನು ನಾನು ಒಪ್ಪುತ್ತೇನೆ. ಈ ಅತೃಪ್ತಿಗೆ ಕಾರಣವೇನೆಂಬುದನ್ನು ನನ್ನ ಅನುಭವದ ಆಧಾರದ ಮೇಲೆ ಪರಿಶೀಲನೆ ಮಾಡಲು ಪ್ರಯತ್ನ ಮಾಡಿದ್ದೇನೆ. ಅಸಮಾಧಾನಕ್ಕೆ ಮೊದಲನೆಯ ಕಾರಣ ಇತ್ತೀಚಿನ ಕೆಲವು ವರ್ಷಗಳಲ್ಲಿ ಧಾರಣೆವಾಸಿಗಳು ಬಹಳ ಹೆಚ್ಚಾಗಿ ಜೀವನದ ಖರ್ಚುವೆಚ್ಚಗಳು ದುಬಾರಿಯಾಗಿರುವುದರಿಂದ ಜನರು ಸ್ವಲ್ಪಮಟ್ಟಿಗೆ ಕಳವಳಗೊಂಡಿದ್ದಾರೆ. ಎರಡನೆಯ ಕಾರಣ, ಕೆಲವು ಮಂದಿ ರಾಜಕಾರಣದ ಹೆಸರಿನಲ್ಲಿ ಅಕ್ಷಮ್ಯ ಕಾರುಬಾರುಗಳನ್ನು ಮಾಡುತ್ತಿರುವುದರಿಂದ ಜನರು ಸ್ವಲ್ಪಮಟ್ಟಿಗೆ ಅಸಹ್ಯ ಪಟ್ಟಿದ್ದಾರೆ. ಮೂರನೆಯ ಕಾರಣ, ಈ ರಾಜ್ಯದ ಮತ್ತು ದೇಶದ ಸಂಪತ್ತು ಜಾಸ್ತಿಯಾಗಿದ್ದರೂ ಕೂಡ ಆ ಸಂಪತ್ತಿನಲ್ಲಿ ಬಹುಭಾಗ ಅಕ್ರಮ ಮತ್ತು ಅನೀತಿಯ ವಿಧಾನಗಳಲ್ಲಿ ಸಂಪಾದನೆ ಮಾಡತಕ್ಕ ಜನರ ಕೈಸೇರುತ್ತಿರುವ ಸೂಚನೆ ಕಂಡುಬರುತ್ತಿರುವುದರಿಂದ ಸಾಮಾನ್ಯ ಜನರಿಗೆ ಸ್ವಲ್ಪಮಟ್ಟಿಗೆ ಅಸಮಾಧಾನವಾಗಿದೆ. ನಾಲ್ಕನೆಯ ಕಾರಣ, ಆಡಳಿತದಲ್ಲಿ, ಅದರಲ್ಲಿಯೂ ಕೆಲವು ಕ್ಷೇತ್ರಗಳಲ್ಲಿ ಕಂಡುಬರತಕ್ಕ ಲೋಪದೋಷಗಳಿಂದ ಜನರು ಅಸಮಾಧಾನಗೊಂಡಿದ್ದಾರೆ. ಈ ಕೆಲವು ಕಾರಣಗಳಿಂದ ಜನರಲ್ಲಿ ಅಸಮಾಧಾನ ಮೂಡಿದೆ. ಈ ಕಾರಣಗಳಿಗೆ ಸಂಪೂರ್ಣವಾಗಿ ರಾಜ್ಯ ಸರಕಾರದವರು ಜವಾಬ್ದಾರರೆಂದು ಹೇಳುವುದಕ್ಕಾಗುವುದಿಲ್ಲ. ಧಾರಣೆವಾಸಿಗಳು ಹೆಚ್ಚಿರುವುದಕ್ಕೆ ಸಂಸ್ಥಾನ ಸರಕಾರ ಮಾತ್ರ ಜವಾಬ್ದಾರಿಯಾಗಿಲ್ಲ. ಇಡೀ ದೇಶದ ಆಗುಹೋಗುಗಳು, ದೇಶದಲ್ಲಿರುವ ವಿದ್ಯಮಾನಗಳ ದೆಸೆಯಿಂದ ಧಾರಣೆಗಳು ಹೆಚ್ಚಾಗಿವೆ. ಅದರಲ್ಲಿಯೂ ಮಧ್ಯಮ ವರ್ಗದ ಜನರ ಸ್ಥಿತಿ ಬಹಳ ಶೋಚನೀಯವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ನಮ್ಮ ಸರಕಾರದವರು ಅವರ ಕಾರುಬಾರುಗಳಿಂದ ಪದಾರ್ಥಗಳ ಬೆಲೆಗಳನ್ನು ಕಡಮೆ ಮಾಡುವುದು ಸಾಧ್ಯವಾಗದೇಯಿರಬಹುದು. ಆದರೆ ಇವರ ಪಾತ್ರವನ್ನು ಸ್ವಲ್ಪಮಟ್ಟಿಗೆ ವಹಿಸುವುದಕ್ಕೆ ಅವಕಾಶವಿದೆ. ಧಾರಣೆಗಳು ಜಾಸ್ತಿಯಾಗುವುದಕ್ಕೆ ಹಲವು ಕಾರಣಗಳಿವೆ. ಇವುಗಳಲ್ಲಿ ಪ್ರಬಲವಾದ ಕಾರಣ, ಕೇಂದ್ರದ ಹಣಕಾಸಿನ ಸಚಿವರು ಕೆಲವು ದಿನಗಳ ಹಿಂದೆ ಹೇಳಿದ ಹಾಗೆ ಕಳ್ಳದುಡ್ಡು. ಇಂಥ ದುಡ್ಡು ಯಾರಲ್ಲಿ ಸೇರಿದೆಯೆಂದರೆ, ಕಾಳಸಂತೆ ವ್ಯಾಪಾರಗಾರರು, ಲಂಚಕೋರ ಅಧಿಕಾರಿಗಳು ಲಾಭಕೋರ ಖಾಸಗಿ ಜನರು ಮತ್ತು ತೆರಿಗೆ ಕೊಡದೇಯಿರುವ ಜನರಲ್ಲಿ ಸೇರಿದೆ—ಕಳ್ಳದುಡ್ಡೆಲ್ಲವೂ ಇವರಲ್ಲಿ ಸೇರಿದೆ. ಇದನ್ನು ಹೊಂದುವವರು ತೆರಿಗೆ ಕೊಡುವ ಗೋಜಿಗೇ ಹೋಗುವುದಿಲ್ಲ. ಆದುದರಿಂದ ಆ ಹಣವನ್ನು ಇವರು ಯಥೇಚ್ಛವಾಗಿ ಖರ್ಚುಮಾಡುವುದಕ್ಕೆ ಅವಕಾಶವಿದೆ. ಸಾಚಾ ದುಡ್ಡಿಗೂ ಕಳ್ಳದುಡ್ಡಿಗೂ ಪೈಪೋಟಿ ನಡೆದರೆ ಕಳ್ಳದುಡ್ಡು ಮುಂದೆ ಬರುತ್ತದೆ. ಒಂದು ಸಾಮಾನಿಗೆ ಸಾಚಾ ದುಡ್ಡಿನವನು ನಾಲ್ಕಾಣೆ ಕೊಡುವುದಕ್ಕೆ ಹಿಂತೆಗೆದರೆ ಕಳ್ಳದುಡ್ಡಿನವನು ಒಂದು ರೂಪಾಯಿ ಕೊಡುವುದಕ್ಕೆ ಮುಂದೆ ಬರುತ್ತಾನೆ. ಆದುದರಿಂದ ಧಾರಣೆಗಳು ಮಿತಿಮೀರಿ ಏರುತ್ತಿವೆ. ಸರಕಾರದವರು ಕಾರ್ಯಗತ ಮಾಡುವ ಕಾಮಗಾರಿಗಳಲ್ಲಿ ಸಾಕಷ್ಟು ವಿಚಕ್ಷಣೆ, ದರ್ಪ ಮತ್ತು ಪ್ರಾಮಾಣಿಕತೆಯುಳ್ಳ ಅಧಿಕಾರಿಗಳು ಇದ್ದರೆ ಈ ಕಳ್ಳ ಹಣ ಕೆಲವರಲ್ಲಿ ಸೇರುವುದು ಕಡಮೆಯಾಗುತ್ತದೆ. ಅದರಲ್ಲಿಯೂ ಕೆಲವು ಕಾಮಗಾರಿಗಳಲ್ಲಿ ಮಾಮೂಲು ಎಂದಿದೆ. ನಾನು

(ಶ್ರೀ ಕಡಿದಾಳ್ ಮಂಜಪ್ಪ)

ಪಬ್ಲಿಕ್‌ವರ್ಕ್ಸ್ ಮಂತ್ರಿಯಾಗಿದ್ದಾಗ ಇದು ಸುಮಾರು ಸೇಕಡ ಐದರಷ್ಟಿತ್ತೆಂದು ಕೇಳಿದ್ದೆ, ಈ ಮಾಮೂಲು ಈ ರಾಜ್ಯದಲ್ಲಿ ಮಾತ್ರವಲ್ಲ ಎಲ್ಲ ಕಡೆಯೂ ಇದೆಯೆಂದು ತಿಳಿದುಬಂದಿದೆ. ಇದು ಈಗ ಸೇಕಡ 40 ರಿಂದ 50ರವರೆಗೆ ಹೋಗುತ್ತಿದೆ ಎಂದು ಹೇಳುತ್ತಾರೆ. ಹೀಗೆ ವೇಸ್ಟೇಜ್, ಲೀಕೇಜ್ ಹೆಚ್ಚಾಗದೇಯಿದ್ದರೆ......

ಶ್ರೀ ಎಸ್. ಎಂ. ಕೃಷ್ಣ.—ಮಾಮೂಲಿನ ಜತೆಯ ಗೀಮೂಲಿನಲ್ಲಿ ಕಾಂಗ್ರೆಸ್ ಪಕ್ಷದವರಿಗೆ ಎಷ್ಟು ಸಿಕ್ಕುತ್ತದೆ ?

ಶ್ರೀ ಕಡಿದಾಳ ಮಂಜಪ್ಪ.—ಒಂದು ಉದಾಹರಣೆಯನ್ನು ಹೇಳುತ್ತೇನೆ. ಒಂದು ಕಾಮಗಾರಿಗೆ ಸರಕಾರದವರು 50 ಕೋಟಿ ರೂಪಾಯಿ ಖರ್ಚು ಮಾಡುತ್ತಾರೆ ಎಂದು ಇಟ್ಟುಕೊಳ್ಳೋಣ. 50 ಕೋಟಿಯಲ್ಲಿ 25 ಕೋಟಿ ರೂಪಾಯಿ ಅಧಿಕಾರಿಗಳು, ಕಂಟ್ರಾಕ್ಟರ್‌ಗಳು ಮತ್ತು ನಡುವೆ ಇರತಕ್ಕಂಥ ಖಾಸಗಿಯವರು ಹಂಚಿಕೊಂಡರೆ ಉಳಿದ ಅರ್ಧ ಹಣದ ಕೆಲಸ ನಡೆಯುತ್ತದೆ. ಈ ಮೂರು ವರ್ಗದವರ ಜೇಬಿಗೆ ಸೇರಿದ 25 ಕೋಟಿಯ ಮೇಲೆ ಅವರು ತೆರಿಗೆ ಕೊಡುವುದಿಲ್ಲ; ಮತ್ತು ಅದು ಮನಿಮಾರ್ಕೆಟ್ಟಿಗೆ ಹೋಗುತ್ತದೆ. ಮಾರ್ಕೆಟ್ಟಿನಲ್ಲಿ ಆ ಹಣ ಸಾಕಷ್ಟು ಪೈಪೋಟಿ ನಡೆಯಿಸುವುದರಿಂದ ಧಾರಣೆಧಾಸಿ ಹೆಚ್ಚಾಗುತ್ತದೆ. ಈ ವಿಚಾರದಲ್ಲಿ ಎಲ್ಲ ರಾಜ್ಯ ಸರಕಾರಗಳೂ ಕೇಂದ್ರ ಸರಕಾರವೂ ಸೂಕ್ತ ಕ್ರಮ ಕೈಗೊಳ್ಳಬೇಕಾದ್ದು ಅವಶ್ಯಕ ಇದನ್ನು ತಡೆಗಟ್ಟಬೇಕಾದುದು ಸರಕಾರದ ಪವಿತ್ರ ಕರ್ತವ್ಯವಾಗಿದೆ. ಇದಕ್ಕೆ ತಕ್ಕ ಔಷಧ ಕಂಡುಹಿಡಿಯತಕ್ಕದ್ದು ಅತ್ಯಗತ್ಯ ಎಂದು ಸರಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಕೆಲವರು ಸ್ಥಳೀಯ ಮುಖಂಡರ, ಅಥವಾ ಪುಢಾರಿಗಳ ಹಾವಳಿ ಬಗ್ಗೆ ಹೇಳಬೇಕೆಂದಿದ್ದೇನೆ. ಇಂಗ್ಲೀಷಿನಲ್ಲಿ ಇವರಿಗೆ ಪೊಲಿಟಿಕಲ್ ಟೌಟ್ಸ್ ಅಥವಾ ಅನ್‌ಡಿಜೈರೆಬಲ್ ಲೀಡರ್ಸ್ ಎಂದು ಹೇಳಬಹುದು. ಇವರ ಕೈವಾಡ ಅಲ್ಲಲ್ಲಿ ಆಡಳಿತದಲ್ಲಿ ಹೆಚ್ಚಾಗಿದೆ. ಈ ವಿಚಾರದಲ್ಲಿ ನಾನು ಮಂತ್ರಿಯಾಗಿದ್ದಾಗಲೂ ಕೂಡ ಪ್ರಸ್ತಾಪ ಮಾಡಿದ್ದೇನೆ. ನಾನು ಮಾಡಿದ ಭಾಷಣಗಳನ್ನು ನೋಡಿದರೆ ಇದು ಗೊತ್ತಾಗುತ್ತದೆ. ಇತ್ತೀಚೆಗೆ ಈ ಪುಢಾರಿ ಮಹಾಶಯರುಗಳು ಜನರಿಗೆ ಮತ್ತು ಒಳ್ಳೆಯ ಅಧಿಕಾರಿಗಳಿಗೆ ಕಿರುಕುಳ ಕೊಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಅಲ್ಲಲ್ಲಿ ಲಂಚ ಕೊಟ್ಟು ಅಧಿಕಾರಿಗಳನ್ನು ಕಿಸೆಗೆ ಹಾಕಿಕೊಂಡಿದ್ದಾರೆ. ಕೆಲವರು ಲಂಚಕೋರ ಅಧಿಕಾರಿಗಳು ಅವರೊಂದಿಗೆ ಶರೀಕಾಗಿ ಮಾಡಬಾರದ ಕೃತ್ಯ ಮಾಡುತ್ತಿದ್ದಾರೆ. ಈ ಪುಢಾರಿಗಳೂ ತಮಗೆ ಬೇಡಾದ ಅಧಿಕಾರಿಗಳನ್ನು ವರ್ಗ ಮಾಡಿಸುತ್ತಾರೆ ಮತ್ತು ತಮಗೆ ಬೇಕಾದವರನ್ನು ತಮ್ಮ ಊರಿಗೆ ಹಾಕಿಸಿಕೊಳ್ಳುತ್ತಾರೆ. ಆಗದೇ ಇದ್ದವರ ಮೇಲೆ ಕ್ರಿಮಿನಲ್ ಕೇಸೆಸ್ ಹಾಕುವುದಕ್ಕೆ ಪ್ರಯತ್ನ ಮಾಡುತ್ತಾರೆ. ಕೆಲವು ಕಡೆ ಇಂಥ ಪುಢಾರಿಗಳು ಕಂಟ್ರಾಕ್ಟ್ ಕೆಲಸ ಮಾಡುವುದಕ್ಕೆ ಸಹ ಪ್ರಾರಂಭ ಮಾಡಿದ್ದಾರೆ. ಕೆಲವು ಲಂಚಕೋರ ಇಂಜಿನಿಯರುಗಳನ್ನು ಷರೀಕುಮಾಡಿಕೊಂಡು ಅವರೂ ಇವರೂ ಸೇರಿ ಕಂಟ್ರಾಕ್ಟ್ ಮಾಡುತ್ತಾ ಇದ್ದಾರೆ. ಕೆಲವು ಕಾಂಗಾರಿಗಳಲ್ಲಿ ದೊಡ್ಡ ಕಂಟ್ರಾಕ್ಟರುಗಳಿಂದ ಸಬ್ ಕಂಟ್ರಾಕ್ಟ್ ಪಡೆದು ತಮ್ಮ ಕೈಕೆಳಗಿನ ಸಬ್ ಕಂಟ್ರಾಕ್ಟರುಗಳಿಗೆ ಕೇಸ ಕೊಟ್ಟು ಬರೀ ಲಾಭ ಸಂಪಾದನೆ ಮಾಡುತ್ತಿದ್ದಾರೆ. ಕೆಲವು ಕಡೆ ಇಂಥ ಪುಢಾರಿಗಳನ್ನು ನೋಡಿ ಅಧಿಕಾರಿಗಳು ಭಯ ಭೀತಿಯಿಂದ ನಡುಗುತ್ತಿದ್ದಾರೆ. ಉತ್ಪ್ರೇಕ್ಷೆಮಾಡಿ ಇದನ್ನು ನಾನು ಹೇಳುತ್ತಿಲ್ಲ. ಪುಢಾರಿಗಳು ಫೋನು ಮಾಡಿದರೆ ಸ್ಥಳೀಯ ಅಧಿಕಾರಿಗಳು ಕೆಲವರು ನಡುಗುವ ನಿದರ್ಶನಗಳು ಬಂದಿವೆ. ಕಷ್ಟಪಟ್ಟು ತ್ಯಾಗಮಾಡಿ ಸ್ವರಾಜ್ಯ ಸಂಪಾದನೆ ಮಾಡಿದ್ದು, ಇಂಥ ಪುಢಾರಿ ಮತ್ತು ಅವರನ್ನು ನಂಬಿರತಕ್ಕಂಥ ಕಂಟ್ರಾಕ್ಟದಾರರ ಮತ್ತು ಲಾಭಕೋರರ ಪ್ರಯೋಜನಕ್ಕಾಗಿ ಅಲ್ಲ. ಇವರ ಬಗ್ಗೆ ಒಂದು ಸೂಕ್ತವಾದ ಯೋಜನೆ ಮಾಡಬೇಕಾದ ಕಾಲ ಸನ್ನಿಹಿತವಾಗಿದೆ ಎಂದು ಬಹಳ ಕಳಕಳಿಯಿಂದ ಹೇಳುತ್ತೇನೆ. ನನ್ನ ಮಾತಿನಲ್ಲಿ ಯಾವ ರಾಜಕಾರಣದ ಉದ್ದೇಶವೂ ಇಲ್ಲ. ನನ್ನ ಹತ್ತಿರ ಇರುವ ವಿವರ ಕೊಡಿಸಿ ಈ ವಿಷಯದ ಮೇಲೆ ಎಂದು ದೊಡ್ಡ ಪುಸ್ತಕ ಬರೆಯಬಹುದು. ನಿಷ್ಕಳಂಕವಾದ ಆಡಳಿತ ನಡೆಸುವುದಕ್ಕೆ ನಾವು ಪ್ರಯತ್ನ ಮಾಡಬೇಕು. ಜನರು ಮಂತ್ರಿಗಳಿಂದ ಮತ್ತು ಅಧಿಕಾರಿಗಳಿಂದ ಆಳಿಸಿಕೊಳ್ಳಲಿಕ್ಕೆ ಸಿದ್ಧರಿದ್ದಾರೆ ಆದರೆ ನೀತಿ ನಿಯಮ, ಲಂಗು ಲಗಾಮು ಇಲ್ಲದ ಇಂಥ ಜನರಿಂದ ಆಳಿಸಿಕೊಳ್ಳಲಿಕ್ಕೆ ಮಾತ್ರ ತಯಾರಿಲ್ಲ. ಈ ಪುಢಾರಿಗಳು ಮಂತ್ರಿಗಳ ಅಥವಾ ಇತರ ರಾಜಕಾರಣಿಗಳ ಸಂಪರ್ಕವನ್ನು ಬೆಳೆಯಿಸಿ, ಸ್ಥಳೀಯ ಅಧಿಕಾರಿಗಳ ಮೇಲೆ ಆಧಿಪತ್ಯ ನಡೆಯಿಸಿ ಮಾಡಬಾರದ ಕೆಲಸ ಮಾಡುತ್ತಿದ್ದಾರೆ. ಇವರನ್ನು ಎದುರಿಸಲು ಜನ ನಿಸ್ಸಹಾಯಕರಾಗಿದ್ದಾರೆ. ಇವರು ತಮಗೆ ಆಗದವರ ಜಮೀನು ಅಕ್ವೈರ್ ಮಾಡಿಸುತ್ತಾರೆ, ಮನೆ ಒಡೆಸುತ್ತಾರೆ, ಕೇಸ್ ಹಾಕಲು ಪ್ರಯತ್ನ ಮಾಡುತ್ತಾರೆ. ಇದನ್ನು ಸಂಪೂರ್ಣವಾಗಿ ತಡೆಗಟ್ಟಲು

ಸರಕಾರ ಪ್ರಯತ್ನ ಮಾಡುವುದು ಅಗತ್ಯವಾಗಿದೆ. ಇದನ್ನು ನಿಲ್ಲಿಸಲಿಕ್ಕೇಬೇಕು. ಅಧಿಕಾರಿಗಳು ಸರಕಾರಕ್ಕೆ ವಿಧೇಯರಾಗಿ ಇರಬೇಕಾದುದು ಅಗತ್ಯ. ಸರಕಾರದ ಆಜ್ಞೆಯ ಪ್ರಕಾರ ಅಧಿಕಾರಿಗಳು ನಡೆಯಬೇಕು. ಅವರು ದೇಶಭಕ್ತಿಯಿಂದ ಸಾರ್ವಜನಿಕರ ಹಿತದೃಷ್ಟಿಯಿಂದ ಕೆಲಸಮಾಡಬೇಕು. ಆದರೆ ಪುಢಾರಿಗಳ ಅಧೀನವಾಗಿರಬಾರದು. ನಾನು ಮಂತ್ರಿಯಾಗಿದ್ದಾಗ್ಗೆ ನಾನೇನು ಮಾಡಿದೆ ಎಂದು ನೀವು ಕೇಳಬಹುದು. ನಾನು ಬಹಿರಂಗವಾಗಿ ಸಭೆಗಳಲ್ಲಿ ಇಂಥ ಪುಢಾರಿಗಳ ಬಗ್ಗೆ ಎಚ್ಚರಿಕೆಯಿಂದ ಇರಲು ಅಧಿಕಾರಿಗಳಿಗೆ ಹೇಳಿದ್ದೇನೆ. ಆದುದರಿಂದ ಈ ಬಗ್ಗೆ ಸರಕಾರದವರು ನಿರ್ದಿಷ್ಟವಾಗಿ ಬಹಿರಂಗವಾಗಿ ಘಂಟಾಘೋಷವಾಗಿ ಅಧಿಕಾರಿಗಳಿಗೆ ಹೇಳಬೇಕು ಅಂದರೆ ಕೆಲಸ ಚೆನ್ನಾಗಿ ನಡೆಯುತ್ತದೆ. ಸರಕಾರಿ ಅಧಿಕಾರಿಗಳು ಸರ್ಕಾರ ವಿನಹ ಬೇರೆ ಯಾರಿಗೂ ವಿಧೇಯಕರಾಗಿ ಇರಬೇಕಾಗಿಲ್ಲ. ಜನರ ಹಿತ ದೃಷ್ಟಿಯಿಂದ ದೇಶಕ್ಕೆ ಜವಾಬ್ದಾರರಾಗಿ ಸರಕಾರದ ಆಜ್ಞೆಗಳನ್ನು ಶಿರಸಾ ವಹಿಸಿ ಪರಿಪಾಲನೆ ಮಾಡಬೇಕೆಂದು ಅಧಿಕಾರಿಗಳಿಗೆ ತಿಳಿಸಬೇಕು. ಮುಖಂಡರು ಸಣ್ಣವರೇ ಆಗಲಿ ದೊಡ್ಡವರೇ ಆಗಲಿ ಅವರ ಲಂಚಕೋರರಾದರೆ ಅವರ ಮಾತಿಗೆ ಅಧಿಕಾರಿಗಳು ಬೆಲೆ ಕೊಡಬಾರದು ಎಂದು ಮನವಿ ಮಾಡಿಕೊಳ್ಳುತ್ತೇನೆ. ಅದೇ ರೀತಿ ಸಾರ್ವಜನಿಕರಿಗೂ ಮನವಿ ಮಾಡಿಕೊಳ್ಳುತ್ತೇನೆ. ಲಂಚಕೋರರ ಮಾತು ಕೇಳಬಾರದು.

ಇನ್ನು ಮಲೆನಾಡಿನ ಸಂಬಂಧಪಟ್ಟ ಒಂದು ಮಾತು ಹೇಳಬೇಕಾಗಿದೆ. ಮಲೆನಾಡು ಪ್ರದೇಶ ಬಹಳ ಹಿಂದುಳಿದಿದೆ. ಕಳೆದ ವರ್ಷ ತುರ್ತು ಪರಿಸ್ಥಿತಿ ಬಂದ ನಂತರ ಮಲೆನಾಡಿನಲ್ಲಿ ಕೆಲವು ಕಾಮಗಾರಿಗಳನ್ನು ಸರಕಾರ ನಿಲ್ಲಿಸಿದೆ. ಈ ಎಲ್ಲ ಕಾಮಗಾರಿಗಳನ್ನು ಸರಕಾರ ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ.

ಈ ಪೈಕಿ ಒಂದು ಕಾಂಗಾರಿಯ ವಿಚಾರವನ್ನು ಪ್ರಸ್ತಾಪಮಾಡಬೇಕಾಗಿದೆ. ಒಂದು ಕಾಂಗಾರಿ ಹಿಂದಿನ ಕೆಲವು ವರ್ಷಗಳಿಂದ ಬಜೆಟ್ಟಿನಲ್ಲಿ ಸೇರಿತ್ತು. ಆದರೆ ನನ್ನಮೇಲೆ ಕೆಲವರು ಅಪಾದನೆ ಮಾಡಿದ್ದರಿಂದ ಆ ಕಾಂಗಾರಿ ಅನಾವಶ್ಯಕ ಅಂತ ಹೇಳಿ ಸರಕಾರದವರು ಆಜ್ಞೆಯನ್ನು ಹೊರಡಿಸಿ ಆ ಕಾಂಗಾರಿಗೆ ಮೀಸಲಾಗಿದ್ದ ಹಣವನ್ನು ಬೇರೆ ಉಪಯುಕ್ತವಾದ ಕಾಂಗಾರಿಗೆ ಉಪಯೋಗಿಸಬೇಕು ಎಂದು ಸರಕಾರದವರು ಆಜ್ಞೆ ಮಾಡಿದ್ದಾರೆ. ಇದು ಬಹಳ ಶೋಚನೀಯ.

ಈ ಕಾಂಗಾರಿಯ ಇತಿಹಾಸವನ್ನು ಸ್ವಲ್ಪಮಟ್ಟಿಗೆ ಪ್ರಸ್ತಾಪಿಸುವುದಾದರೆ, ಅದು ನಮ್ಮ ತಾಲ್ಲೂಕಿನಲ್ಲಿ ಮತ್ತು ನಮ್ಮ ಊರಿಗೆ ಹತ್ತಿರವಿರುವ ತುಂಗಾನದಿಗೆ ಕಟ್ಟುವ ಸೇತುವೆ ವಿಚಾರ. ನಾನು ಲೋಕೋಪಯೋಗಿ ಮಂತ್ರಿಯಾಗಿದ್ದಾಗ ಆ ಪ್ರದೇಶದ ಜನರು ಒಂದು ಸೇತುವೆ ತುಂಗಾ ನದಿಗೆ ಅವಶ್ಯಕವೆಂತ ಹೇಳುತ್ತಾ ಇದ್ದರು. ನನ್ನ ಹತ್ತಿರ ಮ್ಯಾಪ್ ಇದೆ. ಆದರೆ ಸಭೆಗೆ ಮತ್ತು ಸರಕಾರಕ್ಕೆ ತಿಳಿಯುವ ಮಟ್ಟಿಗೆ ಹೇಳುವುದಾದರೆ, ತುಂಗಾನದಿ ನಮ್ಮ ಊರಿನ ಆಚೆಗೆ ಇದೆ. ಗೋಪಾಲಗೌಡರು ಕೂತಿರುವ ದಿಕ್ಕಿನಲ್ಲಿ ತೀರ್ಥಹಳ್ಳಿ ಇದೆ. ನಮ್ಮ ಊರಿಗೆ ಸೇತುವೆ ಬೇಕಾಗಿಲ್ಲ. ನದಿಯ ಆಚೆ ಇರುವ ಸುಮಾರು 20 ಹಳ್ಳಿಗಳವರು ಮಳೆಗಾಲದಲ್ಲಿ ನದಿಯನ್ನು ದಾಟುವುದಕ್ಕೆ ಆಗುವುದಿಲ್ಲ. ಆಸ್ಪತ್ರೆಗೆ ಮತ್ತು ತಾಲ್ಲೂಕು ಆಫೀಸಿಗೆ ಬರಬೇಕಾದರೆ 20 ಮೈಲಿಗಳ ದೂರ ಬಳಸಿ ಅವರು ಬರಬೇಕು. ಈ ಸೇತುವೆಯನ್ನು 1957ನೆ ಇಸವಿಯಲ್ಲಿ ನಾನು ಮಂತ್ರಿಯಾಗದೆ ಇದ್ದಾಗ, ಶ್ರೀ ವೀರಣ್ಣಗೌಡರು ಕಟ್ಟಿಸಬೇಕು ಅಂತ ಹೇಳಿ ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡಿದರು— ಸೆಂಟ್ರಲ್ ರೋಡ್ ಫಂಡ್ ಹಣವನ್ನು ಅಪೇಕ್ಷೆಮಾಡಿ. 1958ನೇ ಇಸವಿ ಮಾರ್ಚಿ ತಿಂಗಳಿನಲ್ಲಿ ಆ ಸೇತುವೆ ಕಟ್ಟಬೇಕು ಅಂತ ಹೇಳಿ ಮಂಜೂರಾತಿ ಕೊಟ್ಟರು. ಆಗಲೂ ನಾನು ಮಂತ್ರಿಯಾಗಿರಲಿಲ್ಲ. 1959ನೇ ಇಸವಿಯಲ್ಲಿ ನಾನು ಮಂತ್ರಿಯಾದೆ. ಪುನಃ ಆಗ ಕೆಲವರು ಇವರು ಊರಿಗೆ ಮಾಡಬೇಕು ಅಂತ ಇದನ್ನು ಮಾಡಿದ್ದಾರೆ. ಆದ್ದರಿಂದ ಅಲ್ಲಿ ಕಟ್ಟಬಾರದು ಬೇರೆಕಡೆ ಕಟ್ಟಬೇಕು ಎಂದು ಹೇಳಿದರು. ಅದರಮೇಲೆ ಸ್ವಲ್ಪಮಟ್ಟಿಗೆ ಚರ್ಚೆ, ವಾದ ವಿವಾದ ನಡೆದು, ನಂತರ ಶ್ರೀ ಚನ್ನಬಸಪ್ಪನವರಿಗೆ ಕಾಗದ ಬರೆದೆ, ಅದು ನನಗೆ ಉಪಯೋಗವಾಗುವುದಿಲ್ಲ, ತಜ್ಞರಿಂದ ತನಿಖೆ ನಡೆಸಿ, ಎಲ್ಲಿ ಸಾಧ್ಯವೋ ಅಲ್ಲಿ ಕಟ್ಟಿಸಿ ಅಂತ ಹೇಳಿ ಆಮೇಲೆ ಇಬ್ಬರು ಚೀಫ್ ಇಂಜಿನಿಯರುಗಳು ಹೋಗಿ ಅಲ್ಲಿ ತನಿಖೆ ನಡೆಸಿಬಿಟ್ಟು, ವಿವರದಲ್ಲಿದ್ದ 2 ಸೈಟುಗಳನ್ನು ಬಿಟ್ಟು ಮೂರನೇ ಸೈಟಿನಲ್ಲಿ ಕಟ್ಟಬಹುದೆಂದು ತೀರ್ಮಾನಮಾಡಿದರು. ಅಲ್ಲಿಗೆ ವಿವಾದ ನಿಲ್ಲಲಿಲ್ಲ. ಚನ್ನಬಸಪ್ಪನವರೇ ಖುದ್ದಾಗಿ ಹೋಗಿ ಪರಿಶೀಲನೆ ಮಾಡಿಬಿಟ್ಟು, ಇಂಜಿನಿಯರುಗಳು ಸೆಲೆಕ್ಟ್ ಮಾಡಿದ ಸೈಟುಗಳನ್ನು ಒಪ್ಪಿದರು. ಅನಂತರ ಟೆಂಡರ್ ಕರೆಯಲಾಯಿತು. ಟೆಂಡರು ಕರೆದಾಗ ರೇಟು ಸರಿಬರಲಿಲ್ಲ ಅಂತ ಹೇಳಿಬಿಟ್ಟು 2ನೇ ಸಾರಿ ಟೆಂಡರು ಕರೆದರು. ಆಗ ಕೆಲವರಿಂದ ನನ್ನಮೇಲೆ ಅಪಾದನೆ ಬಂತು. ಏನೆಂದರೆ ಕಡಿದಾಳ್ ಮಂಜಪ್ಪನವರ ಕೈವಾಡದಿಂದ ಸೇತುವೆಯ ನಿವೇಶನವನ್ನು ನಿಗದಿ ಮಾಡಿದ್ದಾರೆ, ಕಡಿದಾಳ್ ಮಂಜಪ್ಪನವರ ಊರಿಗೆ ಉಪಯೋಜನವಾಗುತ್ತದೆ, ಅವರ ಮನೆಗೆ ಉಪಯೋಗವಾಗುತ್ತದೆ ಎಂದು. ನಾನು ಮತ್ತು ನನ್ನ ಹೆಂಡತಿ ಸೇತುವೆಯಮೇಲೆ ಪ್ರತಿಸಾಯಂಕಾಲ ಗಾಳಿ ಸವಾರಿಗೆ ಹೋಗಬೇಕಾದ ಪ್ರಮೇಯವಿಲ್ಲ. ನನ್ನ ಮಗ ನದಿಯ ಆಚೆ ಇದ್ದುಕೊಂಡು ಕಂಟ್ರಾಕು

(ಶ್ರೀ ಕಡಿದಾಳ್ ಮಂಜಪ್ಪ)

ಮಾಡುತ್ತಾ ಇಲ್ಲ. ನನ್ನ ನೇಟರಿಷ್ಟರ್‍ಯಾರೂ ನದಿಯ ಆಚೆ ಇಲ್ಲ. ನದಿಯ ಆಚೆ ನಮಗೆ ಆಸ್ತಿಯಿಲ್ಲ. ಜತ್ತಿಯವರು ನನ್ನಮನೆ ನೋಡಿದ್ದಾರೆ. ಶ್ರೀಮತಿ ಸುಬ್ಬಮ್ಮನವರೂ ನೋಡಿದ್ದರೆಂದು ಅಂದು ಕೊಂಡಿದ್ದೇನೆ. ವೈಯುಕ್ತಿಕವಾಗಿ ನನಗೆ ಸೇತುವೆಯಿಂದ ಪ್ರಯೋಜನವಿಲ್ಲ.

ಏಕೆ ಹೇಳುತ್ತಿದ್ದೇನೆಂದರೆ, ನನ್ನ ಹೆಸರು ನಮೂದಿಸಿ ಕೆಲವರು ಅರ್ಜಿಕೊಟ್ಟ ತಕ್ಷಣ ಒಂದು ಕಾಂಗಾರಿಯನ್ನು ನಿಲ್ಲಿಸುವುದೆಂದರೆ, ನಾನು ಬಹಳ ಕೆಟ್ಟವನಾಗಿರಬೇಕು. ಒಂಭತ್ತು ವರ್ಷ ದಿಂದ ರಾಜ್ಯದಮಂತ್ರಿಯಾಗಿ ರಾಜ್ಯದಲ್ಲಿ ಹಲವು ಕ್ಷೇತ್ರಗಳಲ್ಲಿ ದುಡಿದು ಈ ಒಂದು ವಿಚಾರದಲ್ಲಿ ನಾನು ಕೆಟ್ಟವನಾಗುವುದಾದರೆ ಸಾರ್ವಜನಿಕ ಕ್ಷೇತ್ರದಲ್ಲಿ ಇರುವುದಕ್ಕೆ ನಾನು ಲಾಯಕ್ಕಲ್ಲ. ಅದ ಕ್ಕೋಸ್ಕರ ಸರ್ಕಾರಕ್ಕೆ ಎರಡು ಸಲಹೆ ಮಾಡುತ್ತೇನೆ. ಸರ್ಕಾರಕ್ಕೆ 25—50—100—300 ಜನರು ಅರ್ಜಿ ಕೊಟ್ಟಿರಬಹುದು. ಆ ಅರ್ಜಿಯ ಆಧಾರದಮೇಲೆ ಕೆಲಸವನ್ನು ನಿಲ್ಲಿಸಲಾಗಿದೆ. ತಮಗೆ ಸಾರ್ವಜನಿಕ ಅಭಿಪ್ರಾಯ ಬೇಕಾಗಿದ್ದರೆ ತೀರ್ಥಹಳ್ಳಿ ಮತ್ತು ಕೊಪ್ಪ ತಾಲ್ಲೂಕಿನಲ್ಲಿ ಈ ಒಂದು ಇಶ್ಯು ಮೇಲೆ ಒಂದು ರೆಫರೆಂಡಮ್ ತೆಗೆಯಿರಿ. ರೆಫರೆಂಡಮ್ ನನಗೆ ವಿರುದ್ಧವಾಗಿ ತೀರ್ಮಾನವಾದರೆ ನಾನು ರಾಜಕೀಯ ಬಿಡುತ್ತೇನೆ, ಸಾರ್ವಜನಿಕ ಜೀವನ ಖೈದು ಮಾಡುತ್ತೇನೆ. ಅದು ಸಾಕಾಗದೆ ಹೋದರೆ, ಶಿವಮೊಗ್ಗ ಮತ್ತು ಚಿಕ್ಕಮಗಳೂರು—ಈ ಎರಡು ಡಿಸ್ಟ್ರಿಕ್ಟುಗಳಲ್ಲಿ ರೆಫರೆಂಡಮ್ ತಗೆಯಿರಿ. ಆಗಲೂಕೂಡ ರಾಜಕಾರಣವನ್ನು ಬಿಡುತ್ತೇನೆ. ಅದೂ ಇಲ್ಲದಿದ್ದರೆ, ನನ್ನ ಕೈವಾಡ ಏನಿದೆ ಎಂಬುದರ ಬಗ್ಗೆ ವಿಚಾರಣೆ ಮಾಡಿಬಿಟ್ಟು ನಾನು ತಪ್ಪಿತಸ್ಥನೆಂದು ಹೇಳಿದರೆ ಸರಕಾರದವರು ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ. ಇದು ಕಾಂಗ್ರೆಸ್ ಸರಕಾರ, ನಾನೂ ಕಾಂಗ್ರೆಸ್ ವ್ಯಕ್ತಿ. ವೈಯಕ್ತಿಕವಾಗಿ ಈ ಸೇತುವೆ ಇಲ್ಲದೆ ಇರುವು ದರಿಂದ ನನಗೆ ಏನೂ ನಷ್ಟವಾಗುವುದಿಲ್ಲ. ಆದರೆ ಯಾರೋ ಅರ್ಜಿಕೊಟರು ಅಂತ ಹೇಳಿ ಆ ಸೇತು ವೆಯ ಕೆಲಸವನ್ನು ಬಿಟ್ಟು, ಆ ದುಡ್ಡನ್ನು ಬೇರೆ ಉಪಯುಕ್ತವಾದ ಕೆಲಸಕ್ಕೆ, ಕಾಂಗಾರಿಗೆ ಹೇಗೆ ಉಪಯೋಗಿಸಿದರು ಅಂತ ಹೇಳಿದರೆ ನನಗೆ ಇದರ ಅರ್ಥ ಗೊತ್ತಾಗುವುದಿಲ್ಲ.

ಸ್ವಾಮಿ, ಇನ್ನೂ ಅನೇಕ ವಿಷಯಗಳನ್ನು ನಾನು ಪ್ರಸ್ತಾಪಿಸಬೇಕಾಗಿತ್ತು. ಆದರೆ ಈ ಸಭೆಯ ಕಾಲವನ್ನು ಹೆಚ್ಚಿಗೆ ತೆಗೆದುಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ. ಮುಂದೆ ಬೇಡಿಕೆಗಳು ಬಂದಾಗ ಕೆಲವು ಪ್ರಾಮುಖ್ಯವಾದ ವಿಚಾರಗಳನ್ನು ಪ್ರಸ್ತಾಪ ಮಾಡಬೇಕೆಂದಿದ್ದೇನೆ. ಮುಖ್ಯವಾಗಿ ಪಾನ ನಿರೋಧದ ವಿಚಾರ, ಅಧಿಕಾರಿಗಳ ನೇಮಕದ ವಿಚಾರ, ಮತ್ತು ವಿದ್ಯಾ ಇಲಾಖೆಯ ಬಗ್ಗೆ ಕೆಲವು ಪ್ರಾಮುಖ್ಯವಾದ ಅಂಶಗಳನ್ನು ಪ್ರಸ್ತಾಪಿಸಬೇಕೆಂದಿದ್ದೇನೆ. ಇಷ್ಟು ಸಮಯವನ್ನು ಕೊಟ್ಟಿದ್ದಕ್ಕೆ ಅಧ್ಯಕ್ಷರನ್ನು ವಂದಿಸಿ ನನ್ನಮಾತನ್ನು ಮುಗಿಸುತ್ತೇನೆ.

[MR. DEPUTY SPEAKER in the Chair]

ಶ್ರೀ ಸಿ. ಆರ್. ರಂಗೇಗೌಡ (ಮಾಗಡಿ).—ಪೂಜ್ಯ ಸಭಾಪತಿಯವರೆ, ನಮ್ಮ ಆರ್ಥಿಕ ಮಂತ್ರಿ ಗಳು ಮಂಡಿಸಿರುವ 1964—65ನೇ ಸಾಲಿನ ಅಂದಾಜು ಪಟ್ಟಿಯನ್ನು ಅನುಮೋದಿಸುತ್ತಾ ಕೆಲವು ಸಲಹೆಗಳನ್ನು ಸರಕಾರದ ಮುಂದೆ ಇಡಬಯಸುತ್ತೇನೆ.

ಸರಕಾರದವರು 1962-63ನೇ ಸಾಲಿಗೆ 9,181.48 ಲಕ್ಷ, 1963-64ನೆ ಸಾಲಿಗೆ 9,911.52 ಲಕ್ಷ ನಿರೀಕ್ಷಿಸಿದ್ದು, ಈಗ 1964-65ನೇ ಸಾಲಿಗೆ 11,106.03 ಲಕ್ಷ ರೂಪಾಯಿಗಳನ್ನು ನಿರೀಕ್ಷಿಸಿ ದ್ದಾರೆ. ಆದರೆ ಸರ್ಕಾರದವರು ಇನ್ನೂ ಸ್ವಲ್ಪ ಮುತುವರ್ಜಿ ವಹಿಸಿದ್ದರೆ ಇನ್ನೂ ಹೆಚ್ಚಿನ ಹಣ ವನ್ನು ನಿರೀಕ್ಷಿಸಬಹುದಾಗಿತ್ತು ಎಂದು ಹೇಳುವುದಲ್ಲದೆ, ಈ ಸಂದರ್ಭದಲ್ಲಿ ಕೆಲವು ಸಲಹೆಗಳನ್ನು ಮಾಡಲೂ ಸಿದ್ಧನಾಗಿದ್ದೇನೆ.

ಈಗಾಗಲೇ ಈ ವೇಳೆಗೆ 1—2—3ನೆಯ ಪಂಚವಾರ್ಷಿಕ ಯೋಜನೆಯಲ್ಲಿ ಒಂದು—ಎರಡನೆಯ ಯೋಜನೆಗಳನ್ನು ಕಳೆದಿದ್ದೇವೆ. 3ನೇ ಪಂಚವಾರ್ಷಿಕ ಯೋಜನೆ ಮುಗಿದು 4ನೇ ವರ್ಷಕ್ಕೆ ಕಾಲು ಇಡುತ್ತಾ ಇದ್ದೇವೆ. ಈ ಸಂದರ್ಭದಲ್ಲಿ ಕೂಡ ಸರಕಾರದವರು ಬೇಕಾದಷ್ಟು ಹಣ ಅಭಿವೃದ್ಧಿ ಕಾರ್ಯ ಗಳ ಮೇಲೆ ಖರ್ಚುಮಾಡುತ್ತಾ ಇದ್ದೇವೆ. ಆದರೆ ಎಷ್ಟೆಷ್ಟು ಹಣದಿಂದ ಯಾವಯಾವ ಜಾಗಕ್ಕೆ ಎಷ್ಟು ಅನುಕೂಲವಾಗಿದೆ, ಏನೇನು ಪ್ರತಿಫಲ ನಮಗೆ ಉಂಟಾಗಿದೆ ಅನ್ನುವುದನ್ನು ಸರ್ವೆ ನಡೆಸಿ ತಿಳಿಸಿದ್ದರೆ ಬಹಳ ಚೆನ್ನಾಗಿರುತ್ತಿತ್ತು. ಸರಕಾರದವರು ಕೈಬಿಟ್ಟಿರುವ ಕೆಲವು ವಿಷಯಗಳನ್ನು ಸರಕಾರದ ಗಮನಕ್ಕೆ ತರಬೇಕಾಗಿದೆ.

ಬೆಂಗಳೂರು ಪಟ್ಟಣದಲ್ಲಿ ಹಾಗೂ ಜಿಲ್ಲಾಕೇಂದ್ರಗಳು ಮತ್ತು ತಾಲ್ಲೂಕು ಹೆಡ್‌ಕ್ವಾರ್ಟರುಗಳಲ್ಲಿ ಬೇಕಾದಷ್ಟು ಕಟ್ಟಡಗಳ ಕೆಲಸ ನಡೆಯುತ್ತಾ ಇದೆ. ಈ ಕಟ್ಟಡಗಳಿಗೆ ಕಲ್ಲು, ಇಟ್ಟಿಗೆ, ಮರಳು ಮುಂತಾದ ಸಾಮಾನುಗಳನ್ನು ಬೇಕಾದಷ್ಟು ಹೊರಗಡೆಯಿಂದ ತರುತ್ತಾ ಇದ್ದಾರೆ. ಅದಕ್ಕೆ ರಾಯಲ್ಟಿ ವಸೂಲು ಮಾಡುತ್ತಾ ಇಲ್ಲ. ಸರಕಾರಿ ಕಟ್ಟಡಗಳಿಗೆ ಕಂಟ್ರಾಕ್ಟುದಾರರಿಂದ ವಸೂಲು ಮಾಡುತ್ತಾ ಇದ್ದಾರೆ. ಖಾಸಗಿಯವರ ಕಟ್ಟಡಗಳಿಗೆ ಒದಗಿಸುವ ಇಟ್ಟಿಗೆ, ಕಲ್ಲು, ಮರಳು ಇತ್ಯಾದಿಗಳಿಗೆ ರಾಯಲ್ಟಿ ವಸೂಲು ಮಾಡುತ್ತಾ ಇಲ್ಲ. ಬೆಂಗಳೂರು ಜಿಲ್ಲೆಗೆ ನಮ್ಮ ತಾಲ್ಲೂಕಿನಿಂದ ಸಾವಿರಾರು ಲಾರಿಗಳ ಲೋಡಿನಷ್ಟು ಮರಳು, ಕಲ್ಲು ಸಪ್ಲೈ ಮಾಡುತ್ತಾ ಇದ್ದಾರೆ. ಯಾರು ಸಪ್ಲೈ ಮಾಡುತ್ತಿದ್ದಾರೆ, ಎಷ್ಟು ರಾಯಲ್ಟಿ ಅವರಿಂದ ವಸೂಲು ಮಾಡಿದ್ದಾರೆ, ಯಾರಾದರೂ ವಸೂಲು ಮಾಡಿದ್ದಾರೆಯೋ, ಬೆಂಗಳೂರು ಸಿಟಿಗೆ ಮತ್ತು ಜಿಲ್ಲೆಗೆ ಹೊರಗಡೆಯಿಂದ ಬಂದ ಸಾಮಾನುಗಳಿಗೆ ಎಷ್ಟು ಹಣವನ್ನು ವಸೂಲು ಮಾಡಿದೆ ಎಂಬುದನ್ನು ಉತ್ತರ ಕೊಡುವ ಸಂದರ್ಭದಲ್ಲಿ ಹೇಳಬೇಕು.

ನಮ್ಮ ದೇಶದಲ್ಲಿ ರೆವಿನ್ಯೂ ಇಲಾಖೆಗೆ ಸೇರಿದ ಅಮುಂರಾಯಿ ಮರಗಳು ಇವೆ. ರೆವಿನ್ಯೂ ಇಲಾಖೆಯವರು ಅವುಗಳನ್ನು ಹಾಳಾಗುವುದನ್ನು ನೋಡದೆ, ಇಂಟರೆಸ್ಟೆಡ್ ಪಾರ್ಟೀಸ್ ಯಾರು ಇರುತ್ತಾರೆಯೋ ಅವರ ಹೇಳಿಕೆಯ ಮೇಲೆ ಆ ಮರಗಳನ್ನು ಹರಾಜು ಮಾಡುತ್ತಾರೆ. ನೂರಾರು ರೂಪಾಯಿಗಳ ಬೆಲೆ ಬಾಳತಕ್ಕ ಮರಗಳನ್ನು 10–15 ರೂಪಾಯಿಗಳಿಗೆ ಹರಾಜು ಮಾಡಿ ಸರಕಾರದವರಿಗೆ ನಷ್ಟವಾಗುತ್ತಾ ಇದೆ. ಅದರ ಮೇಲೆ ತೀವ್ರವಾದ ಗಮನವಿಟ್ಟು ಹೆಚ್ಚು ಬೆಲೆಗೆ ಹರಾಜು ಮಾಡಿದರೆ ಸರಕಾರದವರಿಗೆ ಬೇಕಾದಷ್ಟು ಉತ್ಪನ್ನ ಬರುತ್ತದೆ ಎಂದು ನಾನು ಸಲಹೆ ಮಾಡುತ್ತೇನೆ.

ದೇವಸ್ಥಾನಗಳಿಗೆ ನಮ್ಮ ದೇಶದಲ್ಲಿ ಬೇಕಾದಷ್ಟು ಜಮೀನುಗಳು ಇವೆ. ಅವು ಬಹಳ ಉತ್ಕೃಷ್ಟವಾದ ಜಮೀನುಗಳು. ಹಿಂದಿನ ಕಾಲದ ಜನತೆ ಅವುಗಳನ್ನು ದೇವಸ್ಥಾನಗಳಿಗೆ ಮಾನ್ಯವಾಗಿ ಕೊಟ್ಟಿದ್ದರು, ಅವು ಉತ್ಕೃಷ್ಟವಾದುವು ಮತ್ತು ಫಲವತ್ತಾದ ಜಮೀನುಗಳಾಗಿವೆ. ಸದರಿ ಜಮೀನುಗಳನ್ನು ಎಕರೆಗೆ 5–6 ರೂ. ನಂತೆ ಗುತ್ತಿಗೆಗೆ ಕೊಡಲಾಗುತ್ತೆ. ಅವುಗಳನ್ನು ವ್ಯವಸಾಯಕ್ಕೆ ಇಟ್ಟುಕೊಂಡು ಪಂಚಸಾಲು ಗುತ್ತಿಗೆಗೆ ಕೊಟ್ಟಿದ್ದಾರೆ ಅವನ್ನು ಮತ್ತೆ ಹರಾಜು ಮಾಡಿಸಿದ್ದರೆ ದೇಶಕ್ಕೆ ಬೇಕಾದಷ್ಟು ದುಡ್ಡು ಬರುತ್ತಾ ಇತ್ತು, ಅದನ್ನು ಕಡೆಗಾಣಿಸಿದ್ದಾರೆ. ಆ ಬಗ್ಗೆ ತೀವ್ರ ಕ್ರಮ ಕೈಕೊಂಡು ಹೆಚ್ಚಿನ ದುಡ್ಡು ಬರುವುದಕ್ಕೆ ವ್ಯವಸ್ಥೆ ಮಾಡಬೇಕು.

ಹಾಗೆಯೇ ಮೊದಲು ಸಾಲುಮರಗಳು ರೆವಿನ್ಯೂ ಇಲಾಖೆಗೆ ಸೇರಿತ್ತು. ಈಗ ಅವನ್ನು ಪಿ. ಡಬ್ಲ್ಯು. ಇಲಾಖೆಗೆ ಸೇರಿಸಿದ್ದಾರೆ. ನನಗೆ ಈ ಸಂದರ್ಭದಲ್ಲಿ ಒಂದು ವಿಷಯ ಜ್ಞಾಪಕಕ್ಕೆ ಬರುತ್ತದೆ. ಹಿಂದೆ ವಿಶ್ವೇಶ್ವರಯ್ಯನವರು ಎಲ್ಲೋ ಒಂದು ಕಡೆ ಭಾಷಣ ಮಾಡುತ್ತಾ ಯಾರೋ ಕೆಲವರು ಸರಕಾರದವರು ಬಹಳ ಸಾಲ ಮಾಡುತ್ತಾ ಇದ್ದಾರೆ ಎಂದು ಹೇಳಿದಾಗ ಅದಕ್ಕೆ ಉತ್ತರವಾಗಿ ಅವರು ಸರಕಾರದವರು ಎಷ್ಟೇ ಸಾಲ ಮಾಡಿದರೂ ಕೂಡ ಪರವಾಗಿಲ್ಲ; ರಸ್ತೆ ಪಕ್ಕದಲ್ಲಿರತಕ್ಕ ಸಾಲು ಮರಗಳನ್ನು ಮಾರಿ ಅವನ್ನು ತೀರಿಸಬಹುದು ಎಂದು ಹೇಳಿದರು. ಈಗ ಅವುಗಳನ್ನು ಹೇಳುವವರು ಕೇಳುವವರು ಇಲ್ಲದಂತಾಗಿದೆ. ಪಿ ಡಬ್ಲ್ಯು ಡಿ. ಅವರು 200–300 ರೂಪಾಯಿ ಬೆಲೆ ಬಾಳತಕ್ಕ ಮರಗಳನ್ನು 10–15 ರೂಪಾಯಿಗಳಿಗೆ ಮಾರಿದ್ದಾರೆ; ಈ ವಿಷಯದಲ್ಲಿ ತೀವ್ರ ಕ್ರಮ ಕೈಕೊಳ್ಳಬೇಕು.

ಹಾಗೆಯೇ ನಮ್ಮ ದೇಶದಲ್ಲಿ ಬಡವರಿಗೆ ಗೋಮಾಳಗಳನ್ನು ಕೊಟ್ಟು ಅವರು ಅವರಲ್ಲಿ ಉಳುಮೆ ಮಾಡಿದ್ದಾರೆ. ಅದನ್ನು ಅವರಿಗೇ ಖಾಯಂ ಮಾಡಿ ಅಪ್‌ಸೆಟ್‌ಪ್ರೈಸ್‌ಗೆ ಮಾರಿದರೆ ಖಂಡಿತವಾಗಿಯೂ ಸರಕಾರದವರಿಗೆ ಹಣ ಬರುತ್ತದೆ. ಈಗ ಏನಾಗಿದೆ ಎಂದರೆ ಇವಿಕ್ಷನ್ ಆರ್ಡರ್ ಕೊಟ್ಟಿದ್ದಾರೆ ಆದರೆ ಜಮೀನು ಮಾತ್ರ ಅವರ ಸ್ವಾಧೀನದಲ್ಲೇ ಇದೆ. ಆದ್ದರಿಂದ ಅವುಗಳನ್ನು ಅವರಿಗೇ ಆಪ್‌ಸೆಟ್ ಪ್ರೈಸ್‌ಗೆ ಕೊಡುವುದರಿಂದ ಒಳ್ಳೆಯ ಬೆಲೆ ಬರುತ್ತದೆ ಎಂದು ಹೇಳುತ್ತೇನೆ.

ಹಾಗೆಯೇ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಅವುಗಳ ಸುತ್ತಮುತ್ತಲೂ ಇರತಕ್ಕ ಪ್ರದೇಶಗಳನ್ನು ವ್ಯವಸಾಯಕ್ಕೆ ಅನುಕೂಲವಾಗಿರತಕ್ಕ ಪ್ರದೇಶಗಳನ್ನು ಕನ್‌ವರ್ಟ್ ಮಾಡಿ ಅವುಗಳನ್ನು ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಉಪಯೋಗಿಸುತ್ತಾ ಇದ್ದಾರೆ. ಅವಕ್ಕೆ ಕನ್‌ವರ್ಷನ್ ಫೈನ್ ಮಾತ್ರ ವಸೂಲು ಮಾಡುತ್ತಾ ಇದ್ದಾರೆ, ಕೆಲವು ಕಡೆ ನಾನ್ ಅಗ್ರಿಕಲ್ಚರಲ್ ಅಸೆಸ್‌ಮೆಂಟ್ ವಸೂಲು ಮಾಡುತ್ತಾ ಇಲ್ಲ ಎಂದು ಗೊತ್ತಾಗಿದೆ; ಅದನ್ನೂ ಕೂಡ ದಯವಿಟ್ಟು ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಮಾತನಾಡುತ್ತಾ, ಕೆಲವರು ಇನ್‌ಕಂ ಟ್ಯಾಕ್ಸ್ ಮುಂತಾದುವುಗಳನ್ನು ಕೊಡುವುದರಲ್ಲಿ ತಪ್ಪಿಸಿಕೊಳ್ಳುತ್ತಾ ಇದ್ದಾರೆ ಎಂದು ಹೇಳಿದರು. ಅದೇ ರೀತಿ ನಮ್ಮ ರಿಜಿಸ್ಟ್ರೇಷನ್ ಆಫೀಸುಗಳಲ್ಲಿ ಬೇಕಾದಷ್ಟು ಕಾಗದಪತ್ರಗಳು ರಿಜಿಸ್ಟರ್ ಆಗುತ್ತವೆ, ಹೆಚ್ಚು ಬೆಲೆ ಬಾಳತಕ್ಕ ಆಸಿ ಪಾಸ್ತಿಗಳನ್ನು ಮಾರಾಟ ಮಾಡುವಾಗ ಸ್ಟ್ಯಾಂಪ್ ಡ್ಯೂಟಿ ತಪ್ಪಿಸಿಕೊಳ್ಳುವುದಕ್ಕೋಸ್ಕರ ಕಡಿಮೆ ಬೆಲೆಗೆ ಕಾಗದ ಪತ್ರಗಳನ್ನು ಬರೆದು ರಿಜಿಸ್ಟರ್ ಮಾಡಿಸುತ್ತಾರೆ. ಕೊಂಡವರಿಂದ ಒಂದು ವೇಳೆ ಹೆಚ್ಚು ಹಣ ಪಡೆದರೂ ಪತ್ರದಲ್ಲ ಕಡಿಮೆ ಹಣ ತೋರಿಸುವುದು ಮತ್ತು ಆಸ್ತಿಗೆ ಕಡಿಮೆ ಬೆಲೆ ನಿಗದಿ ಮಾಡುವುದನ್ನು ಈ ವಿಷಯದಲ್ಲೂ ಕೂಡ ಸರಕಾರದವರು ತೀವ್ರ ಗಮನ

(ಶ್ರೀ ಕಡಿದಾಳ್ ಮಂಜಪ್ಪ)

ಕೊಟ್ಟು ಬರಬೇಕಾದ ಹಣವನ್ನು ಸರಿಯಾಗಿ ವಸೂಲು ಮಾಡಿದರೆ ಈಗ 11,106.03 ಎಂದು ಏನು ಅಂದಾಜು ಆಗಿದೆ ಅದಕ್ಕಿಂತ ಹೆಚ್ಚು ಆದಾಯ ಬರುತ್ತದೆ ಎಂದು ನಾನು ಸಲಹೆ ಮಾಡುತ್ತೇನೆ.

ಹಾಗೆಯೇ ನಮ್ಮ ಆರ್ಥಿಕ ಮಂತ್ರಿಗಳು ನಮಗೆ ಕೊಟ್ಟಿರುವ ಈ ವರದಿಯಲ್ಲಿ ಉದ್ಯೋಗವನ್ನು ಕಳೆದುಕೊಂಡ ಅಕ್ಕಸಾಲಿಗರಿಗೆ 950 ಎಕರೆಗಳಷ್ಟು ಭೂಮಿಯನ್ನು 307 ಜನಗಳಿಗೆ ಹಂಚಿದ್ದೇವೆ ಎಂದು ಹೇಳಿದ್ದಾರೆ. ಎಲ್ಲೆಲ್ಲಿ ಹಂಚಿದ್ದಾರೆ, ಯಾರ್ಯಾರಿಗೆ ಹಂಚಿದ್ದಾರೆ ಎಂಬುದನ್ನು ನಮಗೆ ತಿಳಿಸಿಲ್ಲ. ಜಮೀನನ್ನು ಕೊಟ್ಟರೂ ಕೂಡ ಪ್ರಥಮವಾಗಿ ವ್ಯವಸಾಯ ಮಾಡುವ ಮನುಷ್ಯನಿಗೆ ಬರೀ ಜಮೀನಿನಿಂದ ಪ್ರಯೋಜನವಾಗುವುದಿಲ್ಲ, ಅದಕ್ಕೆ ಬೇಕಾದ ಎತ್ತು, ಗಾಡಿ, ಗೊಬ್ಬರಕ್ಕೆ ಇನೀಷಿಯಲ್ ಕ್ಯಾಪಿಟಲ್ ಇವೆಲ್ಲಾ ಬೇಕಾಗುತ್ತದೆ. ಇವುಗಳು ಇಲ್ಲದೇ ಇದ್ದರೆ ಜಮೀನನ್ನು ನೆಪ ಮಾತ್ರಕ್ಕೆ ಕೊಟ್ಟ ಹಾಗೆ ಆಗುತ್ತದೆಯೇ ಹೊರತು ಅದರಿಂದ ವ್ಯವಸಾಯಗಾರರಿಗೆ ಯಾವ ಪ್ರಯೋಜನವೂ ಆಗುವುದಿಲ್ಲ. ಅದಕ್ಕೆ ಎಷ್ಟು ಹಣವನ್ನು ಒದಗಿಸಿದ್ದೀರೋ ಗೊತ್ತಿಲ್ಲ, ಅದನ್ನು ತಿಳಿಸಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಹಾಗೆಯೇ ಮಾನ್ಯ ಗೃಹ ಸಚಿವರು ಈಗತಾನೆ ಒಂದು ಪ್ರಶ್ನೆಗೆ ಉತ್ತರ ಹೇಳುತ್ತಾ, ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಟೂರಿಸಂಗೆ ಹಣ ಇಲ್ಲ, ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಾದರೂ ಒದಗಿಸುವುದಕ್ಕೆ ವ್ಯವಸ್ಥೆ ಮಾಡುತ್ತಾ ಇದ್ದೇವೆ ಎಂದು ಹೇಳಿದರು. ನಮ್ಮ ದೇಶಕ್ಕೆ ನಾನಾ ದೇಶಗಳಿಂದ ಬರುತ್ತಾರೆ; ಅನೇಕ ಪ್ರೇಕ್ಷಣೀಯವಾದ ಸ್ಥಳಗಳು ಇವೆ; ಅಲ್ಲಿಗೆ ಅವರನ್ನು ಆಕರ್ಷಣೆ ಮಾಡುವ ವಿಷಯದಲ್ಲಿ ಏಕೆ ಈ ರೀತಿ ಅನಾದರಣೆ ತೋರಿಸಿದ್ದಾರೆಯೋ ಗೊತ್ತಿಲ್ಲ. ನಮ್ಮ ದೇಶದಲ್ಲಿ ಪ್ರತಿಯೊಂದು ಕಡೆಯಲ್ಲೂ ಒಂದೊಂದು ಟೂರಿಸ್ಟ್ ಸೆಂಟರ್ ಇದೆ. ಅದರ ಫೋಟೋ ತೆಗೆದುಕೊಂಡು ಬಸ್‌ಸ್ಟ್ಯಾಂಡ್‌ಗಳಲ್ಲಿ ಮತ್ತು ನಮ್ಮ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ, ಏರೋಡ್ರೋಮ್‌ಗಳಲ್ಲಿ ಅವುಗಳನ್ನು ಡಿಸ್‌ಪ್ಲೇ ಮಾಡಿದರೆ ತುಂಬ ಪ್ರಯೋಜನವಾಗುತ್ತದೆ. ಆ ರೀತಿ ಮಾಡುವುದು ಸೂಕ್ತ ಎಂದು ಸಲಹೆ ಮಾಡುತ್ತೇನೆ. ಅದೇ ರೀತಿ ಆ ಫೋಟೋಗಳನ್ನು ಪ್ರತಿ ಪಂಚಾಯ್ತಿ ಮತ್ತು ಸ್ಕೂಲುಗಳಿಗೂ ಹಂಚಬೇಕು ಹಾಗೆ ಮಾಡಿದರೆ ನಮ್ಮ ದೇಶದಲ್ಲಿ ಪ್ರಕೃತಿ ಸೌಂದರ್ಯ ಏನು ಇದೆ ಎಂಬುದು ಜನರಿಗೆ ಅರ್ಥವಾಗುತ್ತದೆ. ಅದಕ್ಕೆ ಸರಕಾರದವರು ಏನು ವ್ಯವಸ್ಥೆ ಮಾಡಬೇಕೋ ಅದನ್ನು ಮಾಡಿ ಪ್ರವಾಸಿಗಳಿಗೆ ಒಂದು ಕೈಪಿಡಿಯನ್ನು ತಯಾರುಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಹಾಗೆಯೇ ನಮ್ಮ ದೇಶದಲ್ಲಿ 1964–65ನೇ ಸಾಲಿಗೆ 38.56 ಲಕ್ಷ ರೂಪಾಯಿಗಳನ್ನು ಫ್ಯಾಮಿಲಿ ಪ್ಲಾನಿಂಗ್‌ಗೆ ಅಳವಡಿಸಲಾಗಿದೆ ಎಂದು ಹೇಳಿದರು. ಏಕೆ ಅಳವಡಿಸಿದ್ದಾರೋ ಗೊತ್ತಿಲ್ಲ. ಅಥವಾ ಅದರಿಂದ ಏನು ಪ್ರಯೋಜನವಾಗುತ್ತದೆ ಎಂದು ತಿಳಿದುಕೊಂಡಿದ್ದಾರೋ ಅರ್ಥವಾಗುವುದಿಲ್ಲ. ಇದೇ ದುಡ್ಡನ್ನು ದೇಶದಲ್ಲಿರತಕ್ಕ ಬಡವರ ಪ್ರಗತಿಗೆ ಸಹಾಯವಾಗತಕ್ಕ ಕಾರ್ಯಗಳಿಗೆ ವಿನಿಯೋಗ ಮಾಡಿದ್ದರೆ ಬಹಳ ಚೆನ್ನಾಗಿ ಇರುತ್ತಿತ್ತು. ನನಗೆ ತಿಳಿದಮಟ್ಟಿಗೆ ಇದರ ಅವಶ್ಯಕತೆ ಬಡವರಿಗೆ ಹೆಚ್ಚಾಗಿದೆಯೇ ಹೊರತು ಶ್ರೀಮಂತರಿಗೆ ಅಲ್ಲ, ಏಕೆಂದರೆ ಅವರಿಗೆ ಬೇಕಾದಷ್ಟು ಮಾರ್ಗಗಳು ಇವೆ. ಬಡವರಿಗೆ ಇವರು ಯಾವ ರೀತಿ ಸಹಾಯ ಮಾಡಿದ್ದಾರೆ ಎಂದು ನಾನು ಕೇಳುತ್ತಾ ಇದ್ದೇನೆ. ಏಕೆಂದರೆ ನಾನು ಈ ದಿವಸ ಒಂದು ಉದಾಹರಣೆ ಕೊಡುವುದಾದರೆ ಕಾಂಟ್ರಸೆಪ್ಟೀವ್ಸ್‌ನ್ನು ಇವತ್ತಿನ ದಿವಸ ಯಾರಿಗೆ ಸಪ್ಲೈ ಮಾಡಿದ್ದಾರೆ ಎಂದರೆ ಅವಿವಾಹಿತ ತರುಣ ತರುಣಿಯರಿಗೆ. ಅವರಿಗೆ ಹಂಚುತ್ತಾ ಇರುವುದರಿಂದ ಇವತ್ತು ನಮ್ಮ ದೇಶದಲ್ಲಿ ಮಾರಲ್ ಡಿಗ್ರೆಡೇಷನ್ ಆಗುತ್ತಾ ಇದೆ, ಎಂದು ಈ ಸಂದರ್ಭದಲ್ಲಿ ಹೇಳಬೇಕಾಗಿದೆ.

ಶ್ರೀ ಎ. ಪಿ. ಅಪ್ಪಣ್ಣ (ವೀರಾಜಪೇಟೆ).—ಫ್ಯಾಮಿಲಿ ಪ್ಲಾನಿಂಗ್ ಬೇಕಾಗಿಲ್ಲ ಎಂದು ಹೇಳುತ್ತೀರಾ ?

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಅಪ್ಪಣ್ಣನವರಿಗೆ ಅಧ್ಯಕ್ಷರ ಮೂಲಕ ಒಂದು ಪ್ರಶ್ನೆಯನ್ನು ಹಾಕುತ್ತೇನೆ. ಅವಿವಾಹಿತ ತರುಣ ತರುಣಿಯರಿಗೆ ಕಾಂಟ್ರಸೆಪ್ಟೀವ್ಸ್ ಒದಗಿಸುವುದು ಸರಿಯೇ ಎಂಬುದನ್ನು ತಾವು ಹೇಳಬೇಕು.

ಶ್ರೀ ಎ. ಪಿ. ಅಪ್ಪಣ್ಣ.—ಅವುಗಳನ್ನು ಹಂಚುವಾಗ ಅವರು ವಿವಾಹಿತರೇ, ಅವಿವಾಹಿತರೇ ಎಂದು ಎಕ್ಸ್‌ಪೆರಿಮೆಂಟ್ ಮಾಡುವುದಕ್ಕೆ ಆಗುತ್ತದೆಯೇ ?

ಶ್ರೀ ಸಿ. ಆರ್. ರಂಗೇಗೌಡ.—ಜವಾಬ್ದಾರಿ ಸ್ಥಾನದಲ್ಲಿದ್ದು ದೇಶದ ಹಿತವನ್ನು ಬಯಸುವವರು ಅದನ್ನೆಲ್ಲಾ ಕೂಲಂಕಷವಾಗಿ ತಿಳಿದುಕೊಂಡು ಅವುಗಳನ್ನು ಹಂಚಬೇಕು.

ಹಾಗೆಯೇ ಫಾರೆಸ್ಟ್ ಇಲಾಖೆಯಲ್ಲಿ ಹೇಳುವುದಾದರೆ ಫಾರೆಸ್ಟ್ ಮಂತ್ರಿಗಳು ಬಹಳ ಶ್ರದ್ಧೆ ವಹಿಸಿ ಅದನ್ನು ಇಂಪ್ರೂವ್ ಮಾಡಿದ್ದಾರೆ. ಫಾರೆಸ್ಟ್‌ನಲ್ಲಿ ಎಷ್ಟು ಉತ್ಪನ್ನವಾಗುತ್ತದೆ ಅದಕ್ಕೆ ತಕ್ಕಂತೆ ಖರ್ಚು ಮಾಡುತ್ತಾ ಇಲ್ಲ. ಅಲ್ಲದೆ ಖರ್ಚು ಮಾಡುತ್ತಾ ಇರುವ ಹಣಕ್ಕೆ ತಕ್ಷಣ ಪ್ರತಿಫಲ ಅಲ್ಲಿ ದೊರೆಯುವುದು ಬಹಳ ಬಹಳ ಕಾಲವಾಗುತ್ತೆ. ಫಾರೆಸ್ಟ್ ಇಲಾಖೆಯಲ್ಲಿ ಯಾವ ಸ್ಕೀಮನ್ನು ತಗೆದುಕೊಂಡರೂ ಕೂಡ ಅದರ ಪ್ರತಿಫಲ 10-15 ವರ್ಷದಲ್ಲಿ ಬರುತ್ತದೆ. ಇದು ಹತ್ತಾರು ವರ್ಷಗಳಲ್ಲಿ ಆದಾಯ ಬರುವಂತಹ ಬಾಬು. ಆದ್ದರಿಂದ ಸರಕಾರದವರು ಅದಕ್ಕೆ ಇವತ್ತಿನ ದಿವಸ ಏನು ಹಣ ಒದಗಿಸಿದ್ದಾರೆ ಅದು ಸಾಲದು. ಇನ್ನೂ ಹೆಚ್ಚು ಹಣವನ್ನು ಕೊಡಬೇಕು. ಫಾರೆಸ್ಟ್ ಮಂತ್ರಿಗಳಿಗೆ ಗೊತ್ತು, ಅದರಲ್ಲಿ ಗೋಡಂಬಿ, ಟೀಕ್ ಮುಂತಾದ ಪ್ಲಾಂಟೇಷನ್‌ಗಳಿಗೆ ಖರ್ಚು ಮಾಡುತ್ತಾ ಇದ್ದಾರೆ. ಅದೇ ರೀತಿ ಹೆಚ್ಚು ಅಮದಾಯಿ ಬರತಕ್ಕ ತೆಂಗು, ಹುಣಸೆ, ಅಳಲೆ, ಹಿಪ್ಪೆ, ಹೊಂಗೆ ಮುಂತಾದ ಗಿಡಗಳನ್ನು ಬೆಳೆಸಬೇಕು, ಎಲ್ಲಿ ಫಲವತ್ತಾದ ಪ್ರದೇಶ ಇದೆಯೋ ಅಲ್ಲಿ ಮೆಡಿಸಿನಲ್ ಹರ್ಬ್ಸನ್ನು ಬೆಳೆಸಬೇಕು. ನಮ್ಮಲ್ಲಿ ಕೊಕೋ ಟ್ರೀ ಬೆಳೆಸುವ ಉತ್ಕೃಷ್ಟ ವಾತಾವರಣ ಮತ್ತು ಪ್ರದೇಶ ಇದೆ ಅಂತಹ ಪ್ರದೇಶದಲ್ಲಿ ಕೊಕೋ ಟ್ರೀ ಬೆಳೆಸಬೇಕೆಂದು ಹೇಳುತ್ತೇನೆ.

ಇನ್ನೊಂದು ವಿಷಯ ಏನಂದರೆ ಕಾಡಿನಲ್ಲಿ ಕೋತಿಗಳು ವಾಸ ಮಾಡುತ್ತಾ ಇದ್ದುವು. ಇವತ್ತು ಅವುಗಳೂ ಕೂಡ ಕಾಡನ್ನು ಬಿಟ್ಟು ಊರನ್ನು ಸೇರುತ್ತಾ ಇವೆ. ಸರ್ವ ಋತುವಿನಲ್ಲಿ ಫಲ ಕೊಡುವ ಬೆಳೆಗಳನ್ನು ಕಾಡಿನಲ್ಲಿ ಬೆಳೆಸಿದರೆ ಊರು ಸೇರಿರುವ ಕೋತಿಗಳು ಪುನಃ ಕಾಡನ್ನು ಸೇರುವುವು. ಆಗ ಅವುಗಳಿಂದ ರೈತರಿಗೆ ನಷ್ಟವಾಗುವುದನ್ನೂ ಕೂಡ ತಪ್ಪಿಸಬಹುದು. ಆದ್ದರಿಂದ ಸರ್ವ ಋತುವಿನಲ್ಲಿ ಫಲ ಕೊಡುವಂತಹ ಮರಗಳನ್ನು ಬೆಳೆಸಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಫಿಷರೀಸ್ ವಿಚಾರದಲ್ಲಿ ಒಂದು ಮಾತು. ಅವುಗಳ ಸಾಗಾಣಿಕೆಯ ಒಂದು ಸೌಲಭ್ಯವನ್ನು ಕಲ್ಪಿಸಿಕೊಡುವುದಕ್ಕೆ 25 ಸಾವಿರ ರೂಪಾಯಿಗಳನ್ನು ಮಾತ್ರ ಅಳವಡಿಸಿದ್ದಾರೆ. ದೇಶದ ಎಲ್ಲಾ ಭಾಗಗಳಿಂದ ಈ ಮೀನುಗಳನ್ನು ಟ್ರಾನ್ಸ್‌ಪೋರ್ಟ್ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ಎಂಬುದನ್ನು ಇಷ್ಟು ಹಣದಿಂದ ಎಂಬುದನ್ನು ಅವರು ಪರಿಶೀಲನೆ ಮಾಡಬೇಕು. ಹಾಗೆಯೇ ಆರ್ಟಿಫಿಷಿಯಲ್ ಬ್ರೀಡಿಂಗ್ ವ್ಯವಸ್ಥೆ ಮಾಡಿದ್ದಾರೆ. ಎಲ್. ಎಸ್. ರಾಮಸ್ವಾಮಿ ಎಂಬುವರು ಸೆಂಟ್ರಲ್ ಕಾಲೇಜಿನಲ್ಲಿ ಪ್ರೊಫೆಸರ್ ಆಗಿದ್ದಾರೆ. ಅವರು ಕ್ಯಾಟ್‌ಫಿಷ್ ಮೇಲೆ ಪ್ರಯೋಗ ನಡೆಸಿ 18 ಗಂಟೆಗಳಲ್ಲಿ ಈ 1 ಲಕ್ಷ ಫಿಷ್‌ಸೀಡ್ ಬರುವ ಹಾಗೆ ಮಾಡಲು ಒಂದು ರೀತಿಯಲ್ಲಿ ಇಂಜಕ್ಷನ್ ಕೊಟ್ಟು ತಯಾರು ಮಾಡಲು ಪ್ರಯತ್ನಪಟ್ಟಿದ್ದಾರೆ. ಈ ರೀತಿ ಆರ್ಟಿಫಿಷಿಯಲ್ ಬ್ರೀಡಿಂಗ್‌ಗೆ ವ್ಯವಸ್ಥೆ ಮಾಡಿದ್ದಾರೆ. ಇದನ್ನು ಗಮನಿಸಿ ಹೆಚ್ಚಿನ ರೀತಿಯಲ್ಲಿ ಇನ್‌ಲೆಂಡ್ ಫಿಷರೀಸ್ ಆರ್ಟಿಫಿಷಿಯಲ್ ಬ್ರೀಡಿಂಗಿಗೆ ಅವಕಾಶ ಮಾಡಬೇಕು. ಬ್ಯಾಕ್‌ವಾಟರ್ಸ್‌ನಲ್ಲಿ ಪ್ರಾನ ಕಲ್ಚರ್‌ಗೆ ಅವಕಾಶ ಮಾಡಬೇಕು. ಫಾರಿನ್ ಮಾರ್ಕೆಟ್ಟಿನಲ್ಲಿ ಅದಕ್ಕೆ ಹೆಚ್ಚಿನ ಡಿಮ್ಯಾಂಡಿದೆ. ಮೀನನ್ನು ಈಗ ಐಸ್‌ನಲ್ಲಿ ಪ್ರಿಸರ್ವ್ ಮಾಡುತ್ತಿದ್ದಾರೆ. ಅದನ್ನು ಹಾಗೆ ಮಾಡಬೇಕಾದ್ದು ಅಗತ್ಯ. ಅದಲ್ಲದೆ ನನಗೆ ತಿಳಿದಹಾಗೆ ಸ್ಕಾಟ್‌ಲೆಂಡಿನಲ್ಲಿ ಒಂದು ರಿಸರ್ಚ್ ಮಾಡಿದ್ದಾರೆ. ಟೆಟ್ರಸೈಕ್ಲಿನ್ ಗ್ರೂಪಿನ ಆಂಟಿಬಯಾಟಿಕ್ಸ್‌ನಲ್ಲಿ ಮೀನನ್ನು ಹೆಚ್ಚುಕಾಲ ಎಂದರೆ 6 ದಿವಸಗಳವರೆಗೆ ಪ್ರಿಸರ್ವ್ ಮಾಡಬಹುದು. ಐಸ್‌ನಲ್ಲಿ 3 ದಿವಸ ಪ್ರಿಸರ್ವ್ ಮಾಡಿದರೆ ಅದರಲ್ಲಿ 6 ದಿವಸಗಳವರೆಗೆ ಪ್ರಿಸರ್ವ್ ಮಾಡಬಹುದು. ಆ ರೀತಿ ಪ್ರಿಸರ್ವ್ ಮಾಡಿದ ಮೀನು ಹೊಸದಾದ ಮೀನಿನಷ್ಟೆ ಉತ್ತಮವಾಗಿರುತ್ತೆ. ಆ ರೀತಿ ನಮ್ಮಲ್ಲೂ ಮಾಡಲು ಪ್ರಯತ್ನಿಸಬೇಕೆಂದು ಸೂಚಿಸುತ್ತೇನೆ.

3-00 P.M.

ಹಾಗೆಯೇ ರೆವೆನ್ಯೂ ಇಲಾಖೆ ವಿಷಯದಲ್ಲಿ ಒಂದೆರಡು ಮಾತು. ತುರ್ತುಪರಿಸ್ಥಿತಿ ಇರುವಾಗ ದೇಶದಲ್ಲಿ ಹೆಚ್ಚು ಬೆಳೆಯಿರಿ ಎಂದು ಹೇಳುತ್ತಿದ್ದಾರೆ. ಕಾರ್ಯತಃ ನೋಡಿದರೆ ನಮ್ಮ ತಾಲ್ಲೂಕಿನಲ್ಲಿ ನಡೆಯುವುದನ್ನು ನೋಡಿದರೆ ವಿಷಾದವಾಗುತ್ತದೆ. ಹಳ್ಳಿಗಳಲ್ಲಿ ಅಲ್ಪನಿಗೆ ಐಶ್ವರ್ಯ ಬಂದರೆ ಹೊಡೆ ಗದ್ದೆ ಕೊಯ್ದು ಎಂಬ ಗಾದೆ ಇದೆ. ಅಂಥ ಸನ್ನಿವೇಶವೊಂದು ಗಮನಕ್ಕೆ ಬಂದಿದೆ. ಇರಳಿಗರು, ಹರಿಜನರು ಮುಂತಾದ ಹಿಂದುಳಿದವರಿಗೆ ಮಾಗಡಿ ತಾಲ್ಲೂಕು ಗೇರಹಳ್ಳಿ ಗ್ರಾಮದಲ್ಲಿ ಜಮೀನಿಗೆ ಅರ್ಜಿ ಹಾಕಿದರೂ ಕೆಲವರಿಗೆ ಸಿಕ್ಕಿಲ್ಲ, ಅವರಿಗೆ ಮನೆ ಕಟ್ಟಿಕೊಳ್ಳುವುದಕ್ಕೆ ಜಾಗವಿಲ್ಲ. ಈ ಬಗ್ಗೆ ಒತ್ತಾಯ ಮಾಡಿದರೂ ಗಮನ ಕೊಟ್ಟಿಲ್ಲ. ಕೆಲವರು ರೈತರು ಬಗರ್ ಹುಕುಂ ಸಾಗ ವಳಿ ಮಾಡಿದರು. ಕಳೆದ ಸಾರಿ ನಾನು ಸರ್ಕಾರಕ್ಕೆ ಇದನ್ನೆಲ್ಲಾ ಹೇಳಿದಮೇಲೆ ಜಮೀನು ಕೊಡುವುದಾಗಿ ಹೇಳಿದರು. ನಾನು ಪ್ರಶ್ನೆ ಹಾಕಿದ ಮೇಲೆ ಮೂರು ನಾಲ್ಕು ದಿವಸಗಳಲ್ಲಿ ಉತ್ಕೃಷ್ಟವಾಗಿ ಬೆಳೆ ಆಗಿರುವ ಜಮೀನಿಗೆ ಪ್ರವೇಶಮಾಡಿ ತಹಸೀಲ್ದಾರ್‌ರವರ ಪೂರ್ಣ ಹದಕ್ಕೆ ಬರದ ಬೆಳೆಯನ್ನು ಕಟಾವು ಮಾಡಿಸಿದ್ದಾರೆ, ಕಟಾವು ಮಾಡಿದ ಫಸಲನ್ನು ಕೊಯ್ದರೋ ಅವರೇ ಅದನ್ನು ತೆಗೆದುಕೊಂಡು ಹೋಗಿರುತ್ತಾರೆ. ರೈತರಿಗೂ ಇಲ್ಲ. ಸರ್ಕಾರಕ್ಕೂ ಇಲ್ಲ. ಇದರಿಂದ

(ಶ್ರೀ ಸಿ. ಆರ್. ರಂಗೇಗೌಡ)

ರೈತರಿಗೆ ಫಸಲು ನಷ್ಟವಾಗಿದೆ. ಅವರಿಗೆ ಯಾರು ಅಧಿಕಾರ ಕೊಟ್ಟರೋ ತಿಳಿಯದು. ಇದು ಬಹಳ ಶೋಚನೀಯ ವಿಚಾರ. ಸರ್ಕಾರ ತೀವ್ರವಾಗಿ ಈ ಕಡೆ ಗಮನಕೊಟ್ಟು ರೈತರಿಗೆ ತಕ್ಕ ಸೌಲಭ್ಯವನ್ನುಂಟುಮಾಡಬೇಕು. ಹೆಚ್ಚು ಬೆಳೆಯಬೇಕೆಂದು ಹೇಳಿ ಉತ್ತೇಜನ ಕೊಡುತ್ತಿರುವಾಗ ತೊಂದರೆ ಮಾಡುವುದು ಖಂಡನೀಯ ಎಂದು ತಿಳಿಸಿ ಇಷ್ಟು ಹೇಳಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನರ್ಪಿಸಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

†ಶ್ರೀ ಕೆ. ಎಂ. ದೇವಯ್ಯ (ಹಿರಿಯಾಪಟ್ಟಣ).—ಅಧ್ಯಕ್ಷರೆ, ಹಣಕಾಸಿನ ಮಂತ್ರಿಗಳು ಮಂಡಿಸಿದ ಆಯವ್ಯಯಪಟ್ಟಿಗೆ ಸಮ್ಮತಿ ನೀಡುತ್ತಾ ಈ ಪಟ್ಟಿಯಲ್ಲಿ ಮಲೆನಾಡಿಗೆ ಎಷ್ಟು ನಿಗಾ ಕೊಡಬೇಕಾಗಿತ್ತೋ ಅಷ್ಟನ್ನು ಕೊಟ್ಟಂತೆ ಕಾಣಲಿಲ್ಲ ಎಂದು ಹೇಳಬೇಕಾಗಿದೆ. ಸ್ವಾಮಿ, ನಾನು ಇದನ್ನು ಪ್ರಥಮತಃ ಅಲ್ಲ, ಸಂದರ್ಭ ಬಿದ್ದಾಗಲೆಲ್ಲಾ ಹೇಳುತ್ತಿದ್ದೇನೆ. ಮಲೆನಾಡಿನಲ್ಲಿ ನಮ್ಮ ಜೀವನಾಡಿ ಎಂದರೆ ರಸ್ತೆಗಳು. ಅವುಗಳಿಗೆ ಹೆಚ್ಚಿನ ಗಮನ ಕೊಡಬೇಕು; ಹೆಚ್ಚಿನ ಹಣ ವ್ಯಯ ಮಾಡಬೇಕು. ಮಲೆನಾಡು ಎಂದರೆ ಕನ್ನಡನಾಡಿನ ಚಿನ್ನದ ಕಣಜ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಏಕೆಂದರೆ ಮಲೆನಾಡಿನಲ್ಲಿ ಬೆಳೆಯುವ ಕಾಫಿ, ಮೆಣಸು ಮುಂತಾದುವು ವಿದೇಶಿ ವಿನಿಮಯವನ್ನು ಗಳಿಸುತ್ತವೆ. ಈ ವಿಷಯದಲ್ಲಿ ಎಷ್ಟು ಗಮನ ಕೊಡಬೇಕೋ ಅಷ್ಟು ಕೊಟ್ಟಿಲ್ಲ. ಇದರಿಂದ ಮಲೆನಾಡಿನ ಜನರಿಗೆ ಮಾತ್ರವಲ್ಲದೆ ಸರ್ಕಾರಕ್ಕೂ ಅನ್ಯಾಯವಾಗುತ್ತದೆ. ಏಕೆಂದರೆ ಅಲ್ಲಿನ ಕ್ಷೇಮವನ್ನು ಹಿತವನ್ನು ಸರ್ಕಾರ ನೋಡಿಕೊಂಡರೆ ಸರ್ಕಾರದ ಆದಾಯವೂ ಜಾಸ್ತಿಯಾಗುತ್ತದೆ, ಅಲ್ಲಿಗೆ ಖರ್ಚುಮಾಡುವ ಹಣ, ಹಾಲು ಕರೆಯುವ ಹಸುವಿಗೆ ಹಿಂಡಿ ಕೊಟ್ಟಂತೆ. ಜಾಸ್ತಿ ಹಾಲು ಕೊಟ್ಟರೆ ಸರ್ಕಾರಕ್ಕೂ ಅನುಕೂಲ. ಮಲೆನಾಡಿನ ಜೀವನಾಡಿಯಾದ ರಸ್ತೆ ಕೇಳಿದರೆ ತುರ್ತುಪರಿಸ್ಥಿತಿ, ಹಣವಿಲ್ಲ, ಮಲೆನಾಡಿನವರ ಕಷ್ಟ ಗೊತ್ತಿದೆ ಎಂದು ಹೇಳುವುದುಂಟು. ಅದು ಸರಿಯಲ್ಲ, ಹಾಗೆ ಅವರು ಹೇಳಬಾರದು. ಕೊಡಗಿನವರು ಸರ್ಕಾರಕ್ಕೆ ಯಥೇಷ್ಟವಾಗಿ ವರಮಾನ ತೆರಿಗೆ ಕೊಡುತ್ತಾರೆ, ಇಡೀ 18 ಜಿಲ್ಲೆಗಳಲ್ಲಿ ಕೊಡುವ ಅರ್ಧಪಾಲನ್ನು ಕೊಡುತ್ತಾರೆ; ಅಷ್ಟೇ ಅಲ್ಲ, ಸೆಂಟ್ರಲ್ ಎಕ್ಸೈಜ್ ಬೇರೆ ಕೊಡುತ್ತಾರೆ. ಅಂದಮೇಲೆ ಆ ಹಣಕ್ಕೆ ತಕ್ಕಂತೆ ನಮ್ಮ ಜಿಲ್ಲೆಗೆ ಅನುಕೂಲ ಒದಗಿಸಬೇಕು. ಆಹಾರ ಜಾಸ್ತಿ ಬೆಳೆಯಬೇಕೆಂದು ಹೇಳುತ್ತಿದ್ದಾರೆ, ಅದಕ್ಕೇ ಒಂದು ಇಲಾಖೆ ಇದೆ. ಆದರೆ ಕೊಡಗಿನವರಿಗೆ ಆ ಇಲಾಖೆ ಬೇಡ, ಗ್ರಾಮಸೇವಕರ ಬೋಧೆ ಬೇಡ, ಅಲ್ಲಿನ ರೈತರು ಬುದ್ಧಿವಂತರು, ಅವರಿಗೆ ಹೇಗೆ ವ್ಯವಸಾಯ ಮಾಡಬೇಕೆಂಬುದು ಗೊತ್ತಿದೆ. ಆದರೆ ಅನುಕೂಲತೆಯಿಲ್ಲ, ರಸ್ತೆಯಿಲ್ಲ, ಗೊಬ್ಬರ ಕೊಟ್ಟರೆ ಹೊಲದ ಬಳಿಗೆ ತೆಗೆದುಕೊಂಡು ಹೋಗಲು ಅನುಕೂಲವಿಲ್ಲ. ಹಾಗಿರುವಾಗ ಗೊಬ್ಬರ ಕೊಟ್ಟು ಪ್ರಯೋಜನವೇನು? ಆದುದರಿಂದ ಬೋಧೆ ಮಾಡುವ ಇಲಾಖೆ ಮುಂತಾದುವುಗಳಿಗೆ ಖರ್ಚು ಮಾಡುವುದಕ್ಕಿಂತ ಗೊಬ್ಬರ ಹೊಲಗಳಿಗೆ ಸಾಗಿಸುವುದಕ್ಕೆ, ಬೆಳೆದ ಸಾಮಾನು ಮಾರಾಟಮಾಡುವ ಕಡೆಗೆ ಸಾಗಿಸುವುದಕ್ಕೆ ಅನುಕೂಲ ಮಾಡಿಕೊಟ್ಟರೆ ಜಾಸ್ತಿ ಬೆಳೆ ತೆಗೆಯಬೇಕೆಂಬ ಯಾವ ಕೂಗುಂಟು ಅದಕ್ಕೆ ಅವಕಾಶವಾಗುತ್ತದೆ. ಅದನ್ನು ಮಾಡದೆ ಇಲಾಖೆಗೆ ಖರ್ಚುಮಾಡಿ ಗೊಬ್ಬರ, ಬೀಜ ಕೊಟ್ಟರ ಜಾಸ್ತಿ ಬೆಳೆಯುವುದಕ್ಕೆ ಅವಕಾಶವಾಗುವುದಿಲ್ಲ ಎಂಬುದನ್ನು ಗಮನಿಸಿ ರಸ್ತೆ ವಗೈರೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ಕೊಡಗಿನಲ್ಲಿ ದೊಡ್ಡ ಕಟ್ಟೆಗಳು ಬೇಕಾಗಿಲ್ಲ. ನೀರಾವರಿಗಳಿಗಾಗಿ ನಮಗೆ ಹೆಚ್ಚಾಗಿ ಬೇಕಾಗಿರುವುದು ಚಿಕ್ಕ ಚಿಕ್ಕ ನೀರಾವರಿ ಯೋಜನೆಗಳು. ಇದಕ್ಕಾಗಿ ಸಣ್ಣ ಕಟ್ಟೆಗಳನ್ನು, ಸಣ್ಣ ಕೆರೆಗಳನ್ನು ರಿಪೇರಿ ಮಾಡಬೇಕು. ಇದು ಬಹು ಪ್ರಾಮುಖ್ಯವಾದುದು ಮತ್ತು ಸರಕಾರ ಇದರ ಕಡೆಗೆ ಹೆಚ್ಚಿನ ಗಮನವನ್ನು ಕೊಡಬೇಕು. ಇದನ್ನು ಮಾಡಿದರೆ ಕೇವಲ ಹತ್ತು ಹದಿನೈದು ಲಕ್ಷದೊಳಗೇ ಇದಕ್ಕೆ ಬೇಕಾಗುತ್ತದೆ ಮತ್ತು ಇದನ್ನು ಮಾಡಬಹುದು.

ಶ್ರೀ ಎನ್. ಹುಚ್ಚಮಾಸ್ತಿಗೌಡ (ಚಂದ್ರಶೇಖರಪುರ).—ಹಾಗಾದರೆ ತಮಗೆ ಹಾರಂಗಿ ಕೆಲಸ ಮಾಡಬೇಡವೆಂದೋ?

ಶ್ರೀ ಕೆ. ಎಂ. ದೇವಯ್ಯ.—ಹಾರಂಗಿ ವಿಷಯ ಇದೊಂದು ಅಣೆಕಟ್ಟು ಆಗಬೇಕು ಎನ್ನುವ ಕೂಗು ಬಹಳ ವರ್ಷಗಳಿಂದಲೂ ಇದೆ. ಸುಮಾರು ನೂರು ವರ್ಷಗಳಿಂದಲೂ ಹಾರಂಗಿ ಅಣೆಕಟ್ಟನ್ನು ಕಟ್ಟಬೇಕೆಂದು ಅಲ್ಲಿನ ಜನರು ಕೇಳುತ್ತಿದ್ದಾರೆ. ಆದರೆ ಯಾವುದೋ ಒಂದು ಕಾರಣದಿಂದಾಗಿ ಎಂದರೆ ಕೊಡಗು ಭಾಗದಲ್ಲಿ ಕಟ್ಟಲು ಮೈಸೂರಿನ ಅನುಮತಿ ಇದಕ್ಕೆ ಬೇಕಾಗಿತ್ತು. ಆದರೆ ಇಲ್ಲಿ ಸ್ವಲ್ಪ ದೊಡ್ಡ ಕಟ್ಟೆ ಕಟ್ಟುವ ಪ್ರಶ್ನೆ ಇತ್ತು. ಒಟ್ಟಿನಲ್ಲಿ ಕೊಡಗು ಮೈಸೂರಿಗೆ ಸೇರಿದ ಮೇಲೆ ಈ ಭಾರಿ ಕಟ್ಟೆಯನ್ನು ಕಟ್ಟುವುದರಿಂದ ಮೈಸೂರಿಗೆ ಹೆಚ್ಚು ಪ್ರಯೋಜನವಾಗುತ್ತದೆ ಎಂದು ಇದಕ್ಕಾಗಿ ಒಂದು ಯೋಜನೆ ಮಾಡಿ ಅದರ ಬಗ್ಗೆ ವಿಚಾರ ವಿನಿಮಯಗಳನ್ನು ಮಾಡಿ ಅದಕ್ಕಾಗಿ

ಪ್ಲಾನು ಹಾಗೂ ಎಸ್ಟಿಮೇಟುಗಳನ್ನು ತಯಾರಿಸಿಯೂ ಇದ್ದರು. ಇದರ ಬಗ್ಗೆ ಕೊಡಗಿನಲ್ಲಿ ಒಂದು ಚಳುವಳಿಯೇ ಪ್ರಾರಂಭವಾಯಿತು. ಬರೀ ಹಾರಂಗಿ ಕಟ್ಟೆ ಕಟ್ಟುವುದು ಬೇಡ ಎಂದು ಚಳುವಳಿ ಏಕೆ ಆಯಿತು ಎಂದು ವಿಚಾರ ಮಾಡಲಿಕ್ಕೆ ಹೋದರೆ ಹಾರಂಗಿ ಬಳಿ ಒಂದು ಕಟ್ಟೆ ಮತ್ತು ಕಂಬದ ಕಡದ ಹತ್ತಿರ ಒಂದು ಕಟ್ಟೆ ಮಾಡಿದರೆ ಜನಕ್ಕೆ ಪ್ರಯೋಜನವಾದೀತು ಎಂದರು. ಹಾರಂಗಿ ಒಂದೇ ಆದರೆ ಸರಿಯಿಲ್ಲ ಎಂದು ಅದಕ್ಕಾಗಿ ಕೊಡಗಿನ ಬಳಿ ಇರುವ ಬಾರಾಪೊಳೆ ಬಳಿ ಒಂದು ಅಣೆಕಟ್ಟು, ಲಕ್ಷ್ಮಣ ತೀರ್ಥದ ಬಳಿ ಒಂದು ಕಟ್ಟೆಯನ್ನು ಕಟ್ಟಬೇಕೆಂದು ಇತ್ತು. ಹಾರಂಗಿ ಕಟ್ಟೆಗಾಗಿ ಕೊಡಗಿನ ಕೆಲವು ಶ್ರೀಮಂತರುಗಳು ಮಾತ್ರ ಇದಕ್ಕೆ ವಿರೋಧ ಮಾಡುತ್ತಿದ್ದರು. ಹಾರಂಗಿ ಜೊತೆಯಲ್ಲೇ ಕಂಬದಕಡ ಕಟ್ಟೆಯನ್ನೂ ಏಕೆ ಆರಂಭ ಮಾಡಬಾರದು ಎಂದು ವಿಚಾರ ಬಂತು. ಇದನ್ನೆಲ್ಲಾ ಸರಿಯಾಗಿ ವಿಚಾರಮಾಡಲು ಒಂದು ಸಮಿತಿಯನ್ನು ಏರ್ಪಾಡು ಮಾಡಿದ್ದರು ಮತ್ತು ಅವರು ಒಂದು ವರದಿಯನ್ನೂ ಮಾಡಿದರು. ಆದರೆ ಕೊಡಗಿನ ಜನ ಬರೀ ಹಾರಂಗಿ ಕಟ್ಟೆ ಕಟ್ಟಿಸಬೇಕೆಂದಿದ್ದರೆ ಅದನ್ನು ವಿರೋಧ ಮಾಡುತ್ತಿರಲಿಲ್ಲ. ಮತ್ತು ಹಿಂದೆ ನಮ್ಮ ಸಭೆಯ ಮಾನ್ಯ ಸದಸ್ಯರಾಗಿದ್ದ ಶ್ರೀಮಾನ್ ಮಲ್ಲಪ್ಪನವರು (ಈಗ ಮಂತ್ರಿಗಳಾಗಿದ್ದಾರೆ) ಹಿಂದೆ ಇದ್ದ ಮಂತ್ರಿಗಳನ್ನು ಕರೆದು ಕೊಂಡು ಹೋಗಿ ಇದಕ್ಕಾಗಿ ಎರಡು ಮೂರು ಜಾಗಗಳನ್ನೂ ನೋಡಿಬಂದಿದ್ದರು. ಇದರ ಬಗ್ಗೆ ವಿಚಾರ ಮಾಡಲು ಇಂಜನೀಯರುಗಳಿಗೂ ಹೇಳಿದ್ದರು. ಇಂಜನೀಯರುಗಳೂ ಸಹ ಇದರ ಸುತ್ತ ಮುತ್ತಲಿನ ಭಾಗಗಳನ್ನು ಪರಿಶೀಲನೆ ಮಾಡಿ ಹಾರಂಗಿಯ ಬಳಿ ಕಟ್ಟೆ ಕಟ್ಟುವುದು ಬಹಳ ಒಳ್ಳೆಯದು. ಆ ದೃಷ್ಟಿಯಿಂದ ಈ ಯೋಜನೆ ಮಾಡಿದರೆ ಇಡೀ ಕರ್ಣಾಟಕಕ್ಕೇ ಬಹಳ ಒಳ್ಳೆಯದಾಗುತ್ತದೆ ಎನ್ನುವುದನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಇವೊತ್ತು ಇಲ್ಲಿ ಆಗಬಾರದು, ಇಲ್ಲಿ ಸಣ್ಣ ಕಟ್ಟೆಯೊಂದನ್ನು ಕಟ್ಟಿ ಇನ್ನೊಂದು ಕಡೆ ಒಂದು ಸಣ್ಣ ಕಟ್ಟೆ ಕಟ್ಟಬೇಕೆಂದು ಬದಲಾವಣೆಯಾಗುತ್ತಿದೆ. ಮೊನ್ನೆ ಮಾನ್ಯ ಮಂತ್ರಿಗಳು ಇದರ ಸಂಬಂಧವಾಗಿ ಇಲ್ಲಿ ಹೇಳುತ್ತ ಇದಕ್ಕೆ ಜನರೇ ವಿರೋಧ ಮಾಡುತ್ತಿದ್ದಾರೆ ಮತ್ತು ಈ ಹಿಂದೆ ಇಲ್ಲಿ 190 ಅಡಿಯಷ್ಟು ಎತ್ತರದ ಕಟ್ಟೆ ಕಟ್ಟಬೇಕೆಂದು 1960ನೇ ಇಸವಿಯಲ್ಲೇ ತೀರ್ಮಾನವಾಗಿತ್ತು. ಆದರೆ ಇಲ್ಲಿ ಇಂತಹ ದೊಡ್ಡ ಕಟ್ಟೆಯನ್ನು ಕಟ್ಟಿದರೆ ಬಹಳ ಅನಾಹುತಗಳಾಗುತ್ತವೆ ಅದರಿಂದ ಇದನ್ನು 180 ಅಡಿಯಿಂದ 100 ಅಥವಾ 110 ಅಡಿ ಎತ್ತರಕ್ಕೆ ಮೇಲ್ಪಟ್ಟು ಕಟ್ಟಬಾರದು ಎಂದು ಅವರು ಸ್ಪಷ್ಟವಾಗಿ ಹೇಳಿದ್ದರು. ಜನರ ಅಭಿಪ್ರಾಯ ಕೂಡ ಹಾಗೇ ಇದೆ. ಆದರೆ ಸರಕಾರ ಇದಕ್ಕೆ ಹೇಗೆ ಒಪ್ಪಿಗೆ ಕೊಟ್ಟರು, ಇದರಿಂದ ಬಡವರಿಗೆ ಕಷ್ಟವಾಗುತ್ತದೆ ಎಂದು ಕೆಲವು ಜನರು ಒಂದು ತರಹದ ಚಳುವಳಿ ನಡೆಸುವುದಕ್ಕೆ ಹೊರಟರು. ಇದರಿಂದಾಗಿ ಸರಕಾರ ಯಾವ ಮಾರ್ಗದಲ್ಲಿ ಹೋದರೆ ಅನುಕೂಲವಾಗಬಹುದು ಎಂದು ವಿಚಾರ ಮಾಡಿ 90 ಅಡಿ ಮತ್ತು 110 ಅಡಿಯ ಎರಡು ಕಟ್ಟೆಗಳನ್ನು ಕಟ್ಟಬೇಕೆಂದು ಸೂಚನೆ ಬಂತು. ಮೊದಲು ಇದು ಇರಲಿಲ್ಲ. ಇದರ ಅಸೆಸ್ಸುಮೆಂಟನ್ನು ನೋಡುವಾಗ ಬಹಳ ಕಡಿಮೆ ಎಕರೆಗಳು ಏರಿಯಾ ಮುಳುಗಡೆಯಾಗುವುದೂ ಇದಿರಲ್ಲಿರುವುದರಿಂದ ಇದರಿಂದ ಜನಕ್ಕೆ ತೊಂದರೆಯೂ ಜಾಸ್ತಿ ಬರುವುದಿಲ್ಲ ಖರ್ಚೂ ಕಡಿಮೆ ಬರುತ್ತದೆ. ನಮ್ಮ ಕೊಡಗಿನ ಭಾಗದಲ್ಲಿ ಮುಳುಗಡೆ ಏರಿಯಾ ಕೂಡ ಕಡಿಮೆ ಮತ್ತು ಹೆಚ್ಚು ಖರ್ಚೂ ಬರದಂತೆ ಕಟ್ಟೆಯನ್ನು ಕಟ್ಟಿದರೆ ಅದಕ್ಕೆ ಯಾರ ಆಕ್ಷೇಪಣೆಯೂ ಬರುವುದಿಲ್ಲ. ನನ್ನ ಸ್ವಂತ ಅಭಿಪ್ರಾಯದಲ್ಲಿ ಮೊದಲು ಇದರ ಬಗ್ಗೆ ಹೇಗೆ ತೀರ್ಮಾನ ಮಾಡಿದ್ದಾರೋ ಹಾಗೆ ಮಾಡಬೇಕಾಗುತ್ತದೆ ಮತ್ತು ಆ ನೀತಿಯನ್ನೇ ಅನುಸರಿಸಬೇಕು ಎನ್ನುವುದು ನನ್ನ ಸ್ಪಷ್ಟ ಅಭಿಪ್ರಾಯ. ಚಳುವಳಿ ಮಾಡತಕ್ಕ ಜನ ಒಂದು ಕಡೆ ಹಾರಂಗಿ ಕಟ್ಟೆ ಮಾಡುವಂತೆ ಬಾರಾಪೊಳೆ ವಿಷಯದಲ್ಲಿ ಕೂಡ ಹೆದರಬೇಕಾಗುತ್ತದೆ ಎಂದು ಇತ್ತು. ಅದರಂತೆ ಕಂಬಂದಕಡದ ಕಟ್ಟೆ ಬೇಡ ಬರೀ ಹಾರಂಗಿ ಒಂದೇ ಸಾಕು ಎಂದು ಇದ್ದಿದ್ದರೆ ಆಗ ಯಾವ ಚಳುವಳಿಯೂ ಆಗಲಿಕ್ಕೆ ಕಾರಣವಿಲ್ಲ. ಇವೊತ್ತು ಎಲ್ಲ ಕೊಡಗು ಪ್ರಾಂತ ಸೇರಿ ಮೈಸೂರಿಗೆ ಒಂದು ಭಾಗವಾಗಿ ಬಂದು ಸೇರಿದೆ. ಕೊಡಗನ್ನು ಅಭಿವೃದ್ಧಿ ಮಾಡಬೇಕು ಅದಕ್ಕಾಗಿ ಕಂಬಂದಕಡವನ್ನು ಬೇಡಿ ಎಂದು ಹೇಳುವುದು ಸರಿಯಲ್ಲ. ಇದಕ್ಕೆ 1924 ರಲ್ಲಿ ಆದಂತಹ ಅಗ್ರಿಮೆಂಟಿನ ಪ್ರಕಾರ ಇದು ಭಾಗಿಯಾಗುವುದಿಲ್ಲ. ಹಾರಂಗಿಯ ಬಗ್ಗೆ ಒಂದು ಸ್ಪಷ್ಟವಾದ ನಿಲುವನ್ನು ತೆಗೆದುಕೊಳ್ಳುವುದು ಸೂಕ್ತವಾದುದು.

ಇನ್ನು ನಮ್ಮ ಕೊಡಗು ಭಾಗದಲ್ಲಿ 20-22 ಡಿಸ್ಪೆನ್ಸರಿಗಳಿವೆ. ಆದರೆ ಇದರಿಂದ ಬೇಕಾಗುವ ಸವಲತ್ತುಗಳು ಸಿಗುವುದು ಕಷ್ಟವಾಗಿದೆ. 13 ಡಿಸ್ಪೆನ್ಸರಿಗಳಲ್ಲಿ ಡಾಕ್ಟರುಗಳೇ ಇಲ್ಲ. ಪ್ರತಿ ತಾಲ್ಲೂಕು ಹೆಡ್ ಕ್ವಾರ್ಟರುಗಳಲ್ಲಿಯೂ ಎಷ್ಟೋ ಕಡೆಗಳಲ್ಲಿ ಡಿಸ್ಪೆನ್ಸರಿಗಳಿದ್ದರೂ ಕೂಡ ಡಾಕ್ಟರುಗಳೇ ಇಲ್ಲ. ಇದರಿಂದ ಈ ಭಾಗದಲ್ಲಿರುವ ಜನಕ್ಕೆ ಬಹಳ ನೋವುಂಟಾಗುತ್ತಿದೆ. ಆಸ್ಪತ್ರೆಗಳನ್ನೇನೋ ಜಾಸ್ತಿಯಾಗಿ ಕೊಡುತ್ತೇವೆಂದು ಹೇಳುತ್ತಾರೆ. ಆದರೆ ನಮಗೆ ಹೆಚ್ಚಿನ ಆಸ್ಪತ್ರೆ ಬೇಕಿಲ್ಲ. ಇರುವ ಆಸ್ಪತ್ರೆಗಳಲ್ಲಿ ಹೆಚ್ಚಿನ ಅನುಕೂಲಗಳು ಜನಕ್ಕೆ ಸಿಗುತ್ತಿಲ್ಲ. ಮೈಸೂರಿಗೆ ಸೇರಿದ ಮೇಲೆ ಜನಕ್ಕೆ ಹೆಚ್ಚಿನ ಅನುಕೂಲಗಳು ಸಿಗುತ್ತೆ ಎಂದು ಭಾವಿಸಿದ್ದರು. ನಮ್ಮಲ್ಲಿ ಎಷ್ಟೋ ಜನರು ಮುಂದೆ ಬಂದು ಆಸ್ಪತ್ರೆಗಳನ್ನು ಕಟ್ಟಿಸಿ ವಾರ್ಡುಗಳನ್ನೂ ಕಟ್ಟಿಸಿದ್ದಾಗೂ ಕೂಡ ಅಂತಹ

(ಶ್ರೀ ಕೆ. ಎಂ. ದೇವಯ್ಯ)

ಆಸ್ಪತ್ರೆಗಳಲ್ಲಿ ಡಾಕ್ಟರುಗಳಿಲ್ಲವೇ ಹೋದರೆ ಜನಕ್ಕೆ ಏನು ಅನುಕೂಲ ಸಿಕ್ಕಿದಂತಾಗುತ್ತದೆ. ಹೆರಿಗೆಗಾಗಿ ಆಸ್ಪತ್ರೆಗೆ ಬರುವ ಹೆಂಗಸರಿಗೆ ಅಲ್ಲಿ ಡಾಕ್ಟರುಗಳೇ ಇಲ್ಲದೆ ಇದ್ದರೆ ಅವರ ಪರಿಸ್ಥಿತಿ ಏನಾಗಬೇಕು ಎನ್ನುವುದನ್ನು ಸರಕಾರ ಯೋಚನೆ ಮಾಡಬೇಕು. ಹಿಂದೇನೋ ಮನೆಗಳಲ್ಲಿಯೇ ಸೂಲಗಿತ್ತಿಯರು ಬಂದು ಹೆರಿಗೆ ಕೆಲಸಗಳನ್ನು ನಡೆಸುತ್ತಿದ್ದರು. ಈಗ ಜನ ಸೂಲಗಿತ್ತಿಯರನ್ನು ಮರೆತು ಬಿಟ್ಟು ಎಲ್ಲರೂ ಆಸ್ಪತ್ರೆಗಳಿಗೇ ಹೋಗುತ್ತಿದ್ದಾರೆ. ಆಸ್ಪತ್ರೆಗಳಿಗೆ ಹೋಗುವಾಗ ಅಲ್ಲಿ ಡಾಕ್ಟರುಗಳೇ ಇರದಿದ್ದರೆ ಹೇಗೆ. ಇಂತಹ ಪರಿಸ್ಥಿತಿ ಇನ್ನು ಮುಂದಾದರೂ ಇರಬಾರದು. ಇದರಿಂದಾಗಿ ಜನತೆಗೆ ಬಹಳ ನೋವುಂಟಾಗುತ್ತದೆ. ಸರಕಾರ ಹೊಸ ಆಸ್ಪತ್ರೆಗಳನ್ನು ಕಟ್ಟಿಸುತ್ತಿಲ್ಲ. ಯಾರೋ ರೈತರು ಹಿಂದಿನಿಂದ ಧರ್ಮಾರ್ಥವಾಗಿ ಆಸ್ಪತ್ರೆಗಾಗಿ ಕಟ್ಟಡ ಕಟ್ಟಿಸಿಕೊಟ್ಟಿದ್ದಾರೆ ಆದರೆ ಎಷ್ಟೋ ಕಡೆಗಳಲ್ಲಿ ಸರಿಯಾದ ಡಾಕ್ಟರುಗಳನ್ನೇ ನೇಮಕ ಮಾಡಿಲ್ಲ. ಇದರಿಂದ ನಮ್ಮಲ್ಲಿ ಡಾಕ್ಟರುಗಳಿಗೆ ಕೊರತೆಯಾಗಿವೆ ಎಂದು ಹೇಳುತ್ತಾರೆ. ಮೈಸೂರಿನಲ್ಲಿ ಏತಕ್ಕಾಗಿ ಡಾಕ್ಟರುಗಳ ಕೊರತೆ ಇದೆ ಎನ್ನುವುದು ನನಗೆ ಚೆನ್ನಾಗಿ ಗೊತ್ತಿದೆ. ಇವೊತ್ತು ಇಲ್ಲಿ ಡಾಕ್ಟರುಗಳ ಕೊರತೆ ಏಕೆ ಆಗಿದೆ ಎಂದರೆ ಅವರುಗಳ ಕೆಲಸಕ್ಕೆ ತಕ್ಕಷ್ಟು ಸಂಬಳ ಇಲ್ಲಿ ದೊರೆಯುತ್ತಿಲ್ಲ ಮತ್ತು ಇದಕ್ಕೆ ತಕ್ಕಂತೆ ಅನುಕೂಲಗಳನ್ನೂ ಒದಗಿಸಿಕೊಡುತ್ತಿಲ್ಲ. ಮದರಾಸಿನಲ್ಲಿ ಮೈಸೂರಿಗಿಂತ ಹೆಚ್ಚಿನ ಸಂಬಳ ಕೊಡುತ್ತಾರೆ. ಅದೇ ರೀತಿ ಆಂಧ್ರದಲ್ಲೂ ಹೆಚ್ಚಿಗೆ ಸಂಬಳಗಳನ್ನು ಡಾಕ್ಟರುಗಳಿಗೆ ಕೊಡುತ್ತಿದಾರೆ. ಆದುದರಿಂದ ನಮ್ಮ ಸರಕಾರ ಇತರ ಪ್ರದೇಶಗಳಿಗಿಂತ ಇಲ್ಲಿ ಡಾಕ್ಟರುಗಳಿಗೆ ಕಡಿಮೆ ಸಂಬಳವನ್ನು ಕೊಟ್ಟರೆ ಅವರುಗಳು ಇಲ್ಲಿ ಹೇಗೆ ಕೆಲಸ ಮಾಡುತ್ತಾರೆ ಎನ್ನುವುದನ್ನು ತಿಳಿದುಕೊಳ್ಳಬೇಕು.

ಅಲ್ಲಿ ನಮ್ಮ ಜನರ ಆರೋಗ್ಯವನ್ನು ಕಾಪಾಡಿಕೊಳ್ಳಲು ಡಾಕ್ಟರುಗಳ ಹಾಗೂ ಔಷಧಿಗಳ ಸೌಕರ್ಯವನ್ನು ಒದಗಿಸಿಕೊಡಬೇಕೆಂದು ಸರ್ಕಾರದವರಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಸರ್ಕಾರದವರು ಈ ವಿಚಾರಗಳಿಗೆ ಈಗ ನಿಗಾ ಕೊಡದೇ ಇರುವುದರಿಂದ ಜನರಿಗೆ ಬಹಳ ಹಿಂಸೆ ಬಂದಿದೆ. ಇದರಿಂದ ಅಲ್ಲಿರತಕ್ಕ ಜನರಲ್ಲಿ ಕಡುಬಡವರಾಗಿರತಕ್ಕದವರು ಕಮ್ಯೂನಿಸ್ಟರಾಗುತ್ತಿದ್ದಾರೆ. ಇನ್ನು ಶ್ರೀಮಂತರಾಗಿರತಕ್ಕವರು ಸ್ವತಂತ್ರ ಪಾರ್ಟಿಯಾಗುತ್ತಿದ್ದಾರೆ. ಇದಕ್ಕೆಲ್ಲಾ ಅವಕಾಶ ಕೊಡದಂತೆ ಸರ್ಕಾರದವರು ಜಾಗ್ರತೆಯಾಗಿ ಅಲ್ಲಿಗೆ ಡಾಕ್ಟರುಗಳ ಮತ್ತು ಔಷಧಿಗಳ ಸೌಲಭ್ಯವನ್ನು ಒದಗಿಸಿಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ನಮ್ಮಲ್ಲಿ ಈಗ ಒಂದು ವೆಲ್ ಎಕ್ವಿಪ್ಡ್ ಫಸ್ಟ್‌ಗ್ರೇಡ್ ಕಾಲೇಜಿದೆ. ಅಲ್ಲಿ ಹಿಂದೆ ಇದ್ದ ವಿದ್ಯಾರ್ಥಿಗಳ ಸಂಖ್ಯೆಗಿಂತ ಈಗ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿದೆ. ಮೊದಲು ಅಲ್ಲಿ ಎಂಟು ಜನ ಪ್ರೊಫೆಸರ್ಸ್‌ಗಳಿದ್ದರು. ಈಗ ಅದು ನಾಲ್ಕಕ್ಕೆ ಇಳಿದಿದೆ. ಇದರ ರಿಜಲ್ಟ್ ಸಹಾ ಸರಿಯಾಗಿ ಬರುತ್ತಿಲ್ಲ. ಈ ಕಾಲೇಜು ಇಂಥ ಸ್ಥಿತಿಗೆ ಬರಬಾರದು. ಇದರ ವಿಚಾರದಲ್ಲಿ ಸರ್ಕಾರದವರು ಈ ರೀತಿ ಮಾಡಬಾರದೆಂದು ಬೇಡಿಕೊಳ್ಳುತ್ತೇನೆ.

ಇನ್ನು ಪ್ರಾಥಮಿಕ ವಿದ್ಯಾಭ್ಯಾಸದ ವಿಚಾರಕ್ಕೆ ಬಂದರೆ, ಅಲ್ಲಿ ಈಗ ನಮ್ಮ ಮಕ್ಕಳಿಗೆ ಬೇಸಿಕ್ ಎಜುಕೇಷನ್ ಎಂತ ಕೊಡುತ್ತಿದ್ದಾರೆ. ಆದರೆ ಇದರ ತತ್ವ ಚೆನ್ನಾಗಿರಬಹುದು. ಆದರೆ ಇದನ್ನು ಅಲ್ಲಿ ಜಾರಿಮಾಡುತ್ತಿರುವುದು ಸರಿಕಾಣುವುದಿಲ್ಲ. ಇದನ್ನು ಸರ್ಕಾರದವರು ಬೇಕಾಗಿದ್ದಲ್ಲಿ ಪಟ್ಟಣಗಳಲ್ಲಿ ಜಾರಿಗೆ ತರಲಿ. ನಮ್ಮ ಗ್ರಾಮಾಂತರ ಪ್ರದೇಶಕ್ಕೆ ಇದನ್ನು ಬೇಡ ಎಂದು ನಾನು ಹೇಳುತ್ತೇನೆ, ಅಲ್ಲಿ ಪಾಠಗಳೂ ಸಹ ಸರಿಯಾಗಿ ನಡೆಯುತ್ತಿಲ್ಲ. ಸ್ಟಾಂಡರ್ಡ್ ಬಹಳ ಕಡಮೆಯಾಗುತ್ತಿದೆ. ನಮ್ಮ ಮಕ್ಕಳಿಗೆ ಬೇಸಾಯದ ವಿಚಾರವನ್ನು ಪಾಠಶಾಲೆಗೆ ಹೋಗಿ ಕಲಿಯಬೇಕೆಂಬ ಇರಾದೆಯಿಲ್ಲ. ಇದನ್ನು ನಮ್ಮ ಮಕ್ಕಳಿಗೆ ಮನೆಯಲ್ಲಿ ತಂದೆ ತಾಯಿಗಳು ಕಲಿಸುತ್ತಾರೆ. ಅಲ್ಲಿ ನಮ್ಮ ಮಕ್ಕಳಿಗೇನಿದ್ದರೂ ಓದುವುದನ್ನು ಕಲಿಸಿದರೆ ಸಾಕು. ಆದ್ದರಿಂದ ಹಳ್ಳಿಯ ಜನರಿಗೆ ಈ ಬೇಸಿಕ್ ಎಜುಕೇಷನ್ ಬೇಕಾಗಿಲ್ಲವೆಂದು ಹೇಳುತ್ತೇನೆ. ನಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವುದು ವಿದ್ಯೆಯನ್ನು ಕಲಿಯುವುದಕ್ಕಾಗಿ. ಇದರ ಬಗ್ಗೆ ಸರ್ಕಾರ ಪುನರಾಲೋಚನೆ ಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಗೋಪಾಲ ಸಾರೆನ್ನ (ಮೂಡಬಿದ್ರಿ).—ಸ್ವಾಮಿ ಅಧ್ಯಕ್ಷರೇ, ಈ ಆಯವ್ಯಯವನ್ನು ಮಾನ್ಯ ಹಣಕಾಸಿನ ಸಚಿವರು ತಯಾರುಮಾಡುವಾಗ ಅವರ ಮನೋಭಾವನೆ ಹೇಗಿದ್ದಿತೆಂಬುದನ್ನು ಈ ಆಯವ್ಯಯ ಪಟ್ಟಿಯನ್ನು ತಯಾರಿಸಲು ಅಂಕಿ ಸಂಖ್ಯೆಗಳನ್ನು ಶೇಖರಿಸಿದ್ದ ಆ ಗುಮಾಸ್ತರುಗಳ ಮನೋಭಾವನೆ ಯಾವ ರೀತಿ ಇತ್ತೋ ಅದೇ ರೀತಿಯಲ್ಲಿ ಇವರೂ ಅದನ್ನು ತಯಾರಿಸಿದ್ದಾರೆ. ಆದರೆ ಈ ಆಯವ್ಯಯ ಪಟ್ಟಿಯಲ್ಲಿ ಒಂದು ಆರ್ಥಿಕ ಸುಧಾರಣೆಯೇನಿರಬೇಕಾಗಿತ್ತೋ ಅದಿಲ್ಲ ಎಂಬ ಅಂಶವನ್ನು ಈಗಾಗಲೇ ಅನೇಕ ಮಾನ್ಯ ಸದಸ್ಯರು ಸ್ಪಷ್ಟಪಡಿಸಿದ್ದಾರೆ. ಅಂತೂ ಈ ಬಜೆಟ್ಟಿನಲ್ಲಿ ಸಾಮಾನ್ಯ ಜನರ ಆರ್ಥಿಕಾಭಿವೃದ್ಧಿಗೆ ಅವಕಾಶಮಾಡಿದ ಸೂಚನೆಗಳೊಂದೂ ಕಂಡುಬರುವುದಿಲ್ಲ.

ನಮ್ಮ ದೇಶದಲ್ಲಿ ಇಂದು ಭೂಮಿ ಕಾಣಿಗಳಿಲ್ಲದ ನಿರ್ಗತಿಕರ ಸಂಖ್ಯೆ ಬಹಳವಾಗಿದೆ. ಇವರ ಸಂಖ್ಯೆ 35-40 ಲಕ್ಷವಾಗಬಹುದು. ಇವರೇ ನಮ್ಮ ರಾಷ್ಟ್ರದ ಬೆನ್ನುಮೂಳೆ. ಇವರು ನಮ್ಮ ರಾಜ್ಯದಲ್ಲಿ ಶೇಕಡ 50ಕ್ಕೂ ಜಾಸ್ತಿ ಇದ್ದಾರೆ. ಇಷ್ಟು ಜನರನ್ನು ನಮ್ಮ ಸರ್ಕಾರ ಈ ದಿವಸ ಗಣನೆಗೆ ತೆಗೆದು ಕೊಂಡಂತೆ ಕಾಣುವುದಿಲ್ಲ. ಇಷ್ಟು ಜನರ ಆದಾಯ ಹದಗೆಟ್ಟು ಹೋಗಿದೆ. ಅವರು ಜೀವನಕ್ಕಾಗಿ ತುಂಬಾ ತೊಂದರೆ ಪಡುತ್ತಿದ್ದಾರೆ. ಅವರಿಗೆ ಮಾಡುವುದಕ್ಕೆ ಸಾಕಷ್ಟು ಉದ್ಯೋಗವಿಲ್ಲ. ಇಂಥವರ ವಿಚಾರವನ್ನು ಸರ್ಕಾರದವರು ಗಮನಕ್ಕೇ ತೆಗೆದುಕೊಂಡಿಲ್ಲ. ಆದಾಗ್ಯೂ ಅವರಿಗೆಲ್ಲಾ ಈ ಸರ್ಕಾರ, ನಿಮಗೆ ಅನುಕೂಲ ಮಾಡಲು ಭೂ ಸುಧಾರಣೆಯನ್ನು ಜಾರಿಗೆ ತರುತ್ತೇವೆ, ನಿಮಗೆಲ್ಲ ಭೂಮಿಯನ್ನು ಉಚಿತವಾಗಿ ಹಂಚುತ್ತೇವೆಂದು ಒಂದು ಕುಂಟು ನೆಪವನ್ನು ಹೇಳಿಕೊಂಡು ಬರುತ್ತಿದ್ದಾರೆ. ಭೂಹೀನರಾದ ಲಕ್ಷಾಂತರ ಜನರು ದೇಶದಲ್ಲಿರುವಾಗ ಹಂಚಲಿಕ್ಕೆ ಭೂಮಿ ಇಲ್ಲ ದಿದ್ದರೂ ಭೂಮಿಯನ್ನು ಕೊಡುತ್ತೇವೆಂದರೆ ಅದು ಎಷ್ಟರಮಟ್ಟಿಗೆ ಸಫಲವಾಗುತ್ತದೆಂಬುದನ್ನು ಸರ್ಕಾರದವರು ಆಲೋಚನೆ ಮಾಡಿದಂತೆ ಕಂಡುಬರುತ್ತಿಲ್ಲ. ಆದರೆ ಜನರು ಈ ಒಂದು ಸ್ಲೋಗ ನ್ನನ್ನು ಕೇಳಿಕೊಂಡು ನಾವೂ ಕೂಡ ಒಂದು ದಿನ ಜಮೀನ್ದಾರರಾಗುತ್ತೇವೆಂಬ ಹಂಬಲದಲ್ಲಿ ಬಿದ್ದಿದ್ದಾರೆ. ಅಂತೂ ಈ ವರ್ಗದ ಜನರನ್ನು ಸರ್ಕಾರ ಸಂಪೂರ್ಣವಾಗಿ ಕಡೆಗಾಣಿಸಿದೆಯೆಂದು ನಾನು ಹೇಳಲಿಚ್ಛಿಸುತ್ತೇನೆ.

ಇನ್ನು ನಮ್ಮ ಹಣಕಾಸಿನ ಸಚಿವರೇ ನಮ್ಮ ಭೂರಹಿತ ವರ್ಗದವರ ಸಂಪಾದನೆ 104 ನಯೇ ಪೈಸೆಗಳಿದ್ದುದು ಈಗ 96 ನಯೇಪೈಸೆಗಿಳಿದಿದೆ ಎಂದು ಅವರ ವರದಿಯಲ್ಲೇ ತಿಳಿಸಿದ್ದಾರೆ. ನಮ್ಮ ರಾಜ್ಯದಲ್ಲಿ ಮೂರು ಯೋಜನೆಗಳನ್ನು ಮುಗಿಸಿದನಂತರ ಇಲ್ಲಿಯ ಜನರ ಸಂಪಾದನೆ ಇಷ್ಟು ಇಳಿಮುಖ ವಾಗಿದೆಯೆಂದು ಗೊತ್ತಾಗುತ್ತಿದೆ. ಹೀಗಿರುವಾಗ ನಮ್ಮ ಸರ್ಕಾರದವರು ಈ ವಿಚಾರಕ್ಕೆ ಎಷ್ಟರ ಮಟ್ಟಿಗೆ ಗಮನ ಕೊಟ್ಟಿದ್ದಾರೆಂಬುದು ಇದರಿಂದಲೇ ವ್ಯಕ್ತವಾಗುತ್ತಿದೆ. ಈ ಭೂರಹಿತ ಜನರಿಗೆ ವರ್ಷದಲ್ಲಿ 154 ದಿನ ಉದ್ಯೋಗ ದೊರೆತರೆ ಹೆಚ್ಚಾಯಿತು. ಹೀಗಿರುವಾಗ ಅವರ ಜೀವನ ಹೇಗೆ ನಡೆಯಬೇಕು ? ಅವರಿಗೆ ವಸ್ತ್ರವಿದ್ದರೆ ತಿನ್ನಲಿಕ್ಕೆ ಅನ್ನವಿಲ್ಲ. ಅನ್ನ ವಸ್ತ್ರಗಳೆರಡೂ ಇದ್ದರೆ ಇರಲಿಕ್ಕೆ ಮನೆಯಿಲ್ಲ. ಹೀಗಿದೆ ಇವರ ಬಾಳು. ಆದ್ದರಿಂದ ಈ ವರ್ಗ ಯಾವತ್ತೂ ಬಂಡವಾಳ ಷಾಹಿ ವರ್ಗವನ್ನೋ ಇಲ್ಲವೇ ಭೂ ಮಾಲೀಕ ವರ್ಗವನ್ನೋ ಆಶ್ರಯ ಮಾಡಿಕೊಂಡೇ ತಮ್ಮ ಜೀವನ ವನ್ನು ಸಾಗಿಸಬೇಕಾಗಿದೆ. ಈ ದಾಕ್ಷಿಣ್ಯದ ಬಾಳುವೆಯನ್ನು ತೊಡೆದುಹಾಕಲು ಸರ್ಕಾರ ಯಾವ ಕ್ರಮವನ್ನು ಹಾಕಿಕೊಂಡಿದೆ ? ಇವರಿಗೆ ನ್ಯಾಯ ದೊರಕಿಸಿಕೊಡಲು ಯಾವ ದಾರಿಯನ್ನು ಹಾಕಿದೆ? ಇವರ ಕಷ್ಟ ನಷ್ಟಗಳನ್ನು ಬಗೆಹರಿಸುವುದಕ್ಕೆ ಸರ್ಕಾರ ಯಾವ ದಾರಿಯನ್ನೂ ಹಾಕಿಲ್ಲವೆಂಬುದು ಸ್ಪಷ್ಟವಾಗಿ ಕಾಣುತ್ತದೆ. ಈ ದಿವಸ ಈ ವರ್ಗದ ಜನರಿಗೆ ಒಂದು ಅಂಗಿ, ಒಂದು ಷರಾಯಿ ಬಿಟ್ಟರೆ ಬೇರೆ ಗತಿ ಇಲ್ಲ. ಇವರಿಗೆ ಎರಡು ಜೊತೆ ಡ್ರೆಸ್ಸನ್ನು ಮಾಡಬೇಕೆಂಬ ಉದ್ದೇಶದಿಂದ ಇವರಿ ಗೇನಾದರೂ ಸ್ವಲ್ಪ ಹೆಚ್ಚಿನ ನೆರವನ್ನು ನೀಡಿದರೆ ಅದು ನೇರವಾಗಿ ಮಿಲ್ ಮಾಲೀಕರಿಗೆ ಹೋಗುತ್ತದೆ ಮನೆ ಮಾಡಿಕೊಳ್ಳಲಿ ಎಂದು ಅನುಕೂಲಗಳನ್ನೊದಗಿಸಿದರೆ ಅದು ಹೆಂಚಿನ ಕಾರ್ಖಾನೆಯವರಿಗೆ ಅಥವಾ ಸಿಮೆಂಟ್ ಕಂಪನಿಯವರಿಗೆ ಸೇರಿಹೋಗುತ್ತದೆ. ಹಣಕಾಸಿನ ಸಚಿವರು ಇಲ್ಲಿ ಎಲ್ಲ ವರ್ಗದವರಿಗೂ ವಾರ್ಷಿಕವರಮಾನ 289.6ರೂಪಾಯಿಗಳೆಂದು ಅವರು ಹೇಳಿದ್ದಾರೆ. ಆದರೆ ವಿರೋಧ ಪಕ್ಷದ ನಾಯಕರು ಇವರ ಸಂಪಾದನೆ ದಿನಕ್ಕೆ ನಾಲ್ಕು ಆಣೆಗಳಿಗೆ ಜಾಸ್ತಿಯಾಗಿಲ್ಲವೆಂದು ಅವರು ಹೇಳಿದ್ದಾರೆ. ಇನ್ನು ಕೆಲವು ರಾಷ್ಟ್ರದ ಮುಖಂಡರು ಇವರ ವರಮಾನ ಮೂರು ಆಣೆಗಳಿಗಿಂತ ಜಾಸ್ತಿ ಯಿಲ್ಲವೆಂದು ಅವರು ಹೇಳುತ್ತಿದ್ದಾರೆ. ಹೀಗಾದರೆ ಅವರು ಜೀವನ ಮಾಡುವುದು ಹೇಗೆ ? ಕೇವಲ ಖೈದಿಗಳಿಗೆ ಊಟಕ್ಕೆ ಒಂದು ರೂಪಾಯಿಯನ್ನು ಕೊಡುತ್ತಾರೆ. ಖೈದಿಗಳಿಗೆ ಅದರಲ್ಲೂ ಕ್ರಿಮಿ ನಲ್ ಆಗಿರುವವರಿಗೂ ಸಹ ದಿವಸಕ್ಕೆ ಒಂದು ರೂಪಾಯಿಯನ್ನು ಕೊಡುತ್ತಾರೆ. ಆದ್ದರಿಂದ ಅವರ ಕುಟುಂಬವನ್ನು ಹೇಗೆ ಸಂರಕ್ಷಣೆ ಮಾಡಬೇಕೆಂದು ಕೇಳುತ್ತೇನೆ. ನಿಮ್ಮ ಸರ್ಕಾರದಲ್ಲಿರತಕ್ಕ ಪ್ರಜೆ ಗಳಿಗಾಗಿ ಬಾಳತಕ್ಕ ಜನರು ಕ್ರಿಮಿನಲ್ ಖೈದಿಗಳಿಗಾಗಿ ಹೇಗಾದರೂಮಾಡಿ ಜೀವನನಡೆಸಬೇಕಲ್ಲವೇ? ಇಂಥವರ ಕಡೆ ಸರ್ಕಾರದವರು ತಮ್ಮ ಗಮನವನ್ನು ಏಕೆ ಇನ್ನೂ ಕೊಡಲಿಲ್ಲವೋ ಎಂದು ಕೇಳು ತ್ತೇನೆ. ಘಟನೆಯಲ್ಲಿ ನಿರುದ್ಯೋಗ ಸಮಸ್ಯೆಯನ್ನು ಸಂಪೂರ್ಣವಾಗಿ ನಿವಾರಣೆ ಮಾಡಬೇಕೆಂದು ಹೇಳಿದೆ. ಪ್ರತಿಯೊಬ್ಬರಿಗೂ ಆ ಪ್ರಕಾರ ಉದ್ಯೋಗ ಕಲ್ಪಿಸಿಕೊಡಬೇಕು. ವಿದ್ಯಾವಂತ ನಿರುದ್ಯೋಗ ಸಮಸ್ಯೆ ಮತ್ತು ಅವಿದ್ಯಾವಂತ ನಿರುದ್ಯೋಗ ಸಮಸ್ಯೆ ಒಂದೊಂದು ಕಡೆ ಇದೆ. ಖಾಯಂ ಆಗಿರು ವಂತಹ ನಿರುದ್ಯೋಗ ಸಮಸ್ಯೆ ಮತ್ತೊಂದು ಕಡೆ ಇದೆ. ಆದ್ದರಿಂದ ಘಟನೆಯಲ್ಲಿ ಹೇಳಿರತಕ್ಕ ಒಂದು ತತ್ವ, ಒಂದು ವಾದ ಏನಿದೆ ಅದನ್ನು ಈ ಸರ್ಕಾರವೂ ಅನುಸರಿಸತಕ್ಕದ್ದು ಬಹಳ ಮುಖ್ಯ.

ಇನ್ನು ಪ್ರೊಹಿಬಿಷನ್ ಎಂಬುದನ್ನು ಇಡೀ ರಾಜ್ಯಕ್ಕೆಲ್ಲಾ ಅನ್ವಯ ಮಾಡಬೇಕೆಂದು ಅದನ್ನು ಜಾರಿಗೆ ತರಬೇಕೆಂದಿದ್ದಾರೆ. ಗಾಂಧೀಜಿಯವರ ತತ್ವವನ್ನು ಅನುಸರಿಸುತ್ತಿದ್ದೇವೆಂದು ಇವರು

(ಶ್ರೀ ಗೋಪಾಲ ಸಾಲೆನ್ನ)

ಹೇಳುತ್ತಿದ್ದಾರೆ. ಆದರೆ ಅವರ ತತ್ವಗಳನ್ನು ಪರಿಪಾಲಿಸುವುದರಲ್ಲಿ ಕೊಂಚ ಮಟ್ಟಿಗೆ ಹಿಂದುಳಿದಿದ್ದಾರೆಂದು ಹೇಳಿದರೆ ಅದೇನೂ ತಪ್ಪಾಗಲಾರದು. ಏಕೆಂದರೆ ಇನ್ನೂ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಲಿಲ್ಲ. ಅಶಕ್ತರಾದವರಿಗೆ ರಕ್ಷಣೆ ಕೊಡಬೇಕು. ಮೊನ್ನೆತಾನೆ ಸೋಷಿಯಲ್ ವೆಲ್‌ಫೇರ್ ಸಚಿವರು ಅಂಗವಿಕಲರಿಗೆ ರಕ್ಷಣೆ ಕೊಡುವ ಇಲಾಖೆಯಿದು ಎಂಬುದಾಗಿ ಹೇಳಿದ್ದಾರೆ. ಎಲ್ಲರಿಗೂ ಸಂಬಂಧಪಟ್ಟದ್ದು, ಹರಿಜನ, ಗಿರಿ ಜನರಿಗೆ ಮಾತ್ರವೇ ಅಲ್ಲ ಎಂದೂ ಸಹ ಹೇಳಿದರು. ಆದರೆ ಎಷ್ಟೋ ಜನ ಕುರುಡರು, ಕುಂಟರು, ಮೂಗರು ರಸ್ತೆಗಳ ಮಗ್ಗುಲಲ್ಲ ಮಾಳಿಗೆಗಳ ಮೇಲೆ ಮಲಗಿಕೊಂಡಿರುತ್ತಾರೆ. ಅವರ ಒಂದು ದೃಷ್ಟಿಗೆ ಈ ಇಲಾಖೆ ಏನು ಮಾಡಿದೆ, ಅವರಿಗೆ ಏನು ರಕ್ಷಣೆ ಕೊಟ್ಟಿದೆ? ಎಂದು ನಾನು ಕೇಳುತ್ತೇನೆ. ಅದು ಈ ಇಲಾಖೆಗೆ ಸಂಬಂಧ ಪಟ್ಟದ್ದು ಅಲ್ಲವೇ? ಆದರೆ ಇಂತಹ ಒಂದು ರಾಷ್ಟ್ರದಲ್ಲಿ ಬೆಂಗಳೂರು, ಕ್ಯಾಪಿಟಲ್ ಹೆಡ್ ಕ್ವಾರ್ಟರ್ಸ್ ಎಂಬುದಾಗಿ ಹೇಳುತ್ತಾ ಈ ರೀತಿ weaker sections ನರಕ ಯಾತನೆಯನ್ನು ಹೊಂದುತ್ತಿರುವಾಗ ಈ ಸೋಷಿಯಲ್ ವೇಲ್‌ಫೇರ್ ಇಲಾಖೆ ಒಳ್ಳೆಯರೀತಿಯಲ್ಲಿ ಕೆಲಸಮಾಡುತ್ತಿದೆಯೆಂದು ಹೇಳುವುದು ಸರಿಯೆ ? ಇನ್ನು ಸೋಷಿಯಲ್ ವೆಲ್‌ಫೇರ್ ಇಲಾಖೆಯ ವಿಚಾರವಾಗಿ ಹೇಳುವುದಾದರೆ ಇದು weaker sections ಎಂದು ಏನು ಹೇಳುತ್ತಾರೆ ಅವಕ್ಕೆ ಅಷ್ಟಾಗಿ ಸಹಾಯವನ್ನು ದೊರಕಿಸುತ್ತಾ ಇಲ್ಲ. ದಲಿತವರ್ಗದವರ ಮತ್ತು ಹರಿಜನ, ಗಿರಿಜನರ ಅಭಿವೃಧಿಯ ಬಗ್ಗೆ ಮಾತ್ರವೇ ಈ ಇಲಾಖೆ ಕೆಲಸ ಮಾಡಿಕೊಂಡಿರುವುದಕ್ಕೆ ಪ್ರಾಮುಖ್ಯವಾದ ಕಾರಣವೆಂದು ಕಲ್ಯಾಣ ಅಭಿವೃದ್ಧಿ ಶಾಖೆಯ ಸಚಿವರು ಒಂದೆರಡು ಸಾರಿ ಹೇಳಿಕೆಯನ್ನು ಕೊಟ್ಟಿದ್ದಾರೆಂದು ನಾನು ಹೇಳುತ್ತೇನೆ. ಘಟನೆಯಲ್ಲಿ ಹೇಳಿರುವಂತೆ ಈ ಇಲಾಖೆಯು ನಮ್ಮ ದಲಿತವರ್ಗದವರ ಅಭಿವೃದ್ಧಿ ಒಂದು ಕಡೆ, ಅಸ್ಪೃಶ್ಯತಾ ನಿವಾರಣೆ ಮತ್ತೊಂದು ಕಡೆ, ಇನ್ನೊಂದು ಕಡೆ ಸಾಮಾಜಿಕ ಸಮಾನತೆ, ಮತ್ತೊಂದು ಕಡೆಯಲ್ಲಿ ಉದ್ಯೋಗಗಳಲ್ಲಿ ಸಮಾನತೆ ಅವಕಾಶಗಳನ್ನು ಒದಗಿಸಿಕೊಡಬೇಕಾದುದು ಮುಖ್ಯ. ಇದಕ್ಕಾಗಿಯೇ ಈ ಇಲಾಖೆ ಅಗತ್ಯವಾಗಿರುವುದು. ಅಂದಮೇಲೆ ಈ ಇಲಾಖೆಯ ಮೂಲಕ ಈ ಬಗ್ಗೆ ಕಾನೂನುಗಳನ್ನು ಜಾರಿ ಮಾಡಬೇಕೆಂದು ನಾನು ಹೇಳುತ್ತೇನೆ. Weaker sections ರಕ್ಷಣೆ ಕೊಡಬೇಕೆಂಬ ಉದ್ದೇಶದಿಂದ ಪ್ರತಿಯೊಂದು ರಾಜ್ಯದಲ್ಲೂ ಈ ಇಲಾಖೆ ಪ್ರತ್ಯೇಕವಾಗಿ ಕೆಲಸ ಮಾಡುತ್ತಿದೆ. ಮದ್ರಾಸನ್ನು ತೆಗೆದುಕೊಂಡರೆ ಹರಿಜನರಿಗೆ ಮತ್ತು ಗಿರಿಜನರಿಗೆ ಈ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಎಂದು ಪ್ರತ್ಯೇಕವಾಗಿಟ್ಟಿದ್ದಾರೆ. ಮಹಾರಾಜರುಗಳ ಕಾಲದಲ್ಲಿ ಹಿಂದೆ ತರಗತಿಗಳಲ್ಲೂ ಕೂಡ Depressed Class Welfare Department ಎಂದು ಪ್ರತ್ಯೇಕವಾಗಿ ನಡೆಯುತ್ತಿತ್ತು. ಆದರೆ ಇಂದು ಪದೇ ಪದೇ ಈ ಇಲಾಖೆ ಹೆಚ್ಚಾಗುವುದು ಬೇಡವೆಂಬ ದೃಷ್ಟಿಯಿಂದಲೂ ಮತ್ತು ಮಂತ್ರಿಗಳ ಸಂಖ್ಯೆ ಈಬಗ್ಗೆ ಇನ್ನಷ್ಟು ಜಾಸ್ತಿ ಕೊಡುವುದು ಬೇಡವೆಂದು ಈ ಸರಕಾರ ಈ ಇಲಾಖೆಯನ್ನು ಕೇವಲ ಒಬ್ಬ ಮಂತ್ರಿ ಮತ್ತು ಒಬ್ಬ ಉಪಮಂತ್ರಿಗಳ ವಶಕ್ಕೆ ಕೊಟ್ಟರು, ಆದರೆ ಇವರು ಕೇವಲ ಹರಿಜನ ಮತ್ತು ಗಿರಿಜನರಿಗೆ ಮಾತ್ರ ಈ ಇಲಾಖೆ ಸಂಬಂಧಪಟ್ಟದ್ದಲ್ಲ. ಎಲ್ಲರಿಗೂ ಸಂಬಂಧಪಟ್ಟಿದೆ ಎಂಬ ವಾದವನ್ನು ಆಡಿಕೊಂಡು ಹೇಗೊ ತಪ್ಪಿಸಿಕೊಂಡು ಹೋಗೋಣವೆಂಬ ನೀತಿಯನ್ನು ಅನುಸರಿಸುವುದು ಖಂಡಿತವಾಗಿ ಸರಿಯಲ್ಲವೆಂಬುದಾಗಿ ನಾನು ಮಾನ್ಯ ಸಚಿವರಿಗೆ ತಿಳಿಸುತ್ತೇನೆ. ಇನ್ನು ಇಲಾಖೆಯಲ್ಲಿ ಬಹಳವಾಗಿ ಹಣ ದುರುಪಯೋಗವಾಗಿದೆ. ಈ ಇಲಾಖೆಯ ದುಡ್ಡನ್ನು ಯಾವ ಒಂದು ಕಾರ್ಯಕ್ಕೆ ವಿನಿಯೋಗಿಸಬೇಕೋ ಅದಕ್ಕೆ ವಿನಿಯೋಗಿಸದೆ ಪೋಲು ಮಾಡುತ್ತಿದ್ದಾರೆಂದು ತಿಳಿದುಬಂದಿದ್ದರಿಂದ ಅದನ್ನು ಈಗ ತನಿಖೆ ನಡೆಸಲಿಕ್ಕೆ ಒಬ್ಬ ಆಫೀಸರನ್ನು ನೇಮಕ ಮಾಡಿದ್ದೀರೆಂದು ತಿಳಿಸಿದರು. ಇದು ಬಹಳ ಸ್ವಾಗತಾರ್ಹವಾದುದು. ಆದರೆ ಅವರು ಇದನ್ನು ಸರಿಯಾದ ರೀತಿಯಲ್ಲಿ ವಿಮರ್ಶೆ ಮಾಡಿ, ತಪ್ಪಿತಸ್ಥರನ್ನು ಬೈಲಿಗೆ ತಂದು, ಮುಂದೆ ಆ ರೀತಿ ನಡೆಯದಹಾಗೆ ಮಾಡಿದರೆ ಮಾತ್ರ ಆ ಆಫೀಸರನ್ನು ನೇಮಕ ಮಾಡಿದ್ದಕ್ಕೆ ಸಾರ್ಥಕವಾದೀತು. ಇನ್ನೊಂದು ವಿಚಾರ ಹೇಳಿದರು. 17 ಮಂದಿಗಳನ್ನು ಈ ಇಲಾಖೆಯಿಂದ ತೆಗೆದ ವಿಚಾರ. ಇವರನ್ನು ಹಿಂದಿನ ಮಂತ್ರಿಗಳು ನೇಮಕ ಮಾಡಿದ್ದರು. ಅದನ್ನು ಕ್ರಮಬದ್ಧವಾಗಿ ಮಾಡಿಲ್ಲವೆಂದು ಎ. ಜಿ. ಅವರು ಆಕ್ಷೇಪಣೆ ಮಾಡಿದ್ದಾರೆ. ಅವರ ಪೈಕಿ ಒಬ್ಬರು 12 ವರ್ಷಗಳ ಕಾಲ ಸರ್ವಿಸ್ ಮಾಡಿದವರು. ಇನ್ನೊಬ್ಬರು Welfare Department ನಲ್ಲಿ ರಿಟೈರ್ಡ್ ಆಗಿ ಕೆಲಸಕ್ಕೆ ಹೋಗಿರುವವರು. ಇವರಿಂದ ಗೆಜೆಟೆಡ್ ರ್‍ಯಾಂಕ್‌ನಲ್ಲಿರುವ ಗ್ರಾಜುಯೇಟನ್ನು ಎಲ್ಲಿ ಕಳುಸುತ್ತಾರೆಂಬುದು ಬೇರೆ ಗೊತ್ತಿಲ್ಲ. ಸರ್ಕಾರದವರು ಮಾಡಿದ್ದೆಲ್ಲಾ ತಪ್ಪಾಗಿ ಹೋಗಿದೆ. ಪಿ.ಎಸ್.ಪಿ. ಯವರು ಅದಕ್ಕಾಗಿಯೇ ಒಪ್ಪಲಿಲ್ಲ. ಅವರು ಮಹಾರಾಜರ ಕಾಲದಲ್ಲಿ ಆಗ ವೆಲ್‌ಫೇರ್ ಆಫೀಸಿನಲ್ಲಿ ಕೆಲಸ ಮಾಡಿದಂತಹವರು. ಅವರಲ್ಲಿ ಯೋಗ್ಯತೆ ಇಲ್ಲವೋ ವಿದ್ಯೆ ಇಲ್ಲವೋ, ಅಂತು ಸ್ಪೆಷಲ್ಲಾಗಿ ಟ್ರೈನಿಂಗ್ ಆಗಿ ಬಂದವರು. ಅಂದಮೇಲೆ, ಇವರನ್ನು ಇದೇ ಇಲಾಖೆಯಲ್ಲಿ ದುಡ್ಡನ್ನು ಖರ್ಚು ಮಾಡದೆಯೇ ಇವರನ್ನು ನೇಮಕ ಮಾಡುವಾಗ ಈಗ ಅವರು

ಅರ್ಹರು ಎಂದು ಹೇಗೆ ಗೊತ್ತಾಯಿತೋ? ಹೈಕೋರ್ಟು ಮತ್ತು ಸುಪ್ರೀಂ ಕೋರ್ಟುಗಳಲ್ಲಿ ಹೋದಮೇಲೆ ಅವರಿಗೆ ಆ ಅಧಿಕಾರ ಕೊಡಬೇಕು ಎಂಬ ಹೈಕೋರ್ಟಿನ ತೀರ್ಮಾನವನ್ನು ಇಟ್ಟು ಕೊಂಡು ಕೂಡಲೇ ಜಾರಿಗೆ ತಂದಿದ್ದಾರೆ. ಆದ್ದರಿಂದ ಆ ರೀತಿಯಲ್ಲಿ ಅಧಿಕಾರಿಗಳನ್ನು ಒಳಗೆ ತರಬಹುದು. ಈ ವಿಷಯದಲ್ಲಿ ಸುಪ್ರೀಂ ಕೋರ್ಟಿನವರು ಒಂದು ತೀರ್ಮಾನವನ್ನುಕೊಟ್ಟು ಪ್ರೋಮೋಷನ್ನಿನಲ್ಲಿ ಅವರಿಗೆ ಅವಕಾಶವನ್ನು ಕೊಡದಿದ್ದರೆ ರಿಜರ್ವೇಷನ್ ನಿಯಮವನ್ನಾದರೂ ಅನುಸರಿಸಿ ಸರ್ಕಾರದವರು ಅವರಿಗೆ ಆ ಅಧಿಕಾರವನ್ನು ಕೊಡುತ್ತಾರೆಂದು ಹೇಳಿದ್ದಾರೆ. ಅಂದಮೇಲೆ ಅದನ್ನು ಇದುವರೆಗೆ ಏಕೆ ಜಾರಿಗೆ ತರಲಿಲ್ಲ? ಹರಿಜನ ಮತ್ತು ಗಿರಿಜನ ಸೇವಕರು ಮತ್ತು ರಕ್ಷಕ ರಾಗಿರತಕ್ಕಂಥವರು ಅದನ್ನು ಏತಕ್ಕೆ ಜಾರಿಗೆ ತರಲಿಲ್ಲವೋ ಗೊತ್ತಿಲ್ಲ ಎಲ್ಲೆಲ್ಲಿ ಹುದ್ದೆಗಳು ಖಾಲಿ ಇವೆಯೋ ಅಲ್ಲಿ ಶೇಕಡ 18ರಷ್ಟು ನೇಮಕಮಾಡಿ ರೂಲ್ಸ್ ಪ್ರಕಾರ ಬಾಕಿಯವರನ್ನು ಮನೆಗೆ ಕಳುಹಿಸುತ್ತಿದ್ದಾರೆ. ಇದರಿಂದ ಅವರ ಪರ್ಸಂಟೇಜನ್ನು ಮುಂದಕ್ಕೆ ತರಲಿಲ್ಲ. ಈ ವಿಷಯವನ್ನು ಇಲಾಖೆಯವರೊಂದಿಗೆ ಕೇಳುತ್ತೇನೆ. ಇಲಾಖೆಯಲ್ಲಿ weaker section ಬಗ್ಗೆ ಅನೇಕರು ಕಣ್ಣು ಮುಚ್ಚಿಕೊಂಡು ಕೆಲಸಮಾಡುತ್ತಿದ್ದಾರೆಂದು ನಾನು ಹೇಳುತ್ತೇನೆ. ಏನಾದರೂ ಇರಲಿ ಹೈಕೋರ್ಟಿನವರು ಸರ್ಕಾರದವರ ವಾದ ಏನೇ ಇರಲಿ ಅವರ ವಾದವನ್ನೇ ಡೆಫಿನಟ್ ಮಾಡಿಕೊಳ್ಳುವುದು ನಿಜವೆಂದು ಹೇಳಿದ್ದಾರೆ. ಆದ್ದರಿಂದ Social Welfare Office ನಲ್ಲಿರತಕ್ಕ ಅಧಿಕಾರಿಗಳು ಅಷ್ಟಾಗಿ ಪ್ರಯೋಜನವಿಲ್ಲ. ಅವರವರು ಚೆನ್ನಾಗಿ ಕೆಲಸಮಾಡದಿದ್ದರೆ ಅದು ಸರ್ಕಾರದ ಅವಗಾಹನೆಗೆ ಬಂದು ನಿಜವಾಗಿ ಅಂತಹವರನ್ನು ಸಸ್ಪೆಂಡ್ ಅಥವಾ ಡಿಸ್‌ಮಿಸ್ ಮಾಡಬೇಕಾಗಿ ಬರುತ್ತದೆ. ಆದ್ದರಿಂದ ನಾನು ಸರ್ಕಾರಕ್ಕೆ ಅಪೀಲು ಮಾಡುವುದೇನೆಂದರೆ ಮನಸ್ಸಿಗೆ ನೋವು, ಕಷ್ಟ ಉಂಟುಮಾಡುವವರನ್ನು ಪೋಲೀಸರಿಗೆ ಕೊಡಿ. ಏಕೆಂದರೆ ಈಗ ಹರಿಜನವೆಂಬ ಪ್ರಶ್ನೆ ಇಲ್ಲ, ಹರಿಜನ-ಗಿರಿಜನವೆಂಬ ರಿಯಾಯಿತಿ ಬೇಡ. ಅವರೂ ಸಹ ಒಳ್ಳೆಯವರಾಗಿ ಅಕ್ಕಪಕ್ಕದವರ ಹಾಗೆ ಕಾನೂನು ಬದ್ಧರಾಗಿರಬೇಕು. ಮುಖ್ಯವಾಗಿ ದಲಿತವರ್ಗದವರು ಎಲ್ಲರೊಡನೆ ಸಾಮೂಹಿಕವಾಗಿ ಸೇರುವುದಕ್ಕೆ ಸರ್ಕಾರದವರು ತಕ್ಕ ವ್ಯವಸ್ಥೆಮಾಡಬೇಕೆಂದು ನಾನು ಕೋರುತ್ತೇನೆ. ಆ ರೀತಿ ಅನೇಕ ಕಡೆಗಳಲ್ಲಿ ಆಗದೆ ಎಷ್ಟೋ ಸಂಸಾರಗಳು ದುಃಖದಿಂದ ಕೂಡಿವೆ. ಆ ವಿಷಯವನ್ನು ಸರ್ಕಾರದವರು ಗಮನದಲ್ಲಿಟ್ಟುಕೊಂಡು ಅವರ ಅಭಿವೃದ್ಧಿಯ ಬಗ್ಗೆ ತಕ್ಕ ಏರ್ಪಾಡುಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಮಹಿಳಾ ಅಭಿವೃದ್ಧಿ ಕೇಂದ್ರಗಳನ್ನು ಅಲ್ಲಲ್ಲಿ ತೆರೆಯಲಾಗುತ್ತಿದೆ ಎಂದು ಹೇಳಿದ್ದಾರೆ. ಅದು ಸಂತೋಷದ ವಿಚಾರ. ಇದಕ್ಕೆ ಸೋಷಿಯಲ್ ವೆಲ್‌ಫೇರ್ ಬೋರ್ಡಿನಲ್ಲಿ ಹೆಚ್ಚಿನ ಹಣವನ್ನೂ ಸಹ ಒದಗಿಸಿದ್ದಾರೆ. ಸೋಷಿಯಲ್ ವೆಲ್‌ಫೇರ್ ಶಾಖೆಯ ಸಚಿವೆಯರು ಇದರಲ್ಲಿ ನಾಯಕತ್ವವನ್ನು ವಹಿಸಿ, ತುಂಬಾ ಕೆಲಸಮಾಡುತ್ತಿದ್ದಾರೆ. ಸೋಷಿಯಲ್ ವೆಲ್‌ಫೇರ್ ಬೋರ್ಡಿನಲ್ಲಿ ಷೆಡ್ಯೂಲ್ಡ್ ಕ್ಯಾಸ್ಟಿನ ಮಹಿಳಾ ಅಭಿವೃದ್ಧಿ ಸಂಸ್ಥೆಗಳಿಗೆ ಏನು ಹಣವನ್ನು ಒದಗಿಸಿದ್ದಾರೆಯೋ ಆ ಹಣವನ್ನು ಬೇರೆ ಮಹಿಳಾ ಸಂಸ್ಥೆಗೆ, ಬೇರೆ ಮಹಿಳೆಯವರನ್ನು ಸುಧಾರಿಸುವುದಕ್ಕೆ ಸಂಬಂಧಪಟ್ಟ ಕೆಲಸಗಳಿಗೆ ವಿನಿಯೋಗಿಸುವುದು ಸರಿಯಲ್ಲ. ಆ ಮಹಿಳಾ ಸಂಸ್ಥೆಗಳಿಗೆ ಖರ್ಚುಮಾಡುವುದಕ್ಕೆ ಬೇಕಾಗಿರತಕ್ಕ ಹಣವನ್ನು ಸೆಂಟ್ರಲ್ ಸೋಷಿಯಲ್ ವೆಲ್‌ಫೇರ್ ಬೋರ್ಡಿನಿಂದ ತರಿಸಬೇಕು. ಈ ದೇಶದಲ್ಲಿರತಕ್ಕ ನಿರ್ಗತಿಕರಿಗೆ ಮತ್ತು ದುಃಖಕ್ಕೆ ಈಡಾಗಿರತಕ್ಕವರಿಗೆ ಈ ಬಡ್ಜೆಟ್ಟಿನಲ್ಲಿ ಯಾವ ರಕ್ಷಣೆಯನ್ನೂ ಮಾಡಿಕೊಟ್ಟಿಲ್ಲ. ಇದರಲ್ಲಿ ಕೇವಲ ದೊಡ್ಡ ದೊಡ್ಡ ಸಾಹುಕಾರರುಗಳಿಗೆ, ದೊಡ್ಡ ದೊಡ್ಡ ಕಂಟ್ರಾಕ್ಟರುಗಳಿಗೆ ಅನುಕೂಲವಾಗಿದೆಯೇ ಹೊರತು, ಸಾಮಾನ್ಯ ಮನುಷ್ಯನಿಗೆ ಸಾಮಾನ್ಯ ಜನತೆಗೆ ಅನುಕೂಲಮಾಡಿಕೊಟ್ಟಿಲ್ಲ ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† **Sri D. VENKATARAMAIAH** (Robertsonpet).—I rise to make a few observations on the budget estimates proposed by the Finance Minister for the year 1964–65. Yesterday the Leader of the Opposition initiating the discussion on the budget proposals in his usual, exaggerated manner, compared the administration to a dilapidated cart tied to the yoke with old bullocks. I would only tell the Leader of the Opposition that the cart which is being run by the Mysore Government is a cart made of iron and steel and that the bullocks are not old but experienced bullocks. We all have seen when we travel in automobiles at nights, that the bullocks give way to motor vehicles at night, even though the cartmen is asleep.

(SRI. D. VENKATARAMAIAH)

That is because of their experience, just as the men running the administration here are experienced.

Members spoke about Sharavathi, Krishna, Arkavati, Cauvery and so on but in my district, namely Kolar, none of these flow, excepting the Palar which is dry as dust for 11½ months in a year. When I compare the budget allotment for the other districts with Kolar, I find very little allotments have been made, it is hardly 4 or 5 per cent and I hope the Finance Minister will give redress to this district.

Members are aware that with the amalgamation of the Mysore Mines and the Champion Reef Mines, retrenchmet of thousands of workers are going to take place. A committee has been constituted for the purpose, of which Hon'ble Finance Minister is a Member. My suggestion is that till the Earth Moving Factory is established, retrenchment from the gold mines should not take place. Alternatively, as the work on the new factory proceeds and as and when people from the Mines are absorbed, simultaneous retrenchment could take place in the Mines but the workers should not be left on the roads. Otherwise, the unemployment which is already heavy in K.G.F. will increase giving rise to a number of problems.

For the earth moving machinery factory, the Government of Mysore have released about 1,600 acres of land. Meanwhile, I am told, that of these 1,600 acres, one or 2 acres have been disposed of by the Revenue Department at the instance of a very influential person. I am sorry to bring this to the notice of the House and I request the Government to look into the matter immediately, Land which was selling at Rs. 40 or 50 in the area has shot up to 6 or 7 thousand rupees. Immediate action should be taken and the land released for the location of the factory should not be disposed of. An application was filed on one day, and within 2 or 3 days, the land has been granted with very great speed.

Sri B. D. JATTI.—If tha Hon'ble Member can given the information to me today privately, I will see that something is done. Our intention is to give the land for the purpose of the factory to be set-up for manufacturing heavy earth moving machinery and also the Minting Factory.

Sri SANJEEVANATH AIKALA (Suratkal).—When big projects come into being, naturally the price of neighbouring lands goes. Government must be aware of it.

Sri B. D. JATTI.—The Hon'ble Member did not understand what we were discussing. He is most unfortunate.

Sri D. VENKATARAMAIAH.—Now that the gold mine has been taken over by the Government of India, the management is vested with a Mining Board, of which Hon'ble Finance Minister is a Member. In this connection I like to submit that the factory to be located there is virtually an unit of the H. A. L. at Bangalore and the office has been located at Bangalore and not at K. G. F. My information is that most

of the officers appointed do not belong to Mysore but come from Kerala or Madras or other provinces.

My request to the Finance Minister is, sufficient and early attention must be given to that and see that the majority of the personnel that will have to be taken into the factories should be Mysoreans and Mysoreans alone. I am well aware that this is a concern of the Government of India. But still in view of the retrenchment that takes place in the mines, they should be given first preference.

Sri B. D. JATTI.—Sir, the point is, if technical personnel required for the running of the factory is available in Mysore State, they will have given priority, If they are not available, we must take from outside. That is what has occurred today.

Sri D. VENKATARAMAIAH.—Sir, in view of the fact that the Chairman of this Board is the Finance Minister of Government of India, why not sufficient pressure and influence be used to have the Finance Minister of Mysore State as the Vice-Chairman of that Board? It is then and then alone that we can have the scope of safe-guarding the interest of Mysoreans. Our experience in the other factories is entirely different.

Next, Sir, about the Central Workshop at K. G. F. In that connection my suggestion is, there are already workshops in Champion Reefs, Mysore Mines and Nandidurg. One of these mines might well be developed in a Central Workshop and additional finances is not necessary for an additional workshop. It is regrettable that at a cost of nearly six lakhs of rupees the building for a School of Mines......

Sri B. D. JATTI.—Sir, let there not be any mistake here so far as the Central Workshop is concerned. It is divided into two stages. First it consists of all the articles available in the K. G. F. and they will be made use of by the K. G. M. U. This new Central Factory which is to be started is to take up work from the general public.

Sri D. VENKATARAMAIAH.—Sir, regarding the Schools of Mines at K. G. F., for the last 2 or 3 years assurance is being given by Government that the school is going to be up-graded to Mining College. It has not been done yet. More than that, a building at the cost of six lakhs of rupees has been built and the construction was completed one year back. I do not know what obstacle is there to have the building used. The rumour is, either they have got the Prime Minister or the President for opening this and till then, this will not be opened at all. I really fail to understand this.

Mr. SPEAKER. —The Hon'ble Member may ask for its early utilisation and use and occupation. Let him not bring in names here.

Sri D. VENKATARAMAIAH.—Very well Sir. My only request is that the building which is ready should be opened immediately.

Next, Sir, I congratulate the Minister for Agriculture for having brought a Bill for Agriculture College. In this connection I want to submit that unless we utilise the money that is going to be given by

(SRI D. VENKATARAMAIAH)

Government of India immediately, I feel there is a possibility of the Andhra Government taking it away. Therefore, Government should take immediate steps. A Bill has been passed into Act by the Andhra Legislature and they are going to utilise this amount unless we come into the field first. I request the Finance Minister to look into this matter.

Sir, so far as starting of sugar factories is concerned, we find in the budget and the speech of the Finance Minister, the name of four or five places, I do not know what happened to the request of Bangarpet Committee which was formed in this connection and which has also applied for a licence to have a sugar factory there. Sufficient data and material is there and I request the Finance Minister that from among the 5 or 6 factories that are going to be started, one should be started at Bangarpet.

Sri B. D. JATTI.—There is already one at Gowribidnur.

Sri D. VENKATARAMAIAH.—Sir, I am aware of it. Gowribidnur factory can be used only for 3 or 4 taluks round about. At Bangarpet the sugar cane production is more than Gowribidnur. As a matter of fact, 3 or 4 lakhs of rupees have already been collected for this and so this request might kindly be viewed with great generosity.

Sir, I preface my speech by saying that there is neither Cauvery nor Krishna in Kolar District. So far as Bangarpet is concerned, there is the Palar river which goes into Madras State. There is a good tank atchkat where sugarcane can been grown and a sugar factory could be established there. When I speak about Kolar District, I must say that the irrigation pump sets that are now given are not sufficient and more should be given.

An application for a textile factory to be located at Kolar is still pending with the Mysore Government. They should look into the matter and give redress.

Then, Sir, the agitation to have a District and Sessions Judge's Court at Kolar is there since a very long time. I do not know what objections and hurdles ars there to have a District and Session Judge's Court at Kolar. As things stand to-day, there are 46 session cases pending in that district. Fortunately for us, the District Judges who are posted for the last 6 or 7 years have cleared much of the arrears. But, there are a number of cases which are to be disposed of immediately because there are persons who are in custody for nearly a year. I request the authorities to establish a District and Sessions Court located in Kolar.

Then Sir, yesterday I learnt that a railway link from Marikuppam to Kuppam, *i.e.*, Madras-Bangalore line would be laid and the orders have already been passed by the Central Government. I do not know definitely about that. I request the Government to look into the matter and see that the line is given.

Coming to the Co-operation Department, it is really a very good decision that has been taken by the Hon'ble Minister for Co-operation to have District Industrial Co-operative Bank in every district. But, the

personnel of the societies, the nomination is respect of Directors and all that has not yet been done. I request Government to take early steps in this matter. With these words, I commend the Budget for the approval of this House.

4-00 P. M.

† ಶ್ರೀ ಅಂಗಡಿ ಚೆನ್ನಬಸಪ್ಪ (ಹಡಗಲಿ).—ಸ್ವಾಮಿ, ಅರ್ಥಸಚಿವರು 1964–65ನೆಯ ಸಾಲಿಗೆ ಈ ಸಭೆಯ ಮುಂದಿಟ್ಟಿರುವ ಆಯವ್ಯಯದ ಅಂದಾಜು ಪಟ್ಟಿಯಲ್ಲಿ ಸ್ವಾಗತಾರ್ಹವಾದುದೇನೂ ಇಲ್ಲದ ಕಾರಣ ನಾನಿದನ್ನು ಸ್ವಾಗತ ಮಾಡಲು ಅಸಮರ್ಥನಾಗಿದ್ದೇನೆ. ಈಗ ನಮ್ಮೆಲ್ಲರಿಗೂ ಗೊತ್ತಿರುವಂತೆ ನಮ್ಮ ದೇಶದಲ್ಲಿ ಹಾಗೂ ರಾಜ್ಯದಲ್ಲಿ, ಪಾರ್ಲಿಮೆಂಟರಿ ಪದ್ಧತಿಯ ಸರಕಾರಗಳು ನಡೆಯುತ್ತಿವೆ. ಪಾರ್ಲಿಮೆಂಟರಿ ಸರಕಾರ ಪದ್ಧತಿ ಎಂದರೆ ನಾವು ಪ್ರಜಾಪ್ರಭುತ್ವ ಅಥವಾ ಡೆಮೋಕ್ರಸಿ ಎಂದು ಹೇಳುತ್ತೇವೆ. ಆದರೆ ನಾವು ಗಂಭೀರವಾಗಿ ಯೋಚನೆಮಾಡಿ ನೋಡಿ ಈ ಪದ್ಧತಿ ಏನೆಂದು ನಾವು ಆಳವಾಗಿ ಅಭ್ಯಾಸ ಮಾಡಿಲ್ಲ. ಇಂಗ್ಲೆಂಡಿನಲ್ಲಿ ಒಬ್ಬ ಮನುಷ್ಯನನ್ನು ಪಾರ್ಲಿಮೆಂಟರಿ ಸರಕಾರ ಪದ್ಧತಿಯ ಅರ್ಥವೇನೆಂದು ಕೇಳಿದಾಗ ಅವನು 'ಬ್ರೆಡ್ ಫಾರ್ ಆಲ್, ವೈನ್ ಫಾರ್ ಎ ಫ್ಯೂ' ಎಂದು ಹೇಳಿದನಂತೆ. ಇದನ್ನು ಸುಲಭವಾಗಿ ಕನ್ನಡಕ್ಕೆ ತರ್ಜುಮೆ ಮಾಡಿದರೆ, ಎಲ್ಲರಿಗೂ ರೊಟ್ಟಿ ಕೆಲವರಿಗೆ ಹೋಳಿಗೆ ಎಂದು ಮಾಡಬಹುದು. ಇದು ಪಾರ್ಲಿಮೆಂಟರಿ ಸರಕಾರ. ಇಂಗ್ಲೆಂಡಿನಲ್ಲಿಯೂ ಕೂಡ ಪಾರ್ಲಿಮೆಂಟರಿ ಪದ್ಧತಿಯ ಸರಕಾರ ಜಾರಿಯಲ್ಲಿದೆ. ಆದರೆ ಇಲ್ಲಿನ ಕಾಂಗ್ರೆಸ್ ಸಂಸ್ಥೆ ಅದಕ್ಕಿಂತಲೂ ಒಂದು ಹೆಜ್ಜೆ ಮುಂದೆ ಹೋಗಿ ಸೋಷಿಯಲಿಸ್ಟಿಕ್ ಪ್ಯಾಟರ್ನ್ ಆಫ್ ಸೊಸೈಟಿ ನಮ್ಮ ಗುರಿ ಎಂದು ಹತ್ತು ವರ್ಷಗಳ ಕೆಳಗೆ ಸಾರಿ ಅದನ್ನು ಇಟ್ಟುಕೊಂಡಿದ್ದಾರೆ.

[Chairman (SMT. NAGARATHNAMMA HIREMATH) in the Chair.]

ಸ್ವಾಮಿ, ಈ ಸೋಷಿಯಲಿಸ್ಟಿಕ್ ಪ್ಯಾಟರ್ನ್ ಆಫ್ ಸೊಸೈಟಿ ಎಂಬ ಪದವನ್ನು ಹಾಕಿ ಜನರಲ್ಲಿ ಕಳವಳವನ್ನುಂಟು ಮಾಡಿದ್ದಾರೆ. ಪಾರ್ಲಿಮೆಂಟರಿ ಪದ್ಧತಿಯಲ್ಲಿ ಕೆಲವರಿಗೆ ಹೋಳಿಗೆ ಸಿಕ್ಕಿದರೆ, ಸೋಷಿಯಲಿಸ್ಟಿಕ್ ಪ್ಯಾಟರ್ನ್‌ನಲ್ಲಿ ಸಮಾನತೆ ಸಿಕ್ಕುತ್ತದೆ. ಆದರೆ ಕಾಂಗ್ರೆಸ್ ಸರಕಾರ ಈ ಸಮಾನತೆಯನ್ನು ದೊರಕಿಸುವುದಕ್ಕೆ ಪ್ರಯತ್ನಪಡುತ್ತೇವೆ ಎಂಬ ಉದ್ದೇಶದಿಂದ ಹೊರಟರು. ಅವರು ಏನು ಮಾಡಿದ್ದಾರೆ ತಮ್ಮ ಗುರಿ ಸಾಧಿಸುವುದಕ್ಕೆ ಎಂಬುದನ್ನು ನೋಡಬಹುದು. ಭೂ ಸುಧಾರಣೆ ಆಗಬೇಕೆಂದು ಹೈ ಕಮಾಂಡಿನವರು ಆದೇಶ ಕಳುಹಿಸುತ್ತಿದ್ದಾರೆ, ಈ ಸಭೆಯಲ್ಲಿ ಒಂದು ಕಾಯಿದೆ ಕೂಡ ಅಂಗೀಕಾರವಾಗಿದೆ. ಆದರೂ ಅದು ಜಾರಿಗೆ ಬಂದಿಲ್ಲ. ನಿಜವಾಗಿ ಅದನ್ನು ಜಾರಿಗೆ ತರುವುದಕ್ಕೆ ಈ ಸರಕಾರ ಅಸಮರ್ಥವಾಗಿದೆಯೆಂದು ಹೇಳಬಹುದು. ಅವರು ಜಾರಿಗೆ ತಂದಿರುವುದಕ್ಕೆ ಏನಾದರೂ ಕಾರಣ ಹೇಳಬಹುದು ಸುಪ್ರೀಮ್ ಕೋರ್ಟಿನ ಜಡ್ಜ್‌ಮೆಂಟ್ ತೋರಿಸಬಹುದು. ಆದರೆ ಇವರಿಗೆ ಮನಸ್ಸಿದ್ದರೆ ಬಹುಭಾಗವನ್ನು ಜಾರಿಗೆ ತಂದು ಆಮೇಲೆ ತಿದ್ದುಪಡಿ ತಂದು ಮಿಕ್ಕುದನ್ನು ಜಾರಿಗೆ ತರಬಹುದು. ಭೂ ಸುಧಾರಣೆಯ ವಿಷಯದಲ್ಲಿ ಯಾರಿಗೂ ಭಿನ್ನಾಭಿಪ್ರಾಯವಿಲ್ಲ. ಸಮಾಜವಾದದ ಈ ಒಂದು ಮುಖ್ಯ ಕಾರ್ಯವನ್ನು ಮಾಡಲು ಈ ಸರಕಾರ ಅಸಮರ್ಥವಾಗಿದೆ.

ಇನ್ನೊಂದು ವಿಷಯವನ್ನು ಹೇಳಬೇಕಾಗಿದೆ. ನಮ್ಮ ರಾಜ್ಯದಲ್ಲಿ ಹಳ್ಳಿಗಾಡಿನ ಜನರಿಗೆ ಎಷ್ಟು ಸಾಲವಿದೆ ಎನ್ನುವ ಬಗ್ಗೆ ನಮ್ಮ ರಾಜ್ಯ ಸರಕಾರದಲ್ಲಿ ಅಂಕಿ ಅಂಶಗಳಿಲ್ಲ. ರೈತನ ಸಾಲವೆಲ್ಲ ಪೂರ್ಣವಾಗಿ ತೀರಿದ ಹೊರತು ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿ ಯಾವ ಯೋಜನೆಗಳನ್ನು ಮಾಡಿದರೂ ಸಫಲವಾಗುವುದಿಲ್ಲ. ನಿಜವಾಗಿ ಡೆಟ್ ಮಾರಟೋರಿಯಂ ಕಾನೂನನ್ನು ಅಂಗೀಕಾರ ಮಾಡುವುದಕ್ಕೆ ತಯಾರಾಗಿದ್ದಾರೆಯೆ ಎಂದು ಕೇಳುತ್ತೇನೆ. ಇಲ್ಲದಿದ್ದರೆ ಇವರದು ಸೋಷಿಯಲಿಸ್ಟಿಕ್ ಪ್ಯಾಟರ್ನ್ ಆಫ್ ಸೊಸೈಟಿ ಗುರಿ ಎಂದು ಹೇಳುವುದರಲ್ಲಿ ಅರ್ಥವಿಲ್ಲ.

ಶ್ರೀ ಬಿ. ಡಿ. ಜತ್ತಿ.—ಡೆಟ್ ಮಾರಟೋರಿಯಂ ಬಹಳ ಹಳೆಯದಾಗಿದೆ. ಸೋಷಿಯಲಿಸಮನ್ನು ನಾವು ವಿರೋಧ ಮಾಡಿಲ್ಲ. ಬೊಂಬಾಯಿನಲ್ಲಿ ಮೊದಲು ಆ ಕಾನೂನಿತ್ತು.

ಶ್ರೀ ಅಂಗಡಿ ಚೆನ್ನಬಸಪ್ಪ.—ಇಲ್ಲಿನ ವಿಷಯ ಹೇಳಬೇಕು. ಇಂತಹ ಒಂದು ಪ್ರಸಂಗದಲ್ಲಿ ನಿಜವಾಗಿಯೂ ಸೋಷಿಯಲಿಸ್ಟ್ಸ್ ಎಂದು ಕರೆದುಕೊಳ್ಳುತ್ತಿದ್ದರೆ, ಸೋಷಿಯಲಿಸಂನಲ್ಲಿ ನಂಬಿಕೆಯಿದ್ದರೆ ಅದಕ್ಕೆ ಬೇಕಾದ ಕರ್ತವ್ಯಗಳನ್ನು ಮಾಡಿದರೆ ಸರಿಹೋಗುತ್ತದೆ.

ಆಯವ್ಯಯದ ಅಂದಾಜು ಪಟ್ಟಿಯ ಮೇಲೆ ಮಂತ್ರಿಗಳು ಭಾಷಣ ಮಾಡುವಾಗ ತಮ್ಮ ಸರಕಾರದ ಬಗ್ಗೆ ತುಂಬಾ ಹೊಗಳಿಕೊಂಡಿದ್ದಾರೆ. ರಾಷ್ಟ್ರದ ರಕ್ಷಣಾ ನಿಧಿಗೆ ಇಷ್ಟು ಹಣ ಕೊಟ್ಟೆವು, ಇಷ್ಟು

(ಶ್ರೀ ಅಂಗಡಿ ಚನ್ನಬಸಪ್ಪ)

ಬಂಗಾರ ಕೊಟ್ಟೆವು ಎಂದು ಹೇಳಿದ್ದಾರೆ. ನನಗೊಂದು ಸುದ್ದಿ ಬಂದಿದೆ. ಬಿಜಾಪುರ ಜಿಲ್ಲೆಯಲ್ಲಿ ಇಂದಿರಾ ಗಾಂಧಿಯವರನ್ನೂ ಮಾನ್ಯ ಮುಖ್ಯ ಮಂತ್ರಿಯವರನ್ನೂ ತೂಕ ಮಾಡಿದ ಬಂಗಾರವನ್ನು ನಿಜವಾಗಿಯೂ ರೈತರೂ ಮತ್ತು ಜನರೂ ಕೊಡಲಿಲ್ಲ. ಆದರೆ ಅವರನ್ನು ಒತ್ತಾಯ ಮಾಡಿ ಬಂಗಾರ ಇಲ್ಲವೆಂದು ಹೇಳಿದವರಿಂದ ಹಣವನ್ನು ವಸೂಲು ಮಾಡಿ, ತೊಲಕ್ಕೆ 150 ರೂಪಾಯಿನಂತೆ ಹುಬ್ಬಳ್ಳಿ ಮತ್ತು ಗೋವಕ್ಕೆ ಹೋಗಿ ಕೊಂಡು ಚಿನ್ನವನ್ನು ತಂದಿದ್ದಾರೆ. ಅಲ್ಲದೆ ಪ್ರತಿ ಶಾಲೆಗೂ ಕಾರ್ಯಕರ್ತರು ಮತ್ತು ಸ್ವಾಗತ ಸಮಿತಿಯ ಸದಸ್ಯರೂ ಹೋಗಿ ನಿಮ್ಮ ಶಾಲೆಯಿಂದ ಐದು ತೊಲ ಕೊಡಿ ಹತ್ತು ತೊಲ ಕೊಡಿ ಎಂದು ಹೇಳಿದರು. ಶಾಲಾ ಉಪಾಧ್ಯಾಯರಲ್ಲಿ ಬಂಗಾರವಿಲ್ಲ ಎಂಬುದು ಎಲ್ಲರಿಗೂ ಗೊತ್ತಿದೆ ; ಅವರಿಂದ ಹಣವನ್ನು ವಸೂಲು ಮಾಡಿಕೊಂಡು ಬಂದು ಶಾಲೆಯವರು ಇಷ್ಟು ಕೊಟ್ಟರೆಂದು ಪತ್ರಿಕೆಗಳಲ್ಲಿ ಪ್ರಕಟಿಸಿದರು. ಇದನ್ನೇಕೆ ಹೇಳಿದೆನೆಂದರೆ, ಅವರ ತೂಕ ಚಿನ್ನವನ್ನು ಕೊಟ್ಟರು, ಆದರೆ ಅದು ಎಲ್ಲಿಂದ ಬಂತು ? ರಕ್ಷಣಾ ನಿಧಿಗೆ ಹಣವನ್ನು ಕೊಡಿಸುವಾಗ ಚಿನ್ನದ ಹತೋಟಿ ಆಜ್ಞೆಯನ್ನು ಉಲ್ಲಂಘನೆ ಮಾಡಿಯಾದರೂ ತೂಕ ಮಾಡಿ ಎಂದು ಎಲ್ಲಿಯೂ ಇಲ್ಲ. ನಿಜವಾಗಿ ಜನರು ಸಹಾಯ ಮಾಡಿದ್ದಾರೆಯೆ, ನಿಜವಾಗಿ ಎಷ್ಟು ಬಂಗಾರ ಬಂತು, ಎಷ್ಟು ಜನರು ಕೊಟ್ಟರು ಎನ್ನುವುದನ್ನು ಹೇಳುವುದಿಲ್ಲ. ದೊಡ್ಡ ದೊಡ್ಡ ಕಾರ್ಖಾನೆಯವರು, ಸಕ್ಕರೆ ಕಂಪೆನಿಯವರು ಇಂಥವರಿಂದ ತೆಗೆದುಕೊಂಡಿದ್ದಾರೆ ; ಲಕ್ಷಾಂತರ ರೂಪಾಯಿಗಳನ್ನು ನಿಜವಾಗಿಯೂ ಸಾಮಾನ್ಯ ಜನರು ಕೊಟ್ಟಿಲ್ಲ. ಎಷ್ಟು ಲಕ್ಷ ಜನರು ಕೊಟ್ಟರೆಂದು ಹೇಳಲಿ. ಯಾರಲ್ಲಿಯೋ ದಬ್ಬಾಳಿಕೆ ಮಾಡಿ ತಂದು ನಮ್ಮ ರಾಜ್ಯದಿಂದ ರಾಷ್ಟ್ರದ ರಕ್ಷಣಾ ನಿಧಿಗೆ ಇಷ್ಟು ಕೊಟ್ಟು ಸಹಾಯ ಮಾಡಿದ್ದೇವೆಂದು ಹೇಳುತ್ತಾರೆ.

ನಾವೆಲ್ಲರೂ ಸ್ವಾಗತಿಸುತ್ತೇವೆಂಬ ಭ್ರಮೆಯಿಂದ ಶ್ರೀಮಾನ್ ಜತ್ತಿಯವರು ವೃದ್ಧಾಪ್ಯ ವಿರಾಮ ವೇತನ ಎಂದು ಮಾಡಿದ್ದಾರೆ. ಆದರೆ ಇದಕ್ಕೆ ಅಯವ್ಯಯದ ಪಟ್ಟಿಯಲ್ಲಿ ಹಣವನ್ನೊದಗಿಸಿಲ್ಲ. 70 ವರ್ಷ ವಯಸ್ಸಾದ ಅನಾಥರು ಎಂದರೆ ಯಾರು ಡೆಸ್ಟಿಟ್ಯೂಟ್ಸ್ ಕಾನೂನನ್ನು ಜಾರಿಗೆ ತಂದಿದ್ದಾರೆಯೆ ಎನ್ನುವುದು ಗೊತ್ತಿಲ್ಲ. ಒಬ್ಬ ಮುದುಕ ಇದ್ದಾನೆ ಅವನ ಮಗ ಅವನಿಗೆ ರಕ್ಷಣೆ ಕೊಡುವುದಿಲ್ಲ, ಅಂಥ ಸಂದರ್ಭದಲ್ಲಿ ಅವನು ಮೇಂಟೆನೆನ್ಸ್‌ಗಾಗಿ ಕೋರ್ಟಿಗೆ ಹೋಗುವುದಕ್ಕಾಗುವುದಿಲ್ಲ ನಮ್ಮ ಹಿಂದೂ ಲಾ ಪ್ರಕಾರ. ಹೆಣ್ಣು ಮಕ್ಕಳಾದರೆ ಮಾತ್ರ ಹೋಗಬಹುದು. ಹೀಗಿದ್ದರೂ ಶಹಭಾಸ್‌ಗಿರಿ ಪಡೆಯಬೇಕೆಂದು ಹಣಕಾಸಿನ ಸಚಿವರು ಇಂತಹ ಎಂದು ವಿಷಯವನ್ನು ನಮ್ಮ ಮುಂದಿಟ್ಟಿದ್ದಾರೆ. ಇದು ನೋಡುವವರಿಗೆ ಇವರೇನೋ ಹೊಸದಾಗಿ ತಂದರೆಂದು ಕಾಣುತ್ತದೆ. ಬಡ್ಜೆಟ್ ಭಾಷಣವನ್ನು ನೋಡಿದಾಗ ಇವರನ್ನು ಅಭಿನಂದಿಸಬೇಕೆಂಬ ಅಭಿಪ್ರಾಯ ಬಂತು. ಇದರ ಬಗ್ಗೆ ಬಜೆಟ್ ಪ್ರೊವಿಜನ್ ಇಲ್ಲಾ ಎಂಬುದು ಓದಿ ನೋಡಿದ ಮೇಲೆ ಗೊತ್ತಾಯಿತು. ಡೆಸ್ಟಿಟೂಟ್ಸ್ ಆಗಿದ್ದವರು 70 ವರ್ಷಗಳ ನಂತರ ಬದುಕುವುದಕ್ಕೆ ಸಾಧ್ಯವಿಲ್ಲ ಎಂದು ನನಗೆ ಅನಿಸುತ್ತದೆ. ಚೆನ್ನಾಗಿ ಆರೋಗ್ಯ ಕಾಪಾಡಿಕೊಂಡು ಬಂದವರು, ಹೆಚ್ಚು ಕಷ್ಟ ಪಡದೇ ಇರತಕ್ಕಂಥವರು, ಆರ್ಥಿಕ ಸ್ಥಿತಿ ಉತ್ತಮ ಇರತಕ್ಕಂಥವರು ಮಾತ್ರ 70 ವರ್ಷಗಳ ನಂತರ ಸಹ ಬದುಕುತ್ತಾರೆ. ಕೂಲಿಕಾರರಾಗಲಿ ದುಡಿಯುವವರಾಗಲಿ ಹೆಚ್ಚು ಕಾಲ ಬದುಕುವುದಿಲ್ಲ. 70 ವರ್ಷದ ಲಿಮಿಟ್ ಇಟ್ಟಿರುವುದರಿಂದ ಯಾರಿಗೂ ಸಹಾಯವಾಗುವುದಿಲ್ಲ ಎಂದು ಸ್ಪಷ್ಟವಾಗಿ ತಿಳಿಸಲು ಬಯಸುತ್ತೇನೆ.

Sri B. D. JATTI.—The Madras Government have tried this system. They have fixed the age at 70. For the first time, it was difficult for them to get correct number. They did not know what amount they would spend. They provided 40 lakhs of rupees. Next year, when it was widely known when they got correct information, they are now spending about a crore of rupees.

Sri V. S. PATIL.—How are you going to define the word 'destitute' ?

Sri B. D. JATTI.—We have got sufficient information from Madras where they have already introduced this two years ago. We also invite the suggestion of the Hon'ble Members by way of improvement. Our intention is to help those who are destitute and those who are over 70 years. There is no concealing.

ಶ್ರೀ ಅಂಗಡಿ ಚನ್ನಬಸಪ್ಪ.— ಎರಡನೆಯದಾಗಿ 300 ರೂಪಾಯಿಗಿಂತ ಕಡಿಮೆ ಸಂಬಳ ಬರ ತಕ್ಕಂಥ ಸರಕಾರಿ ನೌಕರರಿಗೆ 5 ರೂಪಾಯಿ ತುಟ್ಟಿ ಭತ್ಯ ಕೊಡಬೇಕೆಂದು ಮಾನ್ಯ ಅರ್ಥಸಚಿವರು ಸೂಚನೆ ಮಾಡಿದ್ದಾರೆ. ಹಿಂದಕ್ಕೊಮ್ಮೆ ನೂರು ರೂಪಾಯಿವರಗೆ ಸಂಬಳ ಪಡೆಯುತಕ್ಕವರಿಗೆ ಐದು ರೂಪಾಯಿ ಕೊಡಬೇಕೆಂದು ಆಜ್ಞೆಯಾಗಿತ್ತು. ನಮ್ಮ ಬಳ್ಳಾರಿ ಜಿಲ್ಲೆಯಲ್ಲಿ ನನಗೆ ಗೊತ್ತಿರುವ ಹಾಗೆ ತಾಲ್ಲೂಕು ಬೋರ್ಡು ನೌಕರರಿಗೆ 1957 ರ ಪೇ ಸ್ಕೇಲ್ಸ್ ಆಗಲಿ 1961ರ ರಿವಿಜನ್ ಆಗಲಿ ಕೊಟ್ಟಿಲ್ಲ. 1963 ರಲ್ಲಿ ಅನ್ವಯಿಸಿದ ಪೇ ಸ್ಕೇಲ್ಸ್ ಅಥವಾ ಐದು ರೂಪಾಯಿ ಹೆಚ್ಚುವರಿ ಕೊಟ್ಟಿಲ್ಲ. ಈ ಹಣ ಸ್ಯಾಂಕ್ಷನ್ ಆಗದೆ ಸರಿಯಾಗಿ ಜಾರಿಗೆ ಬರುವುದಿಲ್ಲ. ಇದನ್ನು ಜಾರಿಗೆ ಯಾವಾಗ ಕೊಡು ವುದು ?

ಶ್ರೀ ಬಿ. ಡಿ. ಜತ್ತಿ.—ನಾನು ಬಳ್ಳಾರಿಗೆ ಹೋದಾಗ್ಗೆ ಈ ಬಗ್ಗೆ ಸ್ವತಃ ನಾನು ಚೌಕಾಶಿ ಮಾಡಿದ್ದೇನೆ. ಕಂಪ್ಲೀಟ್ ಇನ್‌ಫರ್‌ಮೇಷನ್ ಕಳಿಸಿರಿ. ಎಲ್ಲ ಹಣ ಮಂಜೂರು ಮಾಡುತ್ತೇವೆ. If he sends detailed information I will assure the Hon'ble Member, before he leaves for his place after this Session, I will sanction all the money.

ಶ್ರೀ ಅಂಗಡಿ ಚನ್ನಬಸಪ್ಪ.—ಸ್ವಾಮಿ, ಹಣಕಾಸಿನ ಮಂತ್ರಿಗಳು ತಮ್ಮ ಭಾಷಣದಲ್ಲಿ ಕೋ ಆಪರೇಟಿವ್ ಫಾರ್ಮಿಂಗ್ ಸೊಸೈಟಿ ಮತ್ತು ಸ್ಟೋರ್ಸ್ ಬಗ್ಗೆ ಉಲ್ಲೇಖ ಮಾಡಿದ್ದಾರೆ. ಸ್ಟೋರ್ಸ್ ಚೆನ್ನಾಗಿ ಕೆಲಸ ಮಾಡುತ್ತಾ ಇದೆಯೇ ಎಂಬುದು ಗೊತ್ತಿಲ್ಲ. ಫಾರ್ಮಿಂಗ್ ಸೊಸೈಟಿಮಾತ್ರ ಚೆನ್ನಾಗಿ ಕೆಲಸ ಮಾಡುತ್ತಿಲ್ಲ. ಒಬ್ಬ ಮನುಷ್ಯ ತನ್ನ ಹೆಂಡತಿ ಮಗ ಮಗಳು ಅಳಿಯ ಸೊಸೆ ಹೀಗೆ ಎಲ್ಲರೂ ಹೆಸರುಗಳನ್ನು ಸೇರಿಸಿ ಹತ್ತು ಜನ ಮೆಂಬರ್ಸ್ ಮಾಡಿ ಒಂದು ಸೊಸೈಟಿ ಪ್ರಾರಂಭಿಸಿ ಸರಕಾರದಿಂದ ದೊರೆಯುವ ಸಾಲ ಪಡೆಯುತ್ತಿರುವುದು ನಮ್ಮೆಲ್ಲರಿಗೂ ಗೊತ್ತಿದೆ. ರಾಯಚೂರು ಜಿಲ್ಲೆಯಲ್ಲಿ ಒಂದು ಸೊಸೈಟಿ ಇದೆ. ಅಗ್ರಿಕಲ್ಚರಲ್ ಡಿಪಾರ್ಟಮೆಂಟಿನ ಡೆಪ್ಯೂಟಿ ಡೈರೆಕ್ಟರರ ಮಿಸೆಸ್ ಅವರು ಛೇರಮನ್‌ರಾಗಿ ನಡೆಸುತ್ತಿದ್ದಾರೆ. ಇಂಥ ಅನೇಕ ಸೊಸೈಟಿ ಇವೆ. ಈ ಯೋಜನೆಯಲ್ಲಿ ನಿಮಗೂ ವಿಶ್ವಾಸ ಇದ್ದ ಹಾಗೆ ಕಾಣುವುದಿಲ್ಲ. ಪ್ಲಾನಿಂಗ್ ಕಮಿಷನ್ ಅವರು ಹೇಳಿದ್ದಾರೆ ; ದಿಲ್ಲಿ ಸರಕಾರ ಆದೇಶ ಕೊಟ್ಟಿದೆ ಎಂದೂ ಅವರ ಮಾತು ಮೀರುವುದಕ್ಕೆ ಆಗುವುದಿಲ್ಲ ಎಂದು ಇವುಗಳಿಗೆ ಸಾಲ ಕೊಟ್ಟು ಹಣ ಒದಗಿಸುತ್ತಿದ್ದೀರಿ. ಬಜೆಟ್ಟಿನಲ್ಲಿ ಒದಗಿಸಿದ ಹಣ ಖರ್ಚು ಮಾಡಿದ್ದಾರೆ ಆದರೆ ಉಪ ಯೋಗ ಮಾಡಿಲ್ಲ.

Sri B. D. JATTI.—I have mentioned this in my speech. From this year onwards, we have made it a point to conduct performance audit by the Finance Department. Then you will know whether the money that has been spent, has been spent for the purpose for which it was meant. In the past what has happened is true. I admit it. From now onwards, we want to have a performance audit every year. Then you will know how much money has been spent and whether it is spent for the proper purpose.

ಶ್ರೀ ಎಸ್. ಗೋಪಾಲ ಗೌಡ.—ಇದನ್ನು ಎಲ್ಲ ಇಲಾಖೆಗಳಿಗೂ ಅನ್ವಯಿಸುತ್ತೀರಾ ? ಅಥವಾ ಇದೊಂದೇ ಇಲಾಖೆಗೆ ಎಂದು ಮಾತ್ರ ಮಾಡಿದ್ದೀರಾ ?

ಶ್ರೀ ಬಿ. ಡಿ. ಜತ್ತಿ.—ಎಲ್ಲಾ ಡಿಪಾರ್ಟಮೆಂಟ್‌ಗಳಿಗೂ ಇದನ್ನು ಅನ್ವಯಿಸುತ್ತೇವೆ. ತಪ್ಪು ಯಾರೇ ಮಾಡಿದರೂ ಸರಿಯಾದ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಅಂಗಡಿ ಚನ್ನಬಸಪ್ಪ.— ನಾನು ಈ ಮೊದಲು ಅನೇಕ ಸಲ ಹೇಳಿದ್ದೇನೆ. ನಮ್ಮ ರಾಜ್ಯ ದಲ್ಲಿ ಹಳ್ಳಿಗಾಡಿನಲ್ಲಿರುವ ಜನರಿಗೆ ಸಾಲ ಎಷ್ಟಿದೆ ತಿಳಿದುಕೊಳ್ಳಬೇಕು. ಡೆಟ್ ಬಿಲ್ ಪಾಸ್ ಮಾಡ ಬೇಕು. 10-20 ವರ್ಷದ ಬಾಕಿ ವಸೂಲ್ಮಾಡಬಾರದು. ಡೆವಲಪ್‌ಮೆಂಟ್ ಕೆಲಸಗಳಿಗಾಗಿ ಕೋಟಿ ಗಟ್ಟಲೆ ಹಣ ಖರ್ಚು ಮಾಡುತ್ತಿದ್ದೀರಿ. ಸೊಸೈಟಿಗಳನ್ನು ಪ್ರಾರಂಭ ಮಾಡುವುದರಲ್ಲಿ ಮೂರು ಕೆಲಸ ಗಳು ಇವೆ. ಸಾಲ ತೆಗೆದುಕೊಳ್ಳುವುದು, ಹಣ ಉಪಯೋಗಮಾಡುವುದು, ಲಾಭ ಪಡೆಯುವುದು ಮತ್ತು ಹಣ ವಾಪಸ್ ಕೊಡುವುದು. ಸಹಕಾರ ಸಂಘಗಳು ಮೊದಲನೇ ಕೆಲಸ ಅಂದರೆ ಹಣ ತೆಗೆದು ಕೊಳ್ಳುತ್ತಾರೆ. ಆದರೆ ಅದನ್ನು ಉಪಯೋಗ ಮಾಡುವುದಿಲ್ಲ, ಹಾಗೂ ವಾಪಸ್ ಸಹ ಕೊಡುವುದಿಲ್ಲ. ಸಾಮಾನ್ಯವಾಗಿ ಮೂರರಲ್ಲಿ ಒಂದು ಭಾಗ ಇದೇ ರೀತಿ ಸಹಕಾರ ಸಂಘಗಳು ನಡೆಯುತ್ತಿವೆ.

ಕೊನೆಯದಾಗಿ ತುಂಗಭದ್ರ ಡ್ಯಾಮು ಕೆಳಗೆ ಕೆಲವು ವರ್ಷಗಳಿಂದ ಎಷ್ಟು ಉತ್ಪತ್ತಿಯಾಗು ತ್ತಿದೆ ಎಂಬ ಬಗ್ಗೆ ಸೂಕ್ಷ್ಮವಾಗಿ ಸೂಚಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ. ತಾವು ತುಂಗಭದ್ರ

(ಶ್ರೀ ಅಂಗಡಿ ಚನ್ನಬಸಪ್ಪ)

ಲೇಕ್ ಹತ್ತಿರ ಬಂದು ನೋಡಿ; ಭೂಮಿ ಬೇಕಾದಷ್ಟಿದೆ. ನೀರು ಬೇಕಾದಷ್ಟಿದೆ. ಅದರೆ ಜಮೀನು ಮಾಡುವವರೇ ಇಲ್ಲ. ಸಾಲಗಳು ಮಾಡಿದರು, ಸರಕಾರ ಮತ್ತು ಸೊಸೈಟಿಗಳ ಮುಖಾಂತರ. ರೈತರು ಒಂದು ಎಕರೆ ಭೂಮಿ ಮಾಡಬೇಕಾದರೆ ಕನಿಷ್ಠ 500 ರೂಪಾಯಿ ಬೇಕು. ಒಬ್ಬ ರೈತನಿಗೆ 10 ಎಕರೆ ಇದ್ದರೆ 50 ನೂರು ಕೊಡಬೇಕಾಗುತ್ತೆ. 10 ಎಕರೆಗೆ 10 ನೂರು ಕೊಟ್ಟರೆ, ಸಾಲ ಕೊಟ್ಟದ್ದು ದುರುಪಯೋಗವಾಗಿಬಿಡುತ್ತದೆ. ಇಂಥ ಪ್ರಸಂಗವಾಗದಿರಲು, ಸರಕಾರ ಮನಸ್ಸು ಮಾಡಿ, ಸರಕಾರದ ಕಡೆಯಿಂದಲೇ ತರಿಭೂಮಿ ಮಾಡಿಸಿಕೊಡಿ; ಬಾಂಡ್ ಬರೆಸಿಕೊಂಡು ಮಾಡಿ.

Sri B. D. JATTI.—The field channels were not constructed by the farmers themselves either due to ignorance or because they could not get the money to prepare the channels. Considering their difficulty, Government sanctioned Rs. 3½ crores for preparting field channels and carrying waters to the fields. That is what we have done. Beyond that, we cannot do anything.

ಶ್ರೀ ಡಿ. ದೇವರಾಜ ಅರಸ್.—ಫೀಲ್ಡ್ ಚಾನಲ್ ಸರಕಾರ ಏರ್ಪಾಡು ಮಾಡುತ್ತದೆ. ಇನ್ನೂ ಸ್ವಲ್ಪ ಸಾಲ ಹೆಚ್ಚಾಗಿ ಬೇಕಾದರೂ ಕೊಡಿಸಬಹುದು. ಜಮೀನುದಾರರು ಜಮೀನು ಮಟ್ಟ ಮಾಡಿ ಕೊಳ್ಳುವುದಕ್ಕೆ ಮುಂದೆ ಬರದೆ ಹೋದರೆ ಸರಕಾರ ಅದನ್ನು ಮಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಅಂಗಡಿ ಚನ್ನಬಸಪ್ಪ.—ತಾವು ಏನು ಬಜೆಟ್ ಪ್ರಪೋಸಲ್ಸ್ ಮಾಮೂಲಾಗಿ ಇಟ್ಟಿದ್ದೀರಿ, ಅದು ಮಾಮೂಲ್ ಪಾಸಾಗುತ್ತದೆ. ತಮ್ಮಲ್ಲಿ ಒಂದು ವಿನಂತಿ ಮಾಡಿಕೊಳ್ಳುವುದೇನೆಂದರೆ, ಹಣ ಖರ್ಚುಮಾಡಿದ್ದನ್ನು, ಇನ್ನು ಮುಂದೆ ಸದ್ವಿನಿಯೋಗಮಾಡಿ. ತಮಗೆ ಒಂದು ವಾಕ್ಯವನ್ನು ಇಲ್ಲಿ ಉದಹರಿಸಿ ಹೇಳಿ ಭಾಷಣ ಮುಗಿಸುತ್ತೇನೆ. ಯಾವ ಸರಕಾರದಲ್ಲಿ Freedom from want, freedom from fear ಇರುತ್ತದೋ, ಅದು ಒಳ್ಳೆಯ ಸರಕಾರ. ಆ ರೀತಿ ನೀವು ಒಳ್ಳೆಯವರಾಗಿರಿ.

† **Sri GANJI VEERAPPA** (Harihar).—Mr. Speaker, Sir, I am one with some of those friends who have spoken here, congratulating the Finance Minister on having presented a tax free surplus budget and some of the welcome features are, old age pension is given, increase of dearness allowance is given to low paid Government servants and some of these measures go to alleviate the conditions of the poor, and much more so, not levying any extra tax is really a matter for which Government is to be congratulated. I have been listening in this House to some of the speeches made by my friends on the other side, especialy from *the MES*. They are all very good friends......

Sri B. P. KADAM.—Nobody on this side has spoken on the Budget so far.

Sri GANJI VEERAPPA.— On whatever matter you have been speaking, the one thing that is prominent in your speeches is that they want to go to Maharashtra. Not that I am coming in the way of their going ; but when Mr. Jatti said 'Please go', they mistook him.

Sri V. S. PATIL.—On a point of order. When my friend is speaking on the budget, is it within his power to the speeches made on other subjects by other members and to while away the time or to create unnecessary heat on the floor of the House ? According to me, it is quite irrelevant and he ought not to refer to what has been said on other subjects by other members. I should like to have a ruling from the chair.

Sri GANJI VEERAPPA.—I am not here to create any controversy or to displease any of the members. What I was trying to impress upon their minds is only this. The Government of Mysore is not discriminating against any part of the State. Let them not feel that any part of the State, more so, the parts that they represent have been neglected. When I see the budget, I find that many of their areas also are properly provided for so as to give them satisfaction. I would like to tell them that the generosity of the Government of Mysore cannot in any way be questioned because we do not find the same attitude elsewhere. Not that I am criticising the neighbouring State. The burning question before us to which I must make reference is the Goa question. I submit, without offending the feelings of my friends on the other side that Goa historically, culturally......

Sri V. S. PATIL.—My friend is referring to Goa. We will take another opportunity to discuss the point here. Is it relevant to the discussion now?

Sri B. D. JATTI.—It would not be relevant to talk about Goa. It is better to drop it. We agree.

Sri GANJI VEERAPPA.—Then I need not dilate on this point. I was coming to some of the bright sides of the budget. In fact, with regard to the provision in the budget for education, the Finance Minister has not made it very clear with regard to the opening of Bangalore University, it is not very clear from his speech whether Government have taken a decision. Anyway, reference has been made in the budget about the starting of Bangalore University. Unless adequate grants are forthcoming from the University Grants Commission......

Sri B. D. JATTI.—I explained at that time. If we are to get assistance from the Government of India and the University Grants Commission for recurring and non-recurring expenditure as promised, we will make a beginning. Otherwise, it is not possible.

Sri GANJI VEERAPPA.—I may bring to the notice of the Honourable Minister that in the case of all new Universities started for certain coureses—post graduate courses and research for which only the Bangalore University is intended, 75 or 80 per cent grant is coming from the U.G.C.

Sri B. D. JATTI.—He is one of the members who had gone there. Whatever promise he got from certain persons orally, if we receive in writing under the signature of those persons, I am prepared to commit myself. Mere talk cannot produce money.

Sri GANJI VEERAPPA.—In fact, they are prepared to give; in fact, they have been doing so in the case of other Universities. 80 or 86 per cent grant will be coming forth. So I wish the Government take a decision.

4-30 P. M.

Sri B. D. JATTI.—I wish to make it clear once again, that when we are speaking about the budget and moneys, we must be definite in our

(SRI B. D. JATTI)

mind. Merely assuming that we would get 50 per cent or 75 per cent would not help and I cannot myself and the House on such a basis.

Sri GANJI VEERAPPA.—I am happy that the Government has atleast agreed with the recommendation of the Committee that there is need for a Bangalore University for the development of science and research.

With regard to education, there are many matters which concern policies of an all-India character but so far as Mysore is concerned, we should fall in line with some of the decisions taken at the Inter-University Vice-Chancellors Conference. I wish the Education Minister was here now. The Government is contemplating to open the XI standard in high schools and the University has in a way agreed to have two-year pre-University course, which is akin to the two-year Intermediate course which were having before. This would mean that before a student obtains his degree, he would be putting 2 years for the PUC, plus 3 years for the degree, that is 5 years in all. This added to the 10 years at the school, would mean 15 years in all before a student becomes a graduate. In regard to this matter, I wish the Government made itself definite as to whether the XI standard that we are opening in the high schools should come within the purview of the University in matters concerning examinations, curriculum and the like or it should be a matter purely for the Department of Education. I may say that if the I standard is to be equivalent to the present PUC, then in matters of standard, it is better that this is left to the University. Below XI standard, the Director of Public Instruction may have purview. That would help maintenance of standards.

We have been noticing that a number of technical colleges have been started in the State in the private sector. An anamolous position has thus been created. Government have stated that they are not a party to their establishment. The University says that they have O.Kayed it because they found the standards obtaining in these colleges satisfactory. Whatever it might be, opening of technical institutions are matters of policy and colleges for which provision is not made in the plans should not be allowed. The colleges are now functioning, the University has recognised them and the question is whatever Government would give them recognition.

Sri B. D. JATTI.—The University is the proper authority to give affiliation. Once they affiliate, Government should give them recognition. But we are never committed to spending any moneys over them because they are not included in the plan. Unless the Planning Commission or the Government of India asks us to provide funds for such institutions, we are not in a position to pay them anything.

Sri GANJI VEERAPPA.—Somehow, Mysore has been a State from which a good number of engineers have been exported to the neighbouring States. We are really proud that our boys are doing wonderful services in places like Kashmir and Assam.

In regard to the polytechnics, a situation has arisen wherein a number of civil diploma holders are unemployed. In the last 2 or 3 years, thousands of them are without jobs. I suggested that some way be devised whereby they would be absorbed in the Public Works Department because we are undertaking many new projects. Government may also think whether it would not be wise to discontinue civil diploma courses in polytechnics for sometime to come. The electrical and mechanical courses might continue because there is employment potention for diploma holders.

In regard to technical education, there should be better co-ordination between the type of education given in the schools and colleges and the job requirements in industries. Many of the industrial concerns have complained that our boys are not fit for jobs in the industries and that they would prefer men with experience. With regard to student who passed B.Sc (Textiles), none of the industries would take them in because they want people who have worked in textile industries. Therefore there ought to be some co-ordination between the colleges and the industries so that the boys would be trained in a manner as would fit them in into the jobs.

It is not enough that we expand education quantitatively. Quality should also improve. Our examination system should change. Standards are not upto the mark in our schools and colleges. This is a very serious matter both at the State and the national level. I am glad that the new Education Minister at the Centre, Mr. Chagla, is introducing some radical changes and I hope they would be reflected in the States also.

Sir, now that there is emphasis on savings in all directions, I wish the Finance Minister had spelt out the proposals he has in mind for effecting economics in the expenditure of Government. I would only refer to the N. E. S. as an example. All of us know that the expenditure can be cut short here. We would effect savings to the tune of 2 crores. The staff in the NES are not doing their work. I do not think any of us can say that they are doing good work to the extent of the expenditure on them. I would not go to the extent of suggesting the scrapping of NES. It is a good scheme but whether it is properly worked out is a matter which has to be seriously examined. One officer in a taluk may function both as Tahsildar and Block Development Officer. The BDOs. do all the work and the Tahsildars have no work excepting collect taxes. As a measure of economy, one tahsildar may look after both the work. Some of these suggestions of economy might usefully be looked into by Government.

I find that even after the passing of the Civil Courts Act, the district courts have not been constituted. The Government have powers to constitute such courts in consultation with the High Court. There is no district court in Chitaldrug but I find no provision in the budget for the opening of such courts. The very object of the Act was to establish new courts where there was need. In the interest of the litigant public and to enable the people to get justice cheaply and conveniently, it is necessary that Government constitutes these courts expeditiously.

(SRI GANJI VEERAPPA)

We have been urging for the appointment of Assistant Public Prosectors as is in vogue in the Bombay area. We find that most of the police officers, Inspectors and Sub-Inspectors, who are in-charge of investigation and prosecution of cases, have had no training. I suggest that for prosecution work, lawyers who have experience in Criminal work, should be given an opportunity to work as Assistant Public Prosecutors instead of police officers. That will solve two problems: it would encourage young lawyers to get themselves trained in criminal work and it would also provide for the efficient prosecution of cases. What prevails in Bombay could usefully be adopted in other areas also.

The police S.Is. and Inspectors should be given special training in investigation of cases. In henious offences, if the police officers do not know the elementary principles of investigation, justice would suffer.

In regard to the provision of houses for Scheduled Castes, I suggest that instead of giving them loans, the previous practice of giving them grants for construction of houses would be better. I find wherever I go that most of these poor people have not availed of the loan because it would be difficult for them to re-pay. Therefore Government may revert to the old system. The Finance Minister has said that he has approached the Insurance Corporation to advance a crore of rupees. Government may themselves may keep them in reserve and advance loans but this cumbersome process of becoming members of societies is difficult and many of them do not become members nor draw loans.

Sri G. DUGGAPPA.—They have become members in many taluks but in spite they do not get the loans because there is no allotment by Government.

Sri GANGI VEERAPPA.—I am not against granting of loans. Whoever wants, let them take advantage of the loans. But if some people do not want loans, let them be given grants also. If we want to serve the cause of the Scheduled Castes, we should see that the middlemen do not come in the way and eat up the loans.

I want the Government to improve the standard of life in the State. More and more industries must come up. The State Government must impress upon the Centre the need to start more industries. The private sector in the State should also encourage to establish more industries. But where they cannot come in, Government should step in. The national income of the people should go up. All efforts to increase agricultural production and improve industrial potentialities should be made. There should be greater employment and better living. I hope in the times to come the condition of our people would improve.

ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸೀಪುರ).—ಅಧ್ಯಕ್ಷಣಿಯವರೆ, ನಮ್ಮ ಮುಂದೆ ಇಟ್ಟಿರುವ 1964—65 ನೆಯ ಸಾಲಿನ ಅಂದಾಜುಪಟ್ಟಿಯ ಬಗ್ಗೆ ಒಂದೆರಡು ಮಾತುಗಳನ್ನಾಡಬಯಸುತ್ತೇನೆ. ಮಾನ್ಯ ಅರ್ಥಿಕ ಮಂತ್ರಿಗಳು ಬಹಳ ಚಾಣಕ್ಯರು, ಸರ್ಪ್ಲಸ್ ಬಡ್ಜೆಟ್ಟನ್ನು ಸಭೆಯ ಮುಂದಿಟ್ಟಿದ್ದಾರೆ. ವಯಸ್ಸಾದವರಿಗೆ ಹಾಗೂ ನಾನ್-ಗೆಜೆಟೆಡ್ ನೌಕರರಲ್ಲಿ 300 ರೂಪಾಯಿ

ಗಳವರೆಗೆ ಸಂಬಳ ಪಡೆಯುವವರಿಗೆ ಕೆಲವು ಸೌಲಭ್ಯಗಳನ್ನು ಒದಗಿಸಿರುವುದಾಗಿಯೂ ಹೇಳಿದ್ದಾರೆ ಆದರೆ ಅದಕ್ಕೆ ಬಜೆಟ್ಟಿನಲ್ಲಿ ಹಣ ಒದಗಿಸಿಲ್ಲ, ಅದಕ್ಕೆ ಸಂಪನ್ಮೂಲಗಳನ್ನು ಕಂಡುಹಿಡಿಯಬೇಕಾಗಿದೆ. ಎಂದು ಹೇಳಿದ್ದಾರೆ. ಇದರಿಂದ ಅದಕ್ಕೆ ಪ್ರಾವಿಷನ್ ಮಾಡಿದರೆ ಖೋತಾ ಬಜೆಟ್ಟಾಗುತ್ತದೆ, ಸರ್ಪ್ಲಸ್ ಬಜೆಟ್ ಎಂದು ಜನರಿಗೆ ತೋರಿಸಲು ಜಾಣತನ ಮಾಡಿದ್ದಾರೆ ಎಂದು ಅರ್ಥವಾಗುತ್ತದೆ. ಈ ಸಂದರ್ಭದಲ್ಲಿ ನಾನು ಮಾನ್ಯ ಆರ್ಥಿಕ ಸಚಿವರ ಭಾಷಣದ ಒಂದು ಅಂಶದ ಕಡೆಗೆ ಗಮನ ಸೆಳೆಯಲು ಇಚ್ಛೆಪಡುತ್ತೇನೆ. ಭುವನೇಶ್ವರದ ಅಧಿವೇಶನದಲ್ಲಿ ಸೋಷಿಯಲಿಸಂ ಕಾರ್ಯಗತ ಮಾಡುವುದಾಗಿ ಏನು ಸ್ಲೋಗನ್ ಇತ್ತು ಅದಕ್ಕೆ ವ್ಯತಿರಿಕ್ತವಾಗಿದೆ ಈ ಆಯವ್ಯಯ ಪಟ್ಟಿ. ಇಲ್ಲೇ ಒಂದು ಕಡೆ ಹೇಳುತ್ತಾರೆ, ಪ್ಲಾಂಟರುಗಳಿಗಾಗಿ ಒಂದು ತರಹದ ಸೂಪರು-ಟ್ಯಾಕ್ಸು ಹಾಕುವುದಕ್ಕೆ ಅವರಿಂದ ಬಂದಿರತಕ್ಕ ರೆಪ್ರಸೆಂಟೇಷನ್ನುಗಳನ್ನು ಪರಿಶೀಲನೆ ಮಾಡಿ ತರಲು ಅದಕ್ಕಾಗಿ ಸೂಕ್ತವಾದ ತಿದ್ದುಪಡಿ ತರುತ್ತೇವೆಂದು ಹೇಳಿದ್ದಾರೆ. ಡೆಮಾಕ್ರಟಿಕ್ ಸೋಷಿಯಲಿಸಂನ್ನು ತರುತ್ತೇವೆ ಮತ್ತು ಇದನ್ನು ಕಾರ್ಯಗತ ಮಾಡಲು ಏನೇನು ಮಾಡಬೇಕೆನ್ನುವುದಕ್ಕೆ ಇದರಲ್ಲಿ ಕೆಲವು ಅಂಕಿಅಂಶಗಳನ್ನು ಕೊಟ್ಟಿದ್ದಾರೆ. ಈಗ ತಾನೇ ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಹೇಳಿದ ಹಾಗೆ ಬ್ಲಾಕು ಮನಿ ಎಲ್ಲಿದೆ ಮತ್ತು ಯಾವ ವಿಧವಾದ ದುರ್ವ್ಯವಹಾರಗಳಿಂದ ದುಡ್ಡು ಸಂಪಾದನೆ ಮಾಡುತ್ತಿದ್ದಾರೆನ್ನುವುದನ್ನು ಹೇಳಿದರು. ಬಡವರು ಹೆಚ್ಚಿನ ಸಂಖ್ಯೆಯಲ್ಲಿ ಬಡವರಾಗುತ್ತಿದ್ದಾರೆ. ಸೇವೆಯ ಹೆಸರಿನಲ್ಲಿ ಇನ್ನು ಕೆಲವರು ದುರ್ವ್ಯವಹಾರಗಳಿಂದ ದೇಶದಲ್ಲಿರುವ ಸಂಪತ್ತನ್ನು ಅನ್ಯಾಯ, ಅನೀತಿಯುತವಾದ ಮಾರ್ಗಗಳಿಂದ ಸಂಪಾದನೆ ಮಾಡುತ್ತಿದ್ದಾರೆ. ಇಂತಹ ದುರ್ಮಾರ್ಗಗಳನ್ನು ತಪ್ಪಿಸುವುದಕ್ಕೆ ಏನಾದರೂ ಯೋಜನೆಗಳು ಈ ಬಜೆಟ್ಟಿನಲ್ಲಿಲ್ಲ ಮತ್ತು ಸರ್ಕಾರದಲ್ಲಿಯೂ ಇಲ್ಲ ಎನ್ನುವುದು ಕಂಡು ಬರುತ್ತದೆ. ಇಂತಹ ಮಾರ್ಗಗಳು ಯಾವುದೂ ಇರಲಿಲ್ಲವೇ ಎಂದು ಈ ಸಂದರ್ಭದಲ್ಲಿ ಮಾನ್ಯ ಆರ್ಥಿಕ ಸಚಿವರನ್ನು ಕೇಳಲು ಇಚ್ಛಿಸುತ್ತೇನೆ.

ಸಹಕಾರ ಸಂಘಗಳ ಸ್ಟೋರ್ಸುಗಳ ಬಗ್ಗೆ ಸರಕಾರ ಏನೇನು ವ್ಯವಸ್ಥೆ ಮಾಡಿದ್ದಾರೆನ್ನುವುದನ್ನು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಆದರೆ ರಾಜ್ಯಪಾಲರು ಮುಂದೆ ನಮ್ಮ ದೇಶಕ್ಕೆ ಅನುಕೂಲವಾಗುವಂತಹ ಯೋಜನೆಗಳನ್ನೇನಾದರೂ ಮಾಡಿದ್ದಾರೆಯೇ ಇಲ್ಲವೇ ಎನ್ನುವುದನ್ನು ಹೇಳಿದ್ದಾರೆಯೇ ಎನ್ನುವುದಕ್ಕೆ ನಿಮ್ಮ ಎದೆ ಮುಟ್ಟಿ ನೋಡಿಕೊಂಡು ನೀವೇ ಹೇಳಬೇಕಾಗುತ್ತದೆ. ಮಾನ್ಯ ಸದಸ್ಯರಾದ ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಭಾಷಣಮಾಡುವಾಗ ಕಳೆದ 16 ವರ್ಷಗಳಿಂದಲೂ ಕಾಂಗ್ರೆಸ್ ಸರ್ಕಾರ ಬಹಳ ಒಳ್ಳೆಯ ಕೆಲಸಗಳನ್ನು ಸಾಧಿಸಿದೆ. ಅದಕ್ಕಾಗಿ ನೀವು ನಿಮ್ಮ ಬೆನ್ನನ್ನು ಚಪ್ಪರಿಸಿಕೊಳ್ಳುತ್ತಿದ್ದೀರಿ. ನಮ್ಮ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಜತ್ತಿಯವರು ಭಾಷಣ ಮಾಡುವಾಗ ಒಂದು ಮಾತನ್ನು ಗಮನಕ್ಕೆ ತಂದರು. ಸಾಧಾರಣವಾಗಿ ಪ್ರತಿಯೊಬ್ಬ ಮೆಂಬರೂ ಕೂಡ ಇಂತಹ ಹಳ್ಳಿಗಳಲ್ಲಿ ರೋಡು ಆಗಿಲ್ಲ ಮತ್ತು ಇದಕ್ಕಾಗಿ ಕೊಟ್ಟಿರುವ ಹಣ ಖರ್ಚಾಗಿಲ್ಲ ಎಂದು ಹೇಳಿದರೆ ಅದಕ್ಕೆ ಸಾಮಾನ್ಯವಾಗಿ ಯಾವ ರೀತಿಯಾಗಿ ಉತ್ತರ ಕೊಡುತ್ತಾರೆ ಎನ್ನುವುದಕ್ಕೆ ಹಾಗೂ ಯಾವ ರೀತಿಯಾದ ಅಂಕಿ ಅಂಶಗಳನ್ನು ಕೊಡದೇ ಸರ್ಕಾರ ಉತ್ತರವನ್ನು ಕೊಡುವುದನ್ನು ನೋಡಿದರೆ ಅದೇ ಅರ್ಥವಾಗುತ್ತದೆ ಎಂದು ಇಲ್ಲಿ ನಾನು ಹೇಳಲು ಬಯಸುತ್ತೇನೆ.

ನ್ಯಾಷನಲ್ ಆದಾಯವು 1956–57 ರಲ್ಲಿ ರೂ. 488.17 ಕೋಟಿ ಇದ್ದುದ್ದು 1960–61 ನೇ ಸಾಲಿನಲ್ಲಿ ರೂ. 670.00 ಕೋಟಿಯಷ್ಟು ಏರಿದೆ ಎಂದು ಅವರ ಭಾಷಣದಲ್ಲಿರುವುದು ನಮಗೆ ಗೊತ್ತಾಗುತ್ತಿದೆ. ಆದರೆ ಇಂತಹ ಅಂಕಿ ಅಂಶಗಳನ್ನು ಕೊಟ್ಟವರು ಯಾರು ಎನ್ನುವುದನ್ನು ನಾನು ಪ್ರಶ್ನೆ ಮಾಡಬೇಕಾಗಿದೆ. ಅಂಕಿ ಅಂಶಗಳನ್ನು ಕೊಡತಕ್ಕದ್ದೇನೋ ಸುಲಭ. ಆದರೆ ಇಲ್ಲಿ ಕೊಟ್ಟಿರುವ ಅಂಕಿ ಅಂಶಗಳನ್ನು ಯಾವ ಆಧಾರದ ಮೇಲೆ ಕೊಟ್ಟಿದ್ದಾರೆ. ಎಂದು ನಾನು ಇಲ್ಲಿ ಕೇಳಬೇಕಾಗಿದೆ. ಮಾನ್ಯ ಮಂತ್ರಿಗಳು ಉತ್ತರ ಕೊಡುವ ಕಾಲಕ್ಕೆ ಈ ಅಂಕಿ ಅಂಶಗಳನ್ನು ಸರಿಯಾಗಿ ಕೊಟ್ಟಿದ್ದಾರೆಯೇ ಇಲ್ಲವೇ ಎನ್ನುವುದನ್ನು ತಿಳಿಸಬೇಕೆಂದು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಅಗ್ರಿಕಲ್ಚರ್ ಪ್ರೊಡಕ್ಷನ್ನು ವಿಷಯದ ಬಗ್ಗೆ ಅನೇಕ ವಿಷಯಗಳನ್ನು ಈಗಾಗಲೇ ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಈ ಇಲಾಖೆಯ ಬಗ್ಗೆ ಹೇಳುವುದಾದರೆ ಬಹುಶಃ ನಿಮಗೂ ಗೊತ್ತಿದೆ ಈ ಇಲಾಖೆ ಹೇಗೆ ಕೆಲಸ ಮಾಡುತ್ತಿದೆ ಎನ್ನುವುದು. ಈ ದೇಶದಲ್ಲಿ ಸುಮಾರು ಶೇಕಡಾ 80 ರಿಂದ 85 ರಷ್ಟು ಜನ ವ್ಯವಸಾಯದಿಂದಲೇ ಜೀವನ ಮಾಡುತ್ತಿದ್ದಾರೆ. ಇಂತಹವರ ಪರಿಸ್ಥಿತಿ ಇಂದು ಏನಾಗಿದೆ ಎನ್ನುವುದನ್ನು ಸ್ವಲ್ಪ ನಾವು ತುಲನ ಮಾಡಿ ನೋಡಬೇಕಾಗಿದೆ. ಮೂರನೆ ಪಂಚವಾರ್ಷಿಕ ಯೋಜನೆಯಲ್ಲಿ ಸುಮಾರು 55 ಬುಲ್ ಡೋಜರುಗಳು ಸರ್ಕಾರದಿಂದ ನಡೆಸುತ್ತಿರುವುದು ಹಾಗೂ 100 ಟ್ರಾಕ್ಟರುಗಳು ಹೈರ್ ಪರ್ಚೇಸ್ ಸಿಸ್ಟಂನಂತೆ ರೈತರಿಗೆ ಹಂಚಿಕೆಯಾಗಬೇಕು ಎಂದಿರುವುದು ಅಷ್ಟುಮಟ್ಟಿಗೆ ಕಾರ್ಯಗತವಾಗಿದೆಯೇ ಎನ್ನುವುದನ್ನು ನಾನು ಇಲ್ಲಿ ಕೇಳಬೇಕಾಗಿದೆ. ನಾನು ತಿಳಿದಿರುವಂತೆ ನಿಮ್ಮಲ್ಲಿರುವ ಎಲ್ಲ ಮೆಷಿನರಿಗಳೂ ಕೂಡ ಯಾವಾಗ ನೋಡಿದರೂ 'ಸಿಕ್ಕು' ಎಂದು ಹೇಳುತ್ತಿರುವುದನ್ನು ಯಾರಾದರೂ ಒಬ್ಬರು ಅಗ್ರಿಕಲ್ಚರ್ ಡೈರೆಕ್ಟರು ವಿಚಾರಿಸಿನೋಡಿ

(ಶ್ರೀ ಎಚ್. ಡಿ. ದೇವೇಗೌಡ)

ದ್ದಾರೆಯೇ ? ಪ್ರತಿಯೊಂದು ಮಿಷನರಿಯೂ ಸಿಕ್ಕು ಎಂದು ಇದ್ದರೆ ಇದರಿಂದ ರೈತನಿಗೆ ತಕ್ಕಷ್ಟು ಫಲ ಹೇಗೆ ದೊರೆಯಬೇಕು ಮತ್ತು ವ್ಯವಸಾಯಕ್ಕೆ ಹೇಗೆ ಉಪಯೋಗಿಸಿಕೊಳ್ಳಬೇಕು? ನಿಮ್ಮ ವ್ಯವಸಾಯದ ಇಲಾಖೆಯಲ್ಲಿ ಪೂರ್ಣವಾಗಿ ರಾಜಕೀಯವಿದೆ. ಇಲಾಖೆಯಲ್ಲಿರುವ ಅಧಿಕಾರಿಗಳು ದಕ್ಷತೆಯಿಂದ ಕೆಲಸ ಮಾಡುತ್ತಿಲ್ಲ. ಇಲ್ಲಿರುವ ಇಲಾಖೆಯ ಅಧಿಕಾರಿಗಳನ್ನು ಬೇರೆ ಕಡೆ ಇಟ್ಟು ಬೇಕಾದರೆ ಸಂಬಳ ಕೊಡಲಿ. ಇಲ್ಲಿಗೆ ಬೇರೆಯವರನ್ನು ಚೆನ್ನಾಗಿ ಕೆಲಸ ಮಾಡುವವರನ್ನು ನೇಮಕ ಮಾಡಿದರೆ ಆಗೇನಾದರೂ ವ್ಯವಸಾಯದ ಕೆಲಸಗಳು ಚೆನ್ನಾಗಿ ನಡೆಯುತ್ತದೋ ಏನೋ ನೋಡಬಹುದು. ಈ ದೇಶದಲ್ಲಿರುವ ಸುಮಾರು 85 ಪರ್ಸೆಂಟಿನಷ್ಟು ಜನರಿಗೆ ಒಳ್ಳೆಯ ಫಲ ದೊರಕುವ ಸಲುವಾಗಿ ವ್ಯವಸಾಯ ಅಭಿವೃದ್ಧಿ ಮಾಡಬೇಕಾಗಿದೆ. ಅದು ಹೇಗೆ ದೊರಕಲು ಸಾಧ್ಯ ಎನ್ನುವುದನ್ನು ತಾವೇ ಯೋಚನೆ ಮಾಡಬಹುದು. ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಆಹಾರದವಸ ಧಾನ್ಯಗಳನ್ನು ಬೆಳೆಯಲು ಹೆಚ್ಚಿನ ಯೋಜನೆಗಳನ್ನು ಹಾಕಿದ್ದರೂ ಅದರಂತೆ ವ್ಯವಸಾಯದ ಕ್ಷೇತ್ರದಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ಕೆಲಸಮಾಡಬೇಕಾದರೆ ಅದಕ್ಕೆ ತಕ್ಕ ಮುಖ್ಯ ಅಧಿಕಾರಿ ಇರಬೇಕು. ಆದರೆ ಈಗಿರುವ ಅಧಿಕಾರಿಗಳಿಂದ ಸರಿಯಾಗಿ ಕೆಲಸಗಳೇನೂ ಆಗುತ್ತಿಲ್ಲ. ಆದುದರಿಂದ ಇವರನ್ನು ಬೇರೆ ಕಡೆ ಇಟ್ಟು ಬೇಕಾದರೆ ಸಂಬಳ ಕೊಡಿ ನಾನು ಬೇಡ ಎನ್ನುವುದಿಲ್ಲ. ಇದನ್ನು ನಾನೊಬ್ಬನೇ ಹೇಳುತ್ತಿಲ್ಲ. ಇಲ್ಲಿರುವ ಎಷ್ಟೋ ಜನ ಕಾಂಗ್ರೆಸ್ಸು ಸದಸ್ಯರೂ ಇದಕ್ಕೆ ಒಪ್ಪುತ್ತಾರೆ. ಇವರು ಏನು ಅಂಕಿ ಅಂಶಗಳನ್ನು ಕೊಡುತ್ತಾರೆಂದರೆ ತಾಲ್ಲೂಕು ಬೋರ್ಡ್ ಮೆಂಬರು ಕೊಟ್ಟ ಅಂಕಿ ಅಂಶಗಳನ್ನು ಇಲ್ಲಿ ನೋಡಿ ಹೇಳುತ್ತಾರೆ. ಇದು ಬರೀ ಸುಳ್ಳು. ಇಲ್ಲಿ ನ್ಯಾಚುರಲ್ ಗ್ರೀನ್ ಮೆನ್ಯೂರ್ಸ್‌ನಿಂದ ಕಂಪೋಸ್ಟು ಮಾಡಬೇಕೆಂದು ಹೇಳಿದಂತೆ ನೋಡುವಾಗ ಇಲ್ಲಿ ಕೊಟ್ಟಿರುವ ಅಂಕಿ ಅಂಶಗಳು ಸುಳ್ಳು ಮತ್ತು ಸರಿಯಾದುದಲ್ಲ ಎಂದು ದಿಟ್ಟತನದಿಂದ ಹೇಳುತ್ತೇನೆ. ಇದರ ಜೊತೆಗೆ ಕೆಮಿಕಲ್ ಮೆನ್ಯೂರ್ಸ್‌ನ್ನು ಕೂಡ ಸರಿಯಾಗಿ ಹಂಚುವ ವ್ಯವಸ್ಥೆಮಾಡಿದ್ದಾರೆಯೇ ಎಂದು ನೋಡಿದರೆ ಅದರಲ್ಲೂ ಎಷ್ಟೋ ಲೋಪ ದೋಷಗಳು ಇವೆ. ಕೆಮಿಕಲ್ ಮೆನ್ಯೂರುಗಳನ್ನು ಯಾವ ರೀತಿ ಉಪಯೋಗಿಸಿದರೆ ಎಷ್ಟು ಫಲ ದೊರಕುತ್ತದೆ ಎನ್ನುವುದನ್ನು ಜನತೆಗೆ ತಿಳಿಸಲು ಇದರಲ್ಲಿ ಯಾವ ಅಂಕಿ ಅಂಶಗಳೂ ಇಲ್ಲ. ಸಾಯಿಲ್ ಟೆಸ್ಟು ಮಾಡುವುದಕ್ಕಾಗಿ ಹೆಬ್ಬಾಳಿನಲ್ಲಿ ಮಾತ್ರ ಒಂದು ಸಂಶೋಧನೆ ಮಾಡಬೇಕೆಂದು ಮಾಡಿರುವುದರಿಂದ ದೇಶದ ಎಲ್ಲ ಜನಕ್ಕೂ ಇದರಿಂದ ಉಪಯೋಗವಾಗುವುದಿಲ್ಲ ಮತ್ತು ವ್ಯವಸಾಯಕ್ಕೂ ಖಂಡಿತ ಅನುಕೂಲವಾಗುವುದಿಲ್ಲ. ಇಂತಹ ಮಾದರಿಯ ಮೆನ್ಯೂರು ಇದೆ ಇದಕ್ಕೆ ಯಾವ ಪ್ರಪೋರ್ಷನ್ನಿನಲ್ಲಿ ಹಾಕಬೇಕು ಮತ್ತು ಹಾಕಿದರೆ ಯಾವ ತರಹದ ಬೆಳೆ ಬರುತ್ತದೆ ಎನ್ನುವುದನ್ನು ತೋರಿಸಲು ವ್ಯವಸಾಯ ಇಲಾಖೆಯಲ್ಲಿರುವ ಅಧಿಕಾರಿಗಳು ಯಾರೂ ಜನಕ್ಕೆ ಸಹಾಯ ಮಾಡುತ್ತಿಲ್ಲ. ಆದುದರಿಂದ ಇಲಾಖೆಯಿಂದ ಏನೂ ಉಪಯೋಗವಿಲ್ಲ ಎಂದು ನಾನು ಇಲ್ಲಿ ಸ್ಪಷ್ಟವಾಗಿ ಹೇಳುತ್ತೇನೆ. ನಿದರ್ಶನಕ್ಕಾಗಿ ಬೇಕಾದಷ್ಟು ಹೇಳಬಹುದು. ಇನ್ನು ರೋಗಗಳು ಬೆಳೆಗೆ ಯಾವ ರೀತಿ ಬರುತ್ತವೆ ಮತ್ತು ಅದನ್ನು ನಿವಾರಣೆ ಮಾಡಬೇಕಾದರೆ ಏನು ಮಾಡಬೇಕು ಎನ್ನುವುದನ್ನು ಇಲಾಖೆಯಲ್ಲಿರುವ ಅಧಿಕಾರಿಗಳು ಹೇಳುವುದಕ್ಕೇ ಆಗುತ್ತಿಲ್ಲ. ಅವರಿಗೆ ರೋಗ ಯಾವುದು ಬಂದಿದೆ ಎನ್ನುವುದನ್ನು ಮೊದಲಿಗೆ ಕಂಡು ಹಿಡಿಯುವುದಕ್ಕೇ ಬರುವುದಿಲ್ಲ. ನಮ್ಮ ಹಾಸನ ಜಿಲ್ಲೆಯಲ್ಲಿ ನಾನೇ ಒಂದು ಸಾರಿ ಅಲ್ಲಿದ್ದ ಬೆಳೆಗೆ ಕೊಳೆರೋಗ ಎಂದು ಬಂದಿತ್ತು. ಅದನ್ನು ಪರೀಕ್ಷೆಮಾಡಿ ಅದಕ್ಕೇನು ಪರಿಹಾರ ಕೊಡಬೇಕು ಎನ್ನುವುದನ್ನು ಹೇಳಲು ಶಕ್ತಿಯುತರಾದ ಅಧಿಕಾರಿಗಳು ನಿಮ್ಮಲ್ಲಿಲ್ಲ ಎಂದು ಈ ಸಂದರ್ಭದಲ್ಲಿ ಹೇಳಲು ಇಚ್ಛಿಸುತ್ತೇನೆ. ಇನ್ನು ಸೀಡ್ ಮಲ್ಟಿಪ್ಲಿಕೇಷನ್ನು ಫಾರಂಗಳೆಂದು ಮಾಡಿದ್ದಾರೆ. ಇದು ಎಷ್ಟು ಮಟ್ಟಿಗೆ ಕೆಲಸ ಮಾಡುತ್ತಿದೆ ಎನ್ನುವುದನ್ನು ತಿಳಿಯಬೇಕಾದರೆ ಮಾನ್ಯ ಮಂತ್ರಿಗಳು ನನ್ನೊಡನೆ ಒಂದು ಸಾರಿ ಬಂದರೆ ನಮ್ಮ ಕ್ಷೇತ್ರದಲ್ಲೇ ಒಂದು ಸೀಡು ಮಲ್ಟಿಪ್ಲಿಕೇಷನ್ನು ಫಾರಂ ಇದೆ. ಅದು ಎಷ್ಟು ಮಟ್ಟಿನ ಕೆಲಸ ಮಾಡುತ್ತಿದೆ ಎನ್ನುವುದನ್ನು ಕಣ್ಣಾರೆ ನೋಡಬಹುದು. ಬಹುಶಃ ಈ ದೇಶದಲ್ಲಿರುವ 9 ಸೀಡ್ ಮಲ್ಟಿಪ್ಲಿಕೇಷನ್ನು ಫಾರಂಗಳೂ ಇದೇ ರೀತಿ ಕೆಲಸ ಮಾಡುತ್ತಿವೆ ಎಂದು ಅರ್ಥಮಾಡಿಕೊಳ್ಳಬಹುದು. ಮೂರನೇ ಯೋಜನೆಯಲ್ಲಿ ಇಂತಹ 55 ಸೀಡ್ ಫಾರಂಗಳನ್ನು ತೆಗೆಯಬೇಕೆಂದು ಇದ್ದಾರೆ ಎಂದು ಇತ್ತು. ಇದರ ಬಗ್ಗೆ ನಮಗೆ ಯಾವ ಲೆಕ್ಕಗಳೂ ಇದರಲ್ಲಿ ಕಂಡು ಬರುತ್ತಿಲ್ಲ. ಹೀಗಾದರೆ ವ್ಯವಸಾಯ ಮಾಡುವುದಾದರೂ ಹೇಗೆ ? ಇದು ಎಷ್ಟು ಮಟ್ಟಿಗೆ ಕಾರ್ಯಗತವಾಗುತ್ತದೆ ಮತ್ತು ಬೀಜಗಳು ಎಷ್ಟು ಮಟ್ಟಿಗೆ ವಿಲೇವಾರಿಯಾಗುತ್ತವೆ ಎನ್ನುವುದರಲ್ಲಿ ನಮಗೆ ಸಂಶಯ ಉತ್ಪನ್ನವಾಗುತ್ತದೆ.

ಇನ್ನು ನಮ್ಮ ದೇಶದಲ್ಲಿ ಸಕ್ಕರೆಯ ಉತ್ಪಾದನೆಯನ್ನು ಹೆಚ್ಚು ಮಾಡಬೇಕೆಂದು ಇನ್ನೂ ಐದು ಸಕ್ಕರೆ ಕಾರ್ಖಾನೆಗಳನ್ನು ತೆಗೆಯಬೇಕೆಂದು ಯೋಚನೆ ಮಾಡುತ್ತಿದ್ದಾರೆಂದು ಇದರಲ್ಲಿ ಹೇಳಿದ್ದಾರೆ. ನಮ್ಮ ಹಾಸನ ಜಿಲ್ಲೆಯಲ್ಲಿ ಕೂಡ ಕಬ್ಬು ಜಾಸ್ತಿಯಾಗಿ ಬೆಳೆಯುತ್ತಿದೆ. ಇಲ್ಲಿನ ಜಿಲ್ಲಾ ಕಾಂಗ್ರೆಸ್

ಕಮಿಟಿಯವರೂ ಕೂಡ ಒಂದು ನಿರ್ಣಯ ಮಾಡಿ ಇಲ್ಲಿಗೆ ಒಂದು ಸಕ್ಕರೆ ಕಾರ್ಖಾನೆಗಾಗಿ ಒಂದು ಲೈಸನ್ಸನ್ನು ಕೊಡ ಬೇಕೆಂದು ಹತ್ತಾರು ಸಲ ಕೇಳಿದರೂ ಕೂಡ ಸರ್ಕಾರ ಇದರ ಬಗ್ಗೆ ಏನೂ ಕ್ರಮ ತೆಗೆದುಕೊಳ್ಳಲಿಲ್ಲ. ಇಲ್ಲಿ ಸಕ್ಕರೆ ಕಾರ್ಖಾನೆಯನ್ನು ತೆಗೆಯಲು ಸರ್ಕಾರಕ್ಕೆ ಗಮನ ಬರಲಿಲ್ಲ. ಇದನ್ನು ನೋಡಿದರೆ ನಮ್ಮ ಸರ್ಕಾರದಲ್ಲಿ ಹಾಸನ ಜಿಲ್ಲೆಯ ಬಗ್ಗೆ ಮಲತಾಯಿಯ ಭಾವನೆ ತೋರಿಸುತ್ತಿದ್ದಾರೋ ಏನೋ ಎನ್ನುವುದು ಗೊತ್ತಾಗುತ್ತಿಲ್ಲ.

ಇನ್ನು ಕರಪ್‌ಷನ್ ಬಗ್ಗೆ ಇದರಲ್ಲಿ ತಾವೇನೂ ಪ್ರಸ್ತಾಪ ಮಾಡಿಲ್ಲ. ತಾವೇನೋ ದೊಡ್ಡದಾದ ಪ್ರತಿನಿಧಿಗಳನ್ನು ಸೇರಿಸಿ ಒಂದು ವಿಜಿಲೆನ್ಸ್ ಕಮಿಟಿಯನ್ನು ಮಾಡುತ್ತೇವೆಂದು ದೊಡ್ಡದಾಗಿ ಮಾನ್ಯ ಮಂತ್ರಿಗಳಾದ ಶ್ರೀಮಾನ್ ನಂದಾರವರು ಹೇಳಿದ್ದಾರೆ. ನಾನೂ ಇನ್ನು ಸ್ವಲ್ಪ ಮುಂದೆ ಹೋಗುತ್ತೇನೆ. ಈ ಸಭೆಯ 208 ಮಂದಿ ಸದಸ್ಯರಲ್ಲಿ ಕೂಡ ಚುನಾವಣೆಯ ಕಾಲದಲ್ಲಿ ಓಟನ್ನು ಪಡೆಯಲು ಎಷ್ಟು ಮಟ್ಟಿಗೆ ಎಷ್ಟು ಮಂದಿ ಲಂಚವನ್ನು ಕೊಟ್ಟು ಬಂದಿದ್ದಾರೆ. ಇದರಿಂದ ಸ್ಥಾಪಿಸಿರುವ ಸರ್ಕಾರ ಇದನ್ನು ಎಷ್ಟರ ಮಟ್ಟಿಗೆ ಕಾರ್ಯಗತಮಾಡುತ್ತದೆ ಎನ್ನುವುದು ಎಲ್ಲರೂ ಸ್ವಲ್ಪ ಯೋಚನೆ ಮಾಡಬೇಕಾದ ವಿಷಯ. ತಾವೇನೋ ಒಂದು ದೊಡ್ಡ ಕಾರ್ಯಕ್ರಮ ಹಾಕಿಕೊಂಡಿದ್ದೀರಿ. ಆದರೆ ಅದರಿಂದ ಎಷ್ಟು ಮಟ್ಟಿನ ಪ್ರಯೋಜನವಾಗುತ್ತದೆ ಅಥವಾ ಫಲಕಾರಿಯಾಗುತ್ತದೆ ಎನ್ನುವುದನ್ನು ನಾವು ಪರಿಶೀಲಿಸಿ ನೋಡೋಣ.

ಒಂದು ವಿಷಯವನ್ನು ನಾನೀಗ ಇಲ್ಲಿ ಪ್ರಸ್ತಾಪಮಾಡಬೇಕೆಂದಿದ್ದೇನೆ. ಜನರಲ್ ಅಡ್ಮಿಷ್ಟ್ರೇಷನ್ ಬಾಬಿನಲ್ಲಿ ಅಧಿಕಾರಿಗಳಿಗೆ ಬಡ್ತಿ ಕೊಡತಕ್ಕ ಕಾಲದಲ್ಲಿ ಸರ್ಕಾರದವರೇನು ಅರವತ್ತಾರು ಮೂರನೇ ಎರಡು ಭಾಗವನ್ನು ಕ್ಲುಪ್ತಮಾಡಿಕೊಂಡಿದ್ದಾರೋ ಅದರಲ್ಲಿ ಎಷ್ಟು ಅನ್ಯಾಯ ನಡೆಯುತ್ತದೆಂಬುದನ್ನು ನಾನೀಗ ತಿಳಿಸಲಿಚ್ಛಿಸುತ್ತೇನೆ. ಒಬ್ಬ ಬಿ.ಇ. ಡಿಗ್ರಿ ಪದವೀಧರನು ಇಂಜಿನಿಯರಿಂಗ್ ಇಲಾಖೆಯಲ್ಲಿ ಕೆಲಸಕ್ಕೆ ಸೇರಿದರೆ ಅವನು 15-20 ವರ್ಷ ಕೆಲಸ ಮಾಡಿದರೂ ಅಸಿಸ್ಟೆಂಟ್ ಇಂಜಿನಿಯರಾಗುವುದಕ್ಕೆ ಸಾಧ್ಯವಿಲ್ಲ. ಆದರೆ ಅದೇ ಬಿ.ಇ. ಡಿಗ್ರಿ ಪಡೆದಿರತಕ್ಕ ಮತ್ತೊಬ್ಬ ಮನುಷ್ಯ ಮಂತ್ರಿಗಳ ಹತ್ತಿರ ಸ್ವಲ್ಪ ಇನ್‌ಫ್ಲೂಯೆನ್ಸ್ ಇಟ್ಟುಕೊಂಡಿದ್ದರೆ ಅವನು ಏಕ್‌ದಂ ಅಸಿಸ್ಟೆಂಟ್ ಇಂಜಿನಿಯರಾಗುತ್ತಾನೆ. ಒಂದೇ ಕ್ವಾಲಿಫಿಕೇಷನ್ ಇದ್ದು ಸಾಲದ್ದಕ್ಕೆ ಇಲಾಖೆಯಲ್ಲಿ 15-20 ವರ್ಷ ಕೆಲಸಮಾಡಿರತಕ್ಕಂಥ ವ್ಯಕ್ತಿ ಆಗತಾನೆ ಕೆಲಸಕ್ಕೆ ಸೇರಿ ಅಸಿಸ್ಟೆಂಟ್ ಇಂಜಿನಿಯರಾಗಿರತಕ್ಕ ವ್ಯಕ್ತಿಗೆ ಅಧೀನನಾಗಿ ನಡೆಯಬೇಕೆಂದರೆ ಅವನ ಮನಸ್ಸು ಹೇಗಿರಬೇಕು ? ಇಬ್ಬರ ಕ್ವಾಲಿಫಿಕೇಷನ್ನೂ ಒಂದೇ, ಆದರೆ ಒಬ್ಬನಿಗೆ 400 ರೂ. ಸಂಬಳ ಇನ್ನೊಬ್ಬನಿಗೆ 15-20 ವರ್ಷ ಕೆಲಸ ಮಾಡಿದ್ದರೂ 150 ರೂಪಾಯಿ ಸಂಬಳ. ಹೀಗಾದರೆ ಇವರಲ್ಲಿ ಸರ್ಕಾರದವರು ಹೇಳತಕ್ಕ ಆನೆಸ್ಟಿ ಇರಬೇಕೆಂದರೆ ಅದು ಹೇಗೆ ಸಾಧ್ಯ? ಸರ್ಕಾರಿ ಕೆಲಸಗಳು ದಕ್ಷತೆಯಿಂದ ನಡೆಯಬೇಕೆಂದರೆ ಅದು ಹೇಗೆ ಸಾಧ್ಯ ? ಇಂಥ ಒಂದು ಪಾಲಿಸಿಯಿಂದ ಯಾರಲ್ಲಿ ತಾನೆ ಆ ಒಂದು ಆನೆಸ್ಟಿಯಾಗಲೀ ಅಥವಾ ದೇಶಪ್ರೇಮವಾಗಲೀ ಇರಲು ಸಾಧ್ಯ ? ಈ ವಿಚಾರವನ್ನು ಸರ್ಕಾರದವರು ಚೆನ್ನಾಗಿ ಆಲೋಚನೆ ಮಾಡಬೇಕು.

5-00 P.M.

ಶ್ರೀ ಬಿ. ಡಿ. ಜತ್ತಿ.—ಇಬ್ಬರು ಏಕ ಕಾಲದಲ್ಲೇ ಕೆಲಸಕ್ಕೆ ಸೇರಿದ್ದರೆ ಸೀನಿಯಾರಿಟಿ ಕಂ ಮೆರಿಟ್ಟಿನ ಮೇಲೆ ಅವರ ಪ್ರಮೋಷನ್ ನಿರ್ಧರಿಸಲಾಗುತ್ತದೆ. ಆದರೆ ಇನ್ನು ಹಳೆಯ ಬ್ಲಡ್ ಜೊತೆಗೆ ನ್ಯೂಬ್ಲಡ್ ಸಹಾ ಇರಬೇಕೆಂದು ಪಿ. ಎಸ್. ಸಿ. ಅವರು ಅರವತ್ತಾರು ಮೂರನೆ ಎರಡು ಭಾಗವನ್ನು ಡೈರೆಕ್ಟ್ ರೆಕ್ರೂಟ್ ಮೂಲ್ಕ ನೇಮಕ ಮಾಡುತ್ತಾರೆ. ಇದಕ್ಕೆ ಸರ್ಕಾರದವರೇನೂ ಮಾಡುವ ಹಾಗಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಈ ನೀತಿಯಿಂದ ಸರ್ಕಾರದವರೇ ಅಧಿಕಾರಿಗಳನ್ನು ಕರಪ್‌ಷನ್‌ಗೆ ಎಳೆಯುತ್ತಿದ್ದಾರೆಂದು ಹೇಳಬೇಕಾಗುತ್ತದೆ. ಇನ್ನು ಎಗ್ಜಿಕ್ಯುಟೀವ್ ಇಂಜಿನಿಯರ್ ಹುದ್ದೆಯಿಂದ ಮುಂದಕ್ಕೆ ಸೂಪರಿಂಟೆಂಡಿಂಗ್ ಇಂಜಿನಿಯರ್ ಮತ್ತು ಚೀಫ್ ಇಂಜಿನಿಯರ್ ಹುದ್ದೆಗೆ ಪ್ರಮೋಷನ್ ಮಾಡುವಾಗ ಸಲೆಕ್ಷನ್ ಬೇಸಿಸ್ಸನ್ನು ಇಟ್ಟುಕೊಂಡಿರುತ್ತಾರೆ. ಈ ಒಂದು ನೀತಿಯಿಂದಲೂ ಕೂಡ ಸರ್ಕಾರದವರೇ ಅಧಿಕಾರಿಗಳ ನೀತಿಯನ್ನು ಕೆಡಿಸಿಕೊಳ್ಳಲು ಕಾರಣರಾಗಿದ್ದಾರೆಂದು ನಾನು ಹೇಳುತ್ತೇನೆ. ಇಬ್ಬರೂ ಒಂದೇ ಕ್ವಾಲಿಫಿಕೇಷನ್ ಇಟ್ಟುಕೊಂಡಿದ್ದು, ಇಬ್ಬರೂ ಒಂದೇ ಕಾಲದಲ್ಲಿ ಕೆಲಸಕ್ಕೆ ಸೇರಿದ್ದಾಗ, ಇಬ್ಬರೂ ಒಂದೇ ಇಲಾಖೆಯಲ್ಲಿ ಕೆಲಸಮಾಡುತ್ತಿರುವಾಗ ಅವರ ಪ್ರಮೋಷನ್ ವಿಚಾರದಲ್ಲಿ ಅವರ ಸೀನಿಯಾರಿಟಿಯನ್ನು ಪರಿಗಣಿಸದೆ ಮೆರಿಟ್‌ಮೇಲೆ ಕನ್‌ಸಿಡರ್ ಮಾಡುತ್ತೇವೆಂದು ಹೇಳುತ್ತಾರೆ. ಇಂಥಾ ಒಂದು ಪದ್ಧತಿಯಿಂದ ಅವರು ಎಂಥವರೇ ಆಗಿರಲಿ ಕೋಮುವಾರು

(ಶ್ರೀ ಎಚ್. ಡಿ. ದೇವೇಗೌಡ)

ಭಾವನೆ, ಸ್ವಜನ ಪಕ್ಷಪಾತ ಇತ್ಯಾದಿ ಕನ್‌ಸಿಡರೇಷನಗಳು ಬಂದೇ ಬರುತ್ತದೆ. ಇದರಿಂದ ಅಧಿಕಾರಿಗಳು ದೇಶವಾತ್ಸಲ್ಯದಿಂದ ಕೆಲಸಮಾಡಲು ಸಾಧ್ಯವಿಲ್ಲ. ಅನೆಸ್ಟಾಗಿ ಇರಬೇಕೆಂದರೂ ಅದು ಸಾಧ್ಯವಿಲ್ಲದ ಮಾತು. ಆದ್ದರಿಂದ ಸರ್ಕಾರದವರು ಕೂಡಲೇ ಈ ನೀತಿಯನ್ನು ಬದಲಾಯಿಸುವುದು ಉತ್ತಮ ಎಂದು ಹೇಳುತ್ತೇನೆ. ಸಾಲದ್ದಕ್ಕೆ ಇದರ ಜೊತೆಗೆ ಮೈನರ್ ಕಮ್ಯೂನಿಟಿ, ಮೋರ್ ಬ್ಯಾಕವರ್ಡ್ ಕಮ್ಯೂನಿಟಿಗಳು ಬೇರೆ ಇರತ್ತವೆ. ಅವುಗಳು ಮುಂದೆ ಬರುವುದಕ್ಕೆ ಸಾಧ್ಯವಾಗುತ್ತಿಲ್ಲ. ಇದೆಲ್ಲಾ ಈ ಡೈರೆಕ್ಟ್ ರೆಕ್ರೂಟ್‌ಮೆಂಟಿನ ಪರಿಣಾಮ. ಆದುದರಿಂದ ಸರ್ಕಾರದವರು ತಮ್ಮ ನೀತಿಯನ್ನು ಪುನರ್ ಪರಿಶೀಲನೆಮಾಡಬೇಕೆಂದು ಹೇಳುತ್ತೇನೆ. ಇಲ್ಲವಾದರೆ ಅಧಿಕಾರಿಗಳಲ್ಲಿ ಈ ಅತೃಪ್ತಿ ಎಂಬುದು ಹೋಗುವುದಿಲ್ಲ. ನೀವು ಎಷ್ಟೇ ವಿಜಿಲೆನ್ಸ್ ಕಮಿಟಿಗಳನ್ನು ನೇಮಕ ಮಾಡಿದರೂ ಪ್ರಯೋಜನವಿಲ್ಲ. ಸರ್ಕಾರದವರಿನ್ನೂ ಈ ಅಧಿಕಾರಿಗಳ ಸಂಬಳ ಸಾರಿಗೆಗಳನ್ನು ಒಂದು ಯೂನಿಫಾರಂ ಸ್ಕೇಲಿಗೆ ತರಲು ಸಾಧ್ಯವಾಗಿಲ್ಲ. ಮೊನ್ನೆತಾನೆ ವಿದ್ಯಾಮಂತ್ರಿಗಳು ಮೈಸೂರು ಯೂನಿವರ್ಸಿಟಿಯು ಹಾಗೂ ಕರ್ಣಾಟಕ ಯೂನಿವರ್ಸಿಟಿಯ ಯೂನಿಫಾರ್ಮಿಟಿ ವಿಚಾರವನ್ನು ಎತ್ತಿ ಎಲ್ಲಾ ಕಡೆಗಳಲ್ಲೂ ಒಂದೇಫೀ ಸ್ಟ್ರಕ್ಚರ್ ಇರಬೇಕೆಂದು ಹೇಳಿ ಒಂದು ಹೇಳಿಕೆಯನ್ನು ಹೊರಡಿಸಿದ್ದರು. ಸ್ವಾಮಿ ಈ ಸಂದರ್ಭದಲ್ಲಿ ನಾನು ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುವುದಾದರೆ—ಒಂದೇ ಬೆಂಚಿನಲ್ಲಿ ಕುಳಿತು ಕೆಲಸಮಾಡತಕ್ಕ ಹಳೇ ಮೈಸೂರಿನವರ ಸಂಬಳವೆಷ್ಟು? ಹೊಸ ಮೈಸೂರಿನವರ ಸಂಬಳವೆಷ್ಟು? ಇಬ್ಬರು ಮಾಡುವುದೂ ಒಂದೇ ಕೆಲಸ, ಇಬ್ಬರ ಗ್ರೇಡೂ ಒಂದೇ. ಇಂಥ ಅಜಗಜಾಂತರ ವ್ಯತ್ಯಾಸವಿರುವಾಗ ಅವರು ದಕ್ಷತೆಯಿಂದ ಮುತವರ್ಜಿಯಿಂದ ಕೆಲಸ ಮಾಡಬೇಕೆಂದರೆ ಹೇಗೆ ಸಾಧ್ಯ? ಉತ್ತಮ ಕೆಲಸ ಮಾಡತಕ್ಕವರಿಗೆ ಸಾಕಷ್ಟು ಪ್ರೋತ್ಸಾಹವಿಲ್ಲ. ಇಂಥ ಪರಿಸ್ಥಿಯಲ್ಲಿ ಹುರುಪಿನಿಂದ ಕೆಲಸಮಾಡಲು ಯಾರಿಗೂ ಮನಸ್ಸು ಬರುವುದಿಲ್ಲ. ಎಲ್ಲರಲ್ಲೂ ಅತೃಪ್ತಿ, ಅಸಮಾಧಾನಗಳು ಮೂಡಿವೆ.

ಇನ್ನು ಅಧಿಕಾರಿಗಳ ವರ್ಗಾವರ್ಗಿ ವಿಚಾರಕ್ಕೆ ಬಂದರೆ–ಒಬ್ಬ ಡಿ.ಸಿ.ಯ ವರ್ಗವಾಗಲೀ ಅಥವಾ ಒಬ್ಬ ಸಬ್—ಇನ್‌ಸ್ಪೆಕ್ಟರ ವರ್ಗವಾಗಲೀ ಒಂದಾವರ್ತಿ ಅವರನ್ನು ವರ್ಗಮಾಡಿದಮೇಲೆ ಮುಖ್ಯ ಮಂತ್ರಿಗಳು ಅದನ್ನು ಬದಲಾವಣೆ ಮಾಡಬಾರದು. ಈ ವಿಚಾರಗಳಲ್ಲಿ ಮುಖ್ಯಮಂತ್ರಿಗಳು ಪ್ರವೇಶ ಮಾಡಬಾರದು. ಹೀಗೆ ಇವರು ಆ ವಿಚಾರದಲ್ಲಿ ಪ್ರವೇಶಮಾಡಿ ಸರ್ಕಾರದ ಮುಖ್ಯ ಸೆಕ್ರೆಟೆರಿಗಳನ್ನು ಇವರು ತಮ್ಮ ಲೈನಿಗೆ ಎಳೆಯುವುದು ಸರಿಯಲ್ಲವೆಂದು ಹೇಳುತ್ತೇನೆ.

ಇನ್ನು ಕೋ—ಆಪರೇಟೀವ್ ವಿಚಾರಕ್ಕೆ ಬಂದರೆ: ಇದು ನಮ್ಮ ರಾಜ್ಯದಲ್ಲಿ ಸಹಕಾರ ಸಕ್ಸಸ್ಸಾಗುವುದಿಲ್ಲವೆಂದು ಅನೇಕರು ಹೇಳುತ್ತಿದ್ದಾರೆ. ಆದರೆ ಈ ವಿಚಾರದಲ್ಲಿ ಕೆಲವು ಅಂಶಗಳನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರಬೇಕೆಂದಿದ್ದೇನೆ. ಆದರೆ ನನಗೆ ಒಬ್ಬರು ಒಂದು ಪತ್ರವನ್ನು ಬರೆದು ಕಳುಹಿಸಿದ್ದಾರೆ: ಅದನ್ನೆಲ್ಲಾ ಓದುವುದು ಅನ್‌ಪಾರ್ಲಿಮೆಂಟ್ರಿಯಾಗುತ್ತದೋ ಏನೊ ಎಂಬ ಶಂಕೆಯಿಂದ ನಾನು ಒಂದು ವಿಚಾರಕ್ಕೆ ಮಾತ್ರ ಮಾನ್ಯ ಸಹಕಾರ ಮಂತ್ರಿಗಳ ಗಮನವನ್ನು ಸೆಳೆಯಲು ಒಂದು ವಾಕ್ಯವನ್ನು ಓದಲಿಚ್ಛಿಸುತ್ತೇನೆ. ಈ ಅರ್ಜಿಯ ಕಾಪಿಯನ್ನು ಸಹಿ ಹಾಕಿ ಮುಖ್ಯ ಮಂತ್ರಿಗಳಿಗೂ ಮತ್ತು ಸಹಕಾರ ಮಂತ್ರಿಗಳಿಗೂ ಈಗಾಗಲೇ ಕೊಟ್ಟಿರುತ್ತಾರೆ.

1962-63ನೇ ಆಡಿಟ್ ರಿಪೋರ್ಟ್‌ನಲ್ಲಿ ಈ ಸೊಸೈಟಿಯನ್ನು ಲಿಕ್ವಿಡೇಟ್ ಮಾಡುವ ಪರಿಸ್ಥಿತಿ ಬರಬಹುದು ಎಂಬ ಮಾನ್ಯ ಶ್ರೀ ಜತ್ತಿಯವರು ಆಡಳಿತ ನಿರ್ಮಲವಾಗಿದೆ ಎಂದು ಹೇಳಿದರೂ ಕೂಡ ಸಹಕಾರ ಸಂಘದ ಕೆಲಸಕಾರ್ಯಗಳು ಶ್ರೀಮಾನ್ ಜತ್ತಿಯವರ ಕಾಲದಲ್ಲಿ ಹೇಗೆ ನಡೆಯುತ್ತಿವೆ ಎಂಬುದನ್ನು ನಾನು ಕೇಳಿದ್ದೇನೆ. It is out of the way place that weavers cannot use for their benefit. It would be more useful for the benefit of some of the Directors who come and stay there and have their gala days with wine and women. ಇದಕ್ಕಾಗಿ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ 210 ಲಕ್ಷ ರೂಪಾಯಿಗಳನ್ನು ಕೈಮಗ್ಗದವರ ಅಭಿವೃದ್ಧಿಗಾಗಿ ಖರ್ಚುಮಾಡುತ್ತಿದ್ದಾರೆ. ಆದರೆ ಅದನ್ನು ಸರಿಯಾದ ರೀತಿಯಲ್ಲಿ ಉಪಯೋಗ ಮಾಡುತ್ತಾ ಇಲ್ಲವೆಂದು ನಾನು ಹೇಳುತ್ತೇನೆ. ಆರ್ಥಿಕ ಮಂತ್ರಿಗಳು ತಮ್ಮ ಭಾಷಣದಲ್ಲಿ ಅವರ ಅಭಿವೃದ್ಧಿಗಾಗಿ ಅನೇಕ ಪ್ರಯತ್ನಗಳನ್ನು ಸರ್ಕಾರದವರ ಕೈಗೊಳ್ಳುತ್ತಿದ್ದಾರೆಂದು ಹೇಳಿದ್ದಾರೆ. ಆದರೆ ಅವರಿಗೆ ಕೊಡುತ್ತಿದ್ದ ಸಬ್ಸಿಡಿ ಮತ್ತು ರಿಬೇಟ್‌ಗಳನ್ನು ಇತ್ತೀಚೆಗೆ ತೆಗೆದುಹಾಕುತ್ತಿದ್ದಾರೆ. ನೇರವಾಗಿ ನೇಕಾರರಿಗೆ ಶೇಕಡ 4ರಷ್ಟು ಬಡ್ಡಿ ಹಣ ಕೊಡುವುದನ್ನು ಬಿಟ್ಟು ಸಬ್ಸಿಡಿ ಬಂದ್ ಮಾಡಿ ಕೇವಲ ಶೇಕಡ ಎರಡೂವರೆಯಷ್ಟು ಕೊಟ್ಟರೆ ಏನು ಲಾಭವಾಗುತ್ತದೆ? ಇನ್ನು ಕಮಿಷನ್ ಹಂಚಿಕೊಡುವುದರಲ್ಲಿಯೂ ಬಡ ಜನರಿಗೆ

ತುಂಬಾ ತೊಂದರೆಯಾಗುತ್ತಿದೆ. ಕೆಲವು ಕಡೆಗಳಲ್ಲಿ 3 ಪಟ್ಟು ರಿಬೇಟ್ ತೆಗೆದುಕೊಳ್ಳುತ್ತಾರೆ. ಈ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಕೇಂದ್ರ ಸರ್ಕಾರದವರೂ ಸಹ ಸಿದ್ಧರಿದ್ದಾರೆ.

ಶ್ರೀ ಬಿ. ಡಿ. ಜತ್ತಿ.—ಸ್ಟೇಟ್‌ವಾರ್ ಮಾಡಬೇಕಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಸ್ಟೇಟ್‌ವಾರ್ ಮಾಡಲಿಕ್ಕೆ ನಾನು ಸಹ ಒಪ್ಪುತ್ತೇನೆ. ಇದನ್ನು ನಿಲ್ಲಿಸಲಿಕ್ಕೆ ಪ್ರಯತ್ನಮಾಡುತ್ತಿದ್ದಾರೆ. ಕೇಂದ್ರ ಸರ್ಕಾರಕ್ಕೆ ಈ ನೇಕಾರರ ಅಭಿವೃದ್ಧಿ ಮಾಡಲಿಕ್ಕೆ ಒತ್ತಾಯಪಡಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ನಿಜವಾಗಿ ಸರ್ಕಾರವೇನಾದರೂ ಜೀವಂತವಾಗಿದ್ದರೆ ಇದರ ಬಗ್ಗೆ ಅವರು ಸರಿಯಾದ ರೀತಿಯಲ್ಲಿ ವಿಚಾರಣೆ ನಡೆಸಿ ಆ ಕೋ-ಆಪರೇಟಿವ್ ಸೊಸೈಟಿಯಲ್ಲಿರತಕ್ಕ ಎಡರು ತೊಡರುಗಳನ್ನು ವಿಚಾರಮಾಡತಕ್ಕ ದಿಟ್ಟತನವನ್ನು ಈ ಸರ್ಕಾರ ತೆಗೆದುಕೊಳ್ಳುತ್ತದೆಂದು ನಾನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ನನ್ನಲ್ಲಿರುವ ಕಾಗದವನ್ನು ಅಧ್ಯಕ್ಷಣಿಯವರ ಮುಖಾಂತರ ಮಂತ್ರಿಗಳಿಗೆ ಕಳುಹಿಸಿಕೊಡುತ್ತೇನೆ. ಆಡಿಟ್ ವರದಿಯಲ್ಲಿ ಒಂದು ಕಥೆ ಹೀಗೆ ಹೇಳುತ್ತಾರೆ. ಆಡಿಟ್ ವರದಿಯನ್ನು ಈ ಮಟ್ಟದಲ್ಲಿ ಕೊಟ್ಟಿದ್ದರೂ ಸರ್ಕಾರ ಇದರ ಬಗ್ಗೆ ಏನು ಗಮನ ತೆದುಕೊಂಡಿದೆ ಎಂಬುದನ್ನು ನಾನು ಕೇಳಬಯಸುತ್ತೇನೆ. ಆಡಿಟ್ ವರದಿಯಲ್ಲಿ if this state of affairs is allowed to continue, a time should come to invoke Section 69 of the M.C.S. Act. It is believed that the Management will take precautionary measures to avoid such unpleasantness ಎಂದು ಹೇಳಿದೆ. 1962-63ನೇ ಸಾಲಿನಲ್ಲಿ 80 ಸಾವಿರ ರೂಪಾಯಿಗಳನ್ನು ವೇವ್ ಮಾಡಬೇಕೆಂಬ ಬಗ್ಗೆ ಜನರಲ್ ಬಾಡಿಯಲ್ಲಿ ಆಲೋಚನೆ ಮಾಡಿಕೊಂಡಿದ್ದಾರೆಂದು ಹೇಳಿದ್ದಾರೆ. ಆದರೆ ಈ ಸಂಸ್ಥೆಗೆ ಸಂಬಂಧಪಟ್ಟಹಾಗೆ ಒಂದು ವ್ಯಾನಿಗೆ ಒಂದು ನೇಮ್ ಬೋರ್ಡ್ ಇಲ್ಲ, ಲಾಗ್ ಬುಕ್ ಒಂದೂ ಇಲ್ಲ, ಕೇವಲ ಒಂದು ವ್ಯಾನಿಗೆ ಎಷ್ಟೋ ಹಣವನ್ನು ಖರ್ಚು ಮಾಡಿದ್ದಾರೆ. ಇದರ ಬಗ್ಗೆ ಡೈರೆಕ್ಟರ್ಸ್ ಮೀಟಿಂಗ್ ಆಗಿ ಡೈರೆಕ್ಟರ್ಸ್ ರುಜು ಹಾಕಿಕೊಂಡು ಯಾವುದೋ ಒಂದು ದಿನ ನಿರ್ಣಯ ಬರೆದಿರುವುದನ್ನು ನಾನು ನೋಡಿದ್ದೇನೆ. ಅಂದಮೇಲೆ ಸಂಸ್ಥಾನದಲ್ಲಿ ಒಂದು ಲಕ್ಷ ಕೈಮಗ್ಗಗಳನ್ನು ನೋಡಿಕೊಳ್ಳತಕ್ಕ ಆ ಒಂದು ಸೊಸೈಟಿಗೆ ಸರ್ಕಾರದವರು ಎಷ್ಟೋ ಹಣವನ್ನು ಕೊಡುತ್ತಾರೆ. ಸರ್ಕಾರದವರು ಈ ಸಂಸ್ಥೆ ಮಾಡಿಕೊಂಡು 210 ಲಕ್ಷ ರೂಪಾಯಿಗಳನ್ನು ಖರ್ಚುಮಾಡತಕ್ಕ ಕಾಲದಲ್ಲಿ ಈ ಕೈಮಗ್ಗದ ವೃತ್ತಿಯನ್ನು ಅವಲಂಬಿಸಿರತಕ್ಕ ಜನಗಳಿಗೆ ಅದರಿಂದ ಫಲ ದೊರೆಯದೆ ಹೋದರೆ ಅಂತಹ ಸಹಕಾರ ಸಂಘಗಳ ಬಗ್ಗೆ ಈ ಮಟ್ಟದ ಧೋರಣೆ ಇಟ್ಟುಕೊಂಡರೆ ಏನು ಪ್ರಯೋಜನವಾಗುತ್ತದೆಂಬುದನ್ನು ಸರ್ಕಾರ ಯೋಚನೆಮಾಡಬೇಕು.

ಇನ್ನು ಪೋಲೀಸ್ ಇಲಾಖೆ ಬಗ್ಗೆ ಒಂದೆರಡು ಮಾತುಗಳನ್ನು ಹೇಳಿ ನನ್ನ ಮಾತನ್ನು ಪೂರೈಸುತ್ತೇನೆ. ಪೋಲೀಸ್ ಇಲಾಖೆ ಬಗ್ಗೆ ಹೇಳುವುದಾದರೆ ಬಹುಶಃ ಈ ಇಲಾಖೆ ಏನಾದರೂ ಜೀವಂತವಾಗಿದೆಯೇ ಇಲ್ಲವೇ ಎಂದು ಹೇಳುವುದು ಕಷ್ಟ. ಶ್ರೀಮಾನ್ ಆರ್. ಎಂ. ಪಾಟೀಲರು ಬಹಳ ವಿಚಾರಪರರು ಮತ್ತು ಬಹಳ ಅನುಭವಸ್ಥರಾದ ಲಾಯರ್. ಅವರು ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆಂದು ನಾನು ತಿಳಿದುಕೊಂಡಿದ್ದೆ. ಮಂತ್ರಿಗಳಾದ ಪ್ರಥಮದಲ್ಲಿ ಸಾಕಷ್ಟು ಇವರ ಬಗ್ಗೆ ಒಂದು ರೀತಿಯ ಆಶೆ ಇಟ್ಟುಕೊಂಡಿದ್ದೆ. ಕಡೆಕಡೆಯಲ್ಲಿ ಇವರು ಮೊದಲಿನಷ್ಟು ಕೆಲಸಮಾಡುತ್ತಿಲ್ಲವೆಂದು ನಾನು ಹೇಳಬಹುದು. ಒಂದು ವಿಷಯವನ್ನು ಈ ಸಭೆಯ ಗಮನಕ್ಕೆ ತರಬೇಕಾಗಿದೆ. ಮೊನ್ನೆ ಹೈಕೋರ್ಟಿನಲ್ಲಿ ಒಂದು ತೀರ್ಮಾನವಾಗಿದೆ. 52 ವರ್ಷಗಳಿಗೆ ಮೇಲ್ಪಟ್ಟಿರುವ CI ಸಕ್ಕರೆ ಇನಿಸ್ಪೆಕ್ಟರ್‌ಗೆ ಪ್ರೊಮೋಷನ್ ಕೊಡಬಾರದೆಂದು ಸರ್ಕಾರದ ಧೋರಣೆ ಇದೆ. ಆದರೆ ಹೈಕೋರ್ಟು ಇದರ ಬಗ್ಗೆ ತೀರ್ಮಾನವನ್ನು ವ್ಯತಿರಿಕ್ತವಾಗಿ ಕೊಟ್ಟಿರುವುದು ನನ್ನ ಗಮನಕ್ಕೆ ಬಂದಿದೆ. ಪ್ರೊಮೋಷನ್ ಕೊಡಬೇಕಾದರೆ (SP) ಮಟ್ಟದಲ್ಲಿ ಏನು ಕಾನ್‌ಫಿಡೆನಿಷಯಲ್ ವರದಿ ಬರುತ್ತದೋ ಅದರ ಮೇಲೆ ಡಿಪೆಂಡ್ ಆಗುತ್ತದೆಂದು ಶ್ರೀಮಾನ್ ಆರ್. ಎಂ. ಪಾಟೀಲ್ ಅವರು ತಿಳಿಸಿದರು. ಎಷ್ಟು ಜನ ಎಸ್.ಪಿ.ಗಳು ಪ್ರಾಮಾಣಿಕರಾಗಿ ಕೆಲಸಮಾಡುತ್ತಾರೆಂಬುದು ನನಗೆ ಗೊತ್ತು. ಅಪ್ರಾಮಾಣಿಕರಾಗಿರುವವರು ಏನು ವರದಿಯನ್ನು ಬರೆಯುತ್ತಾರೆಂಬುದೂ ಸಹ ನನಗೆ ಗೊತ್ತು. ಇಂತಹ ಸಂದರ್ಭದಲ್ಲಿ ಎಸ್. ಪಿ. ಪ್ರೊಮೋಷನ್ ಕೊಡುತ್ತೇವೆಂದು ಹೇಳಿದರೆ ಕಾನ್‌ಫಿಡೆನ್ಷಿಯಲ್ ರಿಪೋರ್ಟಿನ ಆಧಾರದ ಕೆಳಮಟ್ಟದಲ್ಲಿರುವ ಅಧಿಕಾರಿಯನ್ನು ಕರಪ್ಷನ್‌ನಲ್ಲಿ ತೊಡಗುವಂತಹ ಒಂದು ಸಂದರ್ಭವನ್ನು ಈ ಸರ್ಕಾರದವರೇ ಸೃಷ್ಟಿ ಮಾಡುತ್ತಿದ್ದಾರೆ. ಒಂದುವೇಳೆ ಎಸ್. ಪಿ. ಅಪ್ರಾಮಾಣಿಕನಾದರೆ ಅವನು ವಿಮ್ಸ್ ಅಂಡ್ ಫ್ಯಾನ್ಸಿಗೊಳಗಾಗಿ ಕಳುಹಿಸಿದ ಒಂದು ಕಾನ್‌ಫಿಡೆನ್‌ಷಿಯಲ್ ವರದಿ ಸಹಾಯವಾಗುತ್ತದೆಂದು ಈ ಸರ್ಕಾರದವರು ನಿರ್ಣಯ ಮಾಡಿದ್ದಾರೆ. ಅದು ತಪ್ಪು. ಅದನ್ನು ಖಂಡಿತವಾಗಿ ಕೂಡಲೇ ಪುನರ್ವಿಮರ್ಶೆ ಮಾಡಬೇಕು. ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಒಬ್ಬ

(ಶ್ರೀ ಎಚ್. ಡಿ. ದೇವೇಗೌಡ)

ಹೆಡ್ ಕಾನ್‌ಸ್ಟೆಬಲ್ ತನ್ನ ತಾಯಿಯ ಹೆಸರಿನಲ್ಲಿ ಆಸ್ತಿಯನ್ನು ರಿಜಿಸ್ಟರ್ ಮಾಡಿಸಿಕೊಂಡಿದ್ದಾನೆ. ಸದರಿ ಅಪಾದನೆಯ ಮೇಲೆ ಈಗ ಅವನನ್ನು ಡಿಸ್‌ಮಿಸ್ ಮಾಡಿದ್ದಾರೆ. ಆದರೆ ಇಂದು ಅನೇಕ ಅಧಿಕಾರಿಗಳು ತಮ್ಮ, ಹೆಂಡತಿ, ಮಾವ, ಅತ್ತೆ ಅವರ ಹೆಸರಿನಲ್ಲಿ ಬೇಕಾದಷ್ಟು ಆಸ್ತಿ ಮಾಡಿದ್ದಾರೆ. ಅಂತಹವರನ್ನು ಎಷ್ಟು ಜನರನ್ನು ಡಿಸ್‌ಮಿಸ್ ಮಾಡಿದ್ದಾರೆಯೋ ಗೊತ್ತಿಲ್ಲ. ಸರ್ಕಾರಕ್ಕೆ ಇಂಥಾದ್ದನ್ನು ಇನ್‌ವೆಸ್ಟಿಗೇಷನ್ ಮಾಡುವುದಕ್ಕೆ ಧೈರ್ಯವಿದೆಯೇ ? ಈಗ ಆ ಪೋಲೀಸ್ ಕಾನ್‌ಸ್ಟೇಬಲ್ ಬೀದಿಯಲ್ಲಿ ಅಲೆಯುತ್ತಿದ್ದಾನೆ. ಮೈಸೂರು ಲ್ಯಾಂಡ್ ಮಾರ್ಟ್‌ಗೇಜ್ ಕೋ-ಆಪರೇಟಿವ್ ಬ್ಯಾಂಕಿನಲ್ಲಿ ಇವತ್ತಿನ ದಿವಸ ಸಾಲಕ್ಕೆ ಅಪ್ಲೈ ಮಾಡಿದ್ದಾನೆ. ಹೋಮ್ ಡಿಪಾರ್ಟ್‌ಮೆಂಟಿನ ಒಬ್ಬ ಅಂಡರ್-ಸೆಕ್ರೆಟರಿ ಈ ಅಧಿಕಾರಿಯನ್ನು ಕರೆದು ಹೀಗೆ ಹೇಳಿದರಂತೆ, ಅಸೆಂಬ್ಲಿ ಸದಸ್ಯರನ್ನು ಕರೆದುಕೊಂಡು ಬಂದರೆ ಎಷ್ಟೋ ಕೆಲಸವಾಗುವುದಿಲ್ಲ, ನಿಮಗೆ ಅಂಡರ್ ಸೆಕ್ರೆಟರಿಯವರನ್ನು ಹೇಗೆ ನೋಡಬೇಕು ಗೊತ್ತಿಲ್ಲ ಎಂದು ತಿಳಿಸಿದರು. ಆದರೆ ಅಂಡರ್ ಸೆಕ್ರೆಟರಿ ಒಬ್ಬ ಹೇಳಿದರೆ ಕೆಲಸವಾಗುತ್ತದೆ. ಆದ್ದರಿಂದ ಈ ಸರ್ಕಾರ ಜೀವಂತವಾಗಿದೆಯೇ ಎಂದು ಕೇಳುತ್ತೇನೆ. ನಾನು ಸೆಕ್ರೆಟರಿ ಬಗ್ಗೆ ಹೇಳುತ್ತಾ ಇಲ್ಲ, ಅಂಡರ್-ಸೆಕ್ರೆಟರಿ ಬಗ್ಗೆ ಹೇಳುತ್ತಾ ಇದ್ದೇನೆ. ಒಂದು ಮಾತನ್ನು ಹೇಳುತ್ತೇನೆ. ಸರ್ಕಾರದವರು ತಮ್ಮ ಇಲಾಖೆಗಳಲ್ಲಿರತಕ್ಕ ಮೆಷಿನರಿಗಳನ್ನು ಸರಿಯಾಗಿ ಪುಲಪ್ ಮಾಡದೆ ಇದ್ದರೆ ಆಡಳಿತದಲ್ಲಿ ಯಾವ ಪಕ್ಷವೇ ಇರಲಿ ಸರ್ಕಾರಕ್ಕೆ ಗೌರವ ತರಲಿಕ್ಕಿಲ್ಲವೆಂದು ನಾನು ಮಾನ್ಯ ಸಚಿವರಲ್ಲಿ ಸೂಚಿಸಲು ಇಷ್ಟಪಡುತ್ತೇನೆ.

ಇನ್ನೊಂದು ವಿಷಯ. ಪ್ರೊಹಿಬಿಷನ್ ಬಗ್ಗೆ ಒಂದು ಮಾತನ್ನಾಡಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಇವತ್ತು ಕೇಸುಗಳನ್ನು ಇಲ್ಲಿಸಿಟ್ ಡಿಸ್ಟಿಲೇಷನ್ ಮಾಡುವುದರಿಂದ ಹಾಕುತ್ತಾರೆ. ಇದರಲ್ಲಿ ಅವರು ಪ್ರೊಹಿಬಿಷನ್ನನ್ನು ಜಾರಿಗೆ ತಂದಿರುವ ಬಗ್ಗೆ ಅಂಕಿಅಂಶಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ಹುರುಳಿಲ್ಲವೆಂದು ಹೇಳುವುದಕ್ಕೆ ಇವತ್ತು ಅವರು ಕೊಟ್ಟಿರತಕ್ಕ ಅಂಕಿಅಂಶಗಳೇ ಸಾಕು ಎಂಬುದಾಗಿ ನಾನು ಹೇಳುತ್ತೇನೆ. ನಿಜವಾಗಿ ಪೋಲೀಸಿನವರು ಅವರ ಜೊತೆಯಲ್ಲಿ ಸೇರಿಕೊಂಡು ಸರ್ಕಾರದವರು ಪ್ರೊಹಿಬಿಷನ್ನನ್ನು ಸರಿಯಾದ ರೀತಿಯಲ್ಲಿ ಬಿಗಿಯಿಂದ ನಿಲ್ಲಿಸತಕ್ಕ ವ್ಯವಸ್ಥೆಗೆ ಆತಂಕ ಮಾಡುತ್ತಿರುವುದಾಗಿ ಕಂಡುಬರುತ್ತಿದೆ. ಅದು ಸರ್ಕಾರದವರು ಕೊಟ್ಟಿರತಕ್ಕ ಅಂಕಿಅಂಶಗಳಿಂದ ಗೊತ್ತಾಗುತ್ತದೆ ಎಂಬುದಾಗಿ ನಾನು ಹೇಳುತ್ತೇನೆ.

ಇವೊತ್ತಿನ ದಿವಸ ಎಸ್. ಪಿ. ಅವರು ; ತರುಣರು ಅವರು ಬಹಳ ಉತ್ಸಾಹದಿಂದ ಕೆಲಸಮಾಡುತ್ತಿದ್ದಾರೆ. ಅವರು ಈ ಪ್ರೊಹಿಬಿಷನ್ ರೈಡ್ ಮಾಡಬೇಕೆಂದು ಸುಮಾರು 3 ತಿಂಗಳ ಕಾಲ ಪ್ರಯತ್ನ ಮಾಡಿದರು. ಆದರೂ ಸಹ ಅವರ ಕೈಲ್ಲಿ ಒಂದು ಕೇಸನ್ನೂ ರೈಡ್ ಮಾಡುವುದಕ್ಕೆ ಆಗಲಿಲ್ಲ. ಅವರಿಗೆ ಇನ್‌ಫರ್‌ಮೇಷನ್ ಎಲ್ಲಿಂದ ಹೋಗುತ್ತದೆ, ಹೇಗೆ ಇನ್‌ಫರ್‌ಮೇಷನ್ ಕೊಡುತ್ತಾರೆಂಬುದನ್ನು ಪತ್ತೆ ಹಚ್ಚಿ ಅದನ್ನು ಕಂಟ್ರೋಲ್ ಮಾಡಬೇಕೆಂದು ಇನ್‌ಸ್ಪೆಕ್ಟರು, ಸಬ್-ಇನ್‌ಸ್ಪೆಕ್ಟರುಗಳನ್ನು ಮತ್ತು ಕಾನ್‌ಸ್ಟೇಬಲ್‌ಗಳನ್ನು ಕಳುಹಿಸಿ ರಿಜರ್ವ್ ಪೋಲೀಸ್ ಕಾವಲು ಹಾಕಿ ಪ್ರೊಹಿಬಿಷನ್ ಕೇಸನ್ನು ರೈಡ್ ಮಾಡಿದರು. ಸುಮಾರು 8 ಮನೆಗಳಲ್ಲಿ ಇಲ್ಲಿಸಿಟ್ ಡಿಸ್ಟಿಲೇಷನ್ ಕೇಸನ್ನು ಹಿಡಿದರು. ಹೀಗೆ ಒಬ್ಬ ಪ್ರಾಮಾಣಿಕನಾದ ಅಧಿಕಾರಿಯಿಂದ ಹತ್ತಾರು ಜನ ಅಧಿಕಾರಿಗಳು ಪ್ರಾಮಾಣಿಕರಾಗಿದ್ದಾರೆ. ಈ ಒಂದು ಪ್ರೊಹಿಬಿಷನ್ ನೀತಿ ಏನಿದೆಯೋ ಅದನ್ನು ಫಲಕಾರಿಯಾಗಿ ಮಾಡುವುದಕ್ಕಾಗುವುದಿಲ್ಲ. ಇದರಿಂದ 100ಕ್ಕೆ 90 ಜನ ಅನೀತಿಯುತವಾದ ರೀತಿಯಲ್ಲಿ ನಡೆಯತಕ್ಕ ಸನ್ನಿವೇಶದಲ್ಲಿ ಅದನ್ನು ಕಾರ್ಯಗತ ಮಾಡುವುದಕ್ಕೆ ಕಷ್ಟವಾಗುತ್ತದೆ. ಆದ್ದರಿಂದ ಇದರ ಬಗ್ಗೆ ಪುನರ್ ವಿಮರ್ಶೆ ಮಾಡಬೇಕು. ಈ ವಿಷಯವನ್ನು ಹೇಳಿದಾಗ ಶ್ರೀಮಾನ್ ರಾಚಯ್ಯನವರಿಗೆ ಮುಖ ಸ್ವಲ್ಪ ಪೆಚ್ಚಾಗುತ್ತದೆ. ಏತಕ್ಕೆಂದರೆ ಅವರು ಒಂದು ಸ್ಟೇಟ್‌ಮೆಂಟ್ ಅನ್ನು ಕೊಟ್ಟಿದ್ದಾರೆ, ಈ ಪ್ರೊಹಿಬಿಷನ್ ಪಾಲಿಸಿಯನ್ನು ಬದಲಾವಣೆ ಮಾಡುವುದಾದರೆ ನಾನು ರಾಜೀನಾಮೆಯನ್ನು ಕೊಡುವುದಕ್ಕೆ ಸಿದ್ಧನಾಗಿದ್ದೇನೆ ಎಂದು. ನಾವು ಈಗಾಗಲೇ ನೋಡಿರುವಂತೆ ಈ ಪ್ರೊಹಿಬಿಷನ್ ಪಾಲಿಸಿಯು ಕೆಲವು ಕಡೆ ಬದಲಾವಣೆಯಾಗಿದೆ. ನಮ್ಮ ದೇಶದಲ್ಲಿ ಈ ಪಾನನಿರೋಧ ನೀತಿ ವಿಫಲವಾಗಿದೆ. ಎಷ್ಟೋ ಜನ ಹರಿಜನರನ್ನು ಈ ಕಾನೂನನ್ನು ತಿಳಿದಿರತಕ್ಕವರು ಕೆಡಿಸುವುದನ್ನು ನಾನು ಬೇಕಾದರೆ ತೋರಿಸುತ್ತೇನೆ. ನಾನು ಏತಕ್ಕೆ ಇದನ್ನು ಹೇಳುತ್ತಿದ್ದೇನೆಂದರೆ ಸಮಾಜದಲ್ಲಿ ಇಂಥಾ ಒಂದು ಕಾನೂನಿನ ಮುಖಾಂತರ ಅದನ್ನು ಸಾಧನೆ ಮಾಡುತ್ತೇವೆಂದು ಹೇಳತಕ್ಕ ನೀತಿ ಏನಿದೆಯೋ ಅದು ತಪ್ಪು. ನಾವು ಮಾಡತಕ್ಕಂಥ ಕೆಲಸ ತಪ್ಪು ಇದು ಸರಿಯಲ್ಲ ಎನ್ನುವ ಭಾವನೆ ಜನಗಳಿಗೆ ಬರುವವರೆಗೂ ಇಂಥಾ ಒಂದು ಕಾನೂನನ್ನು ಮಾಡಿ ಅದನ್ನು ಅವರು ಡಿಸ್‌ರಿಗಾರ್ಡ್ ಮಾಡತಕ್ಕ ಪರಿಸ್ಥಿತಿಗೆ ಜನತೆಯನ್ನು ಎಳೆಯುವುದು ಸರಿಯಲ್ಲ. ಆದ್ದರಿಂದ ಇದರ ಬಗ್ಗೆ ಪುನರ್‌ವಿಮರ್ಶೆ ಮಾಡಬೇಕೆಂದು

ಹೇಳಿ ನನಗೆ ಮಾತನಾಡುವುದಕ್ಕೆ ಅಧ್ಯಕ್ಷರು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್. ಎಸ್. ಪಾಟೀಲ್ (ರಾಮದುರ್ಗ).—ಮಾನ್ಯ ಸಭಾಧ್ಯಕ್ಷರೇ, ನಮ್ಮ ರಾಜ್ಯಪಾಲರು ಈ ಸಭೆಯಲ್ಲಿ ಕನ್ನಡದಲ್ಲಿ ಭಾಷಣ ಮಾಡಿದ್ದನ್ನು ಸ್ವಾಗತಿಸಲು ನಮಗೆ ಎಷ್ಟು ಆನಂದವಾಯಿತೋ ಅದೇ ರೀತಿಯಲ್ಲಿ ನಮ್ಮ ಮಾನ್ಯ ಹಣಕಾಸಿನ ಮಂತ್ರಿಗಳಾದ ಶ್ರೀ ಮಾನ್ ಜತ್ತಿಯವರು ಈ ಸಭೆಯ ಮುಂದೆ ಇಟ್ಟಿರುವ 1964–65ನೇ ಸಾಲಿನ ಆಯವ್ಯಯ ಮುಂಗಡ ಪತ್ರವನ್ನು ಸ್ವಾಗತಿಸಲು ನನಗೆ ತುಂಬಾ ಆನಂದವೆನಿಸುತ್ತದೆ. ರಾಜ್ಯಪಾಲರ ಭಾಷಣದಲ್ಲಿ ಮುಂದಿನ ವರ್ಷ ಏನೇನು ಕೆಲಸ ಕಾರ್ಯಗಳನ್ನು ಸರ್ಕಾರದವರು ತೆಗೆದುಕೊಳ್ಳುತ್ತಾರೆಂದು ಹೇಳಿದ್ದಾರೆಯೋ ಅದನ್ನೇ ನಮ್ಮ ಮಾನ್ಯ ಹಣಕಾಸಿನ ಮಂತ್ರಿಗಳಾದ ಜತ್ತಿಯವರು ತಮ್ಮ ಆಯವ್ಯಯ ಮುಂಗಡ ಪತ್ರದಲ್ಲಿ ಹೇಳಿದ್ದಾರೆ, ಈ ಅಲ್ಪ ಉಳಿತಾಯದ ಮುಂಗಡ ಪತ್ರವನ್ನು ಕಂಡು ನಾವು ಹಿಗ್ಗ ಬೇಕಾಗಿಲ್ಲ. ಈ ಮುಂಗಡ ಪತ್ರದಲ್ಲಿ ಪ್ರಾರಂಭದ ಸಿಲ್ಕನ್ನು ಕೊನೆಯ ಸಿಲ್ಕನ್ನ ನೋಡುವುದಾದರೆ ನಮ್ಮ ರಾಜ್ಯದ ಆರ್ಥಿಕ ಸ್ಥಿತಿಯು ಕಳವಳಕಾರಿಯಾಗಿದೆ ಎಂಬುದನ್ನು ಎತ್ತಿ ತೋರಿಸುತ್ತದೆ. ಈ ವರ್ಷ ಇದರಲ್ಲಿ ತೋರಿಸಿರತಕ್ಕ ಕೊರತೆಯನ್ನು ಯಾವರೀತಿ ತುಂಬಿಕೊಳ್ಳಬೇಕು ಎನ್ನುವ ಸೂಚನೆಯನ್ನು ಶ್ರೀಮಾನ್ ಜತ್ತಿಯವರು ಮಾಡಿಲ್ಲ. ಈ ತೊಂದರೆಯನ್ನು ಭಾರತ ಸರ್ಕಾರದವರ ತಾತ್ಕಾಲಿಕ ಹಣದ ಬೇಡಿಕೆಯ ಸಹಾಯದಿಂದ ತುಂಬಿಕೊಳ್ಳುವ ಮಾತನ್ನು ಎತ್ತಿ ತೋರಿಸಿದ್ದಾರೆ. ನಮ್ಮ ದೇಶದಲ್ಲಿ ಮೂರನೇ ಪಂಚವಾರ್ಷಿಕ ಯೋಜನೆಯನ್ನು ಕಾರ್ಯಗತ ಮಾಡಲು ಕೇಂದ್ರ ಸರ್ಕಾರದವರು 250 ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ. ಅದರ ಬಗ್ಗೆ ನಮ್ಮ ರಾಜ್ಯ ಸರ್ಕಾರದ ಪಾಲು ಬೇರೆ ಕೊಡಬೇಕಾಗಿರುವುದರಿಂದ ಅದಕ್ಕೆ ಸಂಬಂಧಪಟ್ಟಹಾಗೆ 50–60 ಕೋಟಿ ರೂಪಾಯಿಗಳ ಕೊರತೆ ಬೀಳುತ್ತದೆ. ಈ ಕೊರತೆಯನ್ನು ತುಂಬುವುದಕ್ಕೆ ನಿರ್ಧಿಷ್ಟವಾದ ಸೂಚನೆಗಳನ್ನು ಇದರಲ್ಲಿ ಕೊಡಬೇಕಾಗಿತ್ತು. ಆದರೆ ಅದನ್ನು ಇದರಲ್ಲಿ ಕೊಟ್ಟಿಲ್ಲ. ಇತರ ರಾಜ್ಯಗಳು ಯೋಜನೆಗಳಲ್ಲಿ ಹೆಚ್ಚು ಹಣವನ್ನು ಖರ್ಚು ಮಾಡತಕ್ಕ ಶಕ್ತಿ ಸಾಮರ್ಥ್ಯವನ್ನು ಪಡೆದು ಕೊಂಡಿರುವಾಗ ಮೈಸೂರು ರಾಜ್ಯದವರು ಮಾತ್ರಾ ಮುಗ್ಗಟ್ಟನ್ನು ಎದುರಿಸಲು ಕಾರಣವೇನು? ನಾನು ತಿಳಿದು ಕೊಂಡಿರುವ ಹಾಗೆ ನಮ್ಮ ಹಣಕಾಸಿನ ಸಚಿವರು ಹೊಸ ತೆರಿಗೆಗಳನ್ನು ಹೇರುವುದಿಲ್ಲ ಎಂದು ಹೇಳಿದ್ದಾರೆ. ಮತ್ತು ಈಗ ಹಾಲಿ ಇರತಕ್ಕ ತೆರಿಗೆಗಳನ್ನು ವಸೂಲು ಮಾಡುವುದರಲ್ಲಿ ಪ್ರಭಾವೀ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ, ಅನಾವಶ್ಯವಾದ ಖರ್ಚುಗಳನ್ನು ವರ್ಜಿಸುತ್ತೇವೆ, ಅವಶ್ಯಕವಾದ ಖರ್ಚುಗಳನ್ನು ಮುಂದುವರಿಸುತ್ತೇವೆ, ಕೆಲವೊಂದು ಹಣವನ್ನು ಉಳಿಸುತ್ತೇವೆ, ಕೆಲವೊಂದು ಗಳಿಸುತ್ತೇವೆ ಎನ್ನುವುದನ್ನು ಎತ್ತಿ ತೋರಿಸಿ ಜನತೆಯನ್ನು ಕರಭಾರದಿಂದ ಮುಕ್ತರನ್ನಾಗಿ ಮಾಡಿದ್ದಾರೆ. ಹಿಂದಿನ ಅಧಿವೇಶನದಲ್ಲಿ ಹಿಂದಿನ ವರ್ಷದ ಕೊರತೆಯನ್ನು ತುಂಬಿ ಕೊಳ್ಳುವುದರ ಸಲುವಾಗಿ ಮೂರು ತೆರಿಗೆಗಳ ತಿದ್ದುಪಡಿಗಳನ್ನು ಕೆಲವನ್ನು ಈ ಸಭೆಯಲ್ಲಿ ತಂದು ಕೆಲವೊಂದು ಆದಾಯವನ್ನು ತಂದುಕೊಂಡರು. ಈಗ ನಮ್ಮ ಮುಂದೆ ಇಟ್ಟಿರುವ ಮುಂಗಡ ಪತ್ರದಲ್ಲಿ ನೌಕರರಿಗೆ ತುಟ್ಟಿ ಭತ್ಯವನ್ನು ಹೆಚ್ಚಿಸುವುದು, ವೃದ್ಧಾಪ್ಯವೇತನ, ಕುಟುಂಬವೇತನ ಇತ್ಯಾದಿ ಸೌಲಭ್ಯಗಳನ್ನು ಕೊಡುವುದಾಗಿ ತಿಳಿಸಿದ್ದಾರೆ. ಆದರೆ ಅವುಗಳಿಗೆ ಈ ಮುಂಗಡ ಪತ್ರದಲ್ಲಿ ಹಣವನ್ನು ಇಟ್ಟಿಲ್ಲ. ಈ ಬಾಬುಗಳಿಗೆ ಯಾವ ರೀತಿ ಹಣವನ್ನು ಒದಗಿಸುತ್ತಾರೆ ಎನ್ನುವ ವಿಷಯವನ್ನು ಇದರಲ್ಲಿ ಕಾಣಿಸಿಲ್ಲ. ನೀರಾವರಿ ಯೋಜನೆ, ವಿದ್ಯುಚ್ಛಕ್ತಿಯ ಉತ್ಪಾದನೆ, ಮತ್ತು ವ್ಯವಸಾಯ ಇವುಗಳ ಸಲುವಾಗಿ ಸ್ವಲ್ಪ ಹೆಚ್ಚು ಪ್ರಗತಿಯನ್ನು ಸಾಧಿಸಬಹುದು ಎಂಬುದನ್ನು ಎತ್ತಿ ತೋರಿಸಿದ್ದಾರೆ. ವಿದ್ಯುಚ್ಛಕ್ತಿಯ ಉತ್ಪಾದನೆ ಆದಷ್ಟು ಬೇಗ ಆಗಲಿ ಎಂದು ನಾನು ದೇವರನ್ನು ಬೇಡಿಕೊಳ್ಳುತ್ತೇನೆ. ಆಹಾರ ಧಾನ್ಯಗಳ ಬೆಲೆಗಳು ಹೆಚ್ಚಾಗಿದ್ದರೂ ಕೂಡ, ಆಹಾರ ಧಾನ್ಯಗಳ ಕೊರತೆ ಮತ್ತು ಬೆಲೆಗಳ ಏರಿಕೆ ಇವುಗಳು ವಿವಿಂಚನಾತ್ಮಕವಾಗಿವೆ. ಎಂದು ಆರ್ಥಿಕ ಮಂತ್ರಿಗಳೇ ಹೇಳುವಾಗ ಟೀಕೆ ಅನಾವಶ್ಯಕ.

ಇನ್ನು ಮೂರನೆ ಪಂಚವಾರ್ಷಿಕ ಯೋಜನೆಯಲ್ಲಿ 32 ದೊಡ್ಡ ನೀರಾವರಿ ಯೋಜನೆಗಳು ಮತ್ತು ಮಧ್ಯಮ ವರ್ಗದ ನೀರಾವರಿ ಯೋಜನೆಗಳು ಸೇರ್ಪಡೆಯಾಗಿವೆ ಎಂದು ಕಾಣುತ್ತದೆ. ಆ ಪೈಕಿ 25 ಯೋಜನೆಗಳನ್ನು ಎರಡನೇ ಪಂಚವಾರ್ಷಿಕ ಯೋಜನೆಯಿಂದ ಮುಂದುವರಿಸಿಕೊಂಡು ಬಂದಿದ್ದಾರೆ. ಇದರಲ್ಲಿ ಘಟಪ್ರಭಾ ಯೋಜನೆ ಬಹಳ ಹಳೆಯದು. ನಾನು ಕಾಲೇಜಿಗೆ ಹೋಗುವುದಕ್ಕೆ ಮುಂಚೆಯೇ ಘಟಪ್ರಭಾ ಯೋಜನೆಗೆ ಅಸ್ತಿಭಾರವನ್ನು ಹಾಕಿದ್ದನ್ನು ನಾನು ಕೇಳಿದ್ದೇನೆ. ಆದರೂ ಸಹ ಇಲ್ಲಿಯವರೆಗೂ ಅದು ಕಾರ್ಯಗತ ಆಗದೇ ಇರುವುದಕ್ಕೆ ಕಾರಣವನ್ನು ತಿಳಿಯದಂತಾಗಿದೆ. ಪ್ರತಿವರ್ಷ ಅದಕ್ಕೆ 20–25 ಲಕ್ಷರೂಪಾಯಿಗಳನ್ನು ಬಡ್ಜೆಟ್ಟಿನಲ್ಲಿ ಒದಗಿಸಿರುತ್ತಾರೆ. ಆ ಹಣವನ್ನು ಅಲ್ಲಿ ಕೆಲಸ ಮಾಡತಕ್ಕ ನೌಕರರ ಸಂಬಳಕ್ಕೂ ಮತ್ತು ಅವರು ಓಡಾಡತಕ್ಕ ಜೀಪಿನ ಪೆಟ್ರೋಲಿಗೂ ಖರ್ಚು ಮಾಡುತ್ತಾರೆ. ಹೀಗಾಗಿ ಅಲ್ಲಿ ಒಂದು ಇಂಚು ಕೆಲಸ ಕೂಡ ಆಗಿರುವುದಿಲ್ಲ

(ಶ್ರೀ ಆರ್. ಎಸ್. ಪಾಟೀಲ್)

ಎಂಬುದು ನಮಗೆ ಕಂಡು ಬರುತ್ತದೆ. ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಮುಧೋಳದ ಹತ್ತಿರ ಇರುವ ನನ್ನ ಹೊಲದಲ್ಲಿ ಇರುವ ಕಾಲುವೆ ಈಗ 5-6 ವರ್ಷಗಳಿಂದ ಹಾಗೆಯೇ ಇದೆ. ಅದ ರಲ್ಲಿ ನೀರು ಮಾತ್ರ ಬರುವುದಿಲ್ಲ. ಮಲಪ್ರಭಾ ಮತ್ತು ಕೃಷ್ಣಾ ಯೋಜನೆಗಳಿಗೆ ತಾಂತ್ರಿಕ ಅನು ಮತಿ ಸಿಕ್ಕಿದೆ, ಆ ಕಾರ್ಯವನ್ನು ಪ್ರಾರಂಭ ಮಾಡುತ್ತೇವೆ ಎಂದು ಮಾನ್ಯ ಹಣಕಾಸಿನ ಸಚಿವರು ತಮ್ಮ ಬಜೆಟ್ ಭಾಷಣದಲ್ಲಿ ಹೇಳಿದ್ದರು.

ನಾವು ಇಲ್ಲಿ ನೋಡುತ್ತ ಇರುವ ಪ್ರಕಾರ ಅಲ್ಲಿ ಪ್ರಾರಂಭದ ಕೆಲಸಗಳು ಯಾವುವೂ ಆಗುತ್ತಾ ಇಲ್ಲ. ಅಲ್ಲ ಕೆಲವು ಕಟ್ಟಡಗಳು ಆಗುತ್ತಿರುವುದನ್ನೂ ಸ್ವಲ್ಪ ಚಾನಲ್ ಮಾತ್ರ ತೆಗೆದಿರುವುದನ್ನೂ ನೋಡಬಹುದು.

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಸದಸ್ಯರು ಆ ಭಾಗದಿಂದ ಬರುವವರು. ಅಲ್ಲಿ ಕೆಲಸವನ್ನು ಪ್ರಾರಂಭ ಮಾಡಿದ್ದೇವೆ. ಕಟ್ಟಡಗಳನ್ನು ಕಟ್ಟಲು 50 ಲಕ್ಷರೂಪಾಯಿಗಳನ್ನು ಖರ್ಚು ಮಾಡಿದ್ದೇವೆ.

ಶ್ರೀ ಆರ್. ಎಸ್. ಪಾಟೀಲ್.—ಕಟ್ಟಡಗಳ ಕೆಲಸ ಆಗಿದೆ. ಆದರೆ ಕಟ್ಟೆಯ ಕೆಲಸ ಆಗಿಲ್ಲ ಅಲ್ಲಿಗೆ ಒದಗಿಸುವ ಹಣವೆಲ್ಲ ಇಂಜಿನಿಯರು, ಸಿಬ್ಬಂದಿ, ಇವರ ಪಗಾರ, ಮೋಟಾರುಗಳಿಗೆ ಪೆಟ್ರೋಲ್ ವಗೈರೆಗಳಿಗಾಗಿ ಹಣ ಖರ್ಚಾಗುತ್ತಿದ. ಇದರ ಸಲುವಾಗಿ ಮಾತ್ರ ಖರ್ಚಾಗುತ್ತಿದೆ ಎಂದು ಹೇಳ ಬಯಸುತ್ತೇನೆ.

ಸಭಾಪತಿಯವರು :—ಮಾನ್ಯ ಸದಸ್ಯರು ನಾಳೆಯ ದಿನ ತಮ್ಮ ಭಾಷಣವನ್ನು ಮುಂದುವರಿಸ ಬಹುದು. ಸಭೆಯು ಈಗ ಎದ್ದು ಮತ್ತೆ ನಾಳೆ ಬೆಳಿಗ್ಗೆ ಎಂಟೂವರೆ ಗಂಟೆಗೆ ಸೇರುತ್ತದೆ.

The House adjourned at Thirty Minutes past Five of the Clock to meet again at Thirty Minutes past Eight of the Clock on Saturday, the 7th March 1964.

WD 2485—GPB—900—8-5-64